
ರಂಜನೆ ಬೋಧನೆ ಪ್ರಚೋದನೆ

ಲಂಕೇಶ್


ಜೂನ್ 2, 2010 ರೂ. 12/-

ಕುವೆಂಪು ವಿವಿಯಲ್ಲಿ ಪಂಚಾಚಾರ್ಯ ಪೀಠ









ಶೀಘ್ರದಲ್ಲೇ ಬಿಡುಗಡೆ

3 ಈಡಿಯಟ್ಸ್ ಸೆಕ್ಸ್ ಸಿಡಿ?



ಯು-2 ಆನಂದ ಹೊಸ ನಿತ್ಯಾನಂದ!






ದೇಹಕ್ಕೆ ಬಿದ್ದ ಪೆಟ್ಟು ಮೆದುಳಿಗೇಕೆ ಗೊತ್ತಾಗುತ್ತಿಲ್ಲ?



ಇದೊಂದು ಅಪಾಯಕಾರಿ ವಿದ್ಯಮಾನ ಎಂದು ಬಲ್ಲ ಈ ದೇಶದ ಬ್ರೌನ್ ಸಾಹೇಬರುಗಳು ಮತ್ತು ಅಂತಾರಾಷ್ಟ್ರೀಯ ಬಿಳಿ ಸಾಹೇಬರುಗಳು ಮೆದುಳನ್ನು ದೇಹದಿಂದ ಬೇರೆ ಮಾಡಲು ಹಲವು ಕುತಂತ್ರಗಳನ್ನು ಹೆಣೆಯುತ್ತಿದ್ದಾರೆ. ಅದರಲ್ಲಿ ಅತಿಮುಖ್ಯವಾದದ್ದೇ ಪ್ರತಿ ದಮನಿತ ಸಮುದಾಯಗಳಲ್ಲಿ ಒಂದು ಮೇಲ್‌ಸ್ತರವನ್ನು ಹುಟ್ಟುಹಾಕಿ ಅದನ್ನು ತನ್ನ ವಕ್ತಾರರನ್ನಾಗಿಸಿಕೊಳ್ಳುವುದು.





▸ ಶಿವಸುಂದರ್

ದೇಹದಲ್ಲಿ ಭೂಮಿಯನ್ನು ಸ್ಪರ್ಶ ಮಾಡುವ ಅಂಗ ಕಾಲು. ಆದರೆ ಆ ಸ್ಪರ್ಶದ ಅನುಭೂತಿ ಮತ್ತು ಸ್ಪರ್ಶ ಮಾಡಿದ ಭೂಮಿಯ ವಿವರಗಳು ನರಮಂಡಲದ ಮೂಲಕ ಮೆದುಳನ್ನು ತಲುಪಿ ಅವೆಲ್ಲಾ ಗೊತ್ತಾಗುವುದು ಹಾಗೂ ಅರಿವಿಗೆ ಬರುವುದು ಮೆದುಳಿನಿಂದ. ಆದರೆ ಮೆದುಳು ಮತ್ತು ಕಾಲಿಗೆ ಸಂಬಂಧ ಏರ್ಪಡಿಸುವ ನರ ಮಂಡಲ ಕೆಲಸ ಮಾಡದಿದ್ದರೆ ಅಥವಾ ಯಾವುದೇ ಕಾರಣಕ್ಕೆ ಮೆದುಳು ಮತ್ತು ಕಾಲಿನ ಸಂಬಂಧಗಳು ಮುರಿದು ಬಿದ್ದರೆ ಕಾಲು ಕತ್ತರಿಸಿದರೂ ಗೊತ್ತಾಗುವುದಿಲ್ಲ. ಕತ್ತರಿಸಿದ ಅವಯವಗಳಿಂದಾಗಿ ನಿಧಾನಕ್ಕೆ ದೇಹವೂ ಸಾಯುತ್ತದೆ. ಮೆದುಳೂ ಸಾಯುತ್ತದೆ. ಏಕೆಂದರೆ ಮೆದುಳಿಗೆ ವಿಶೇಷ ಕಾರ್ಯ ವಿಭಜನೆಯಿದ್ದರೂ ಅದೂ ಸಹ ಮೂಲಭೂತವಾಗಿ ದೇಹದ ಇತರ ಭಾಗಗಳಂತೆ ಒಂದು ಅವಯವವೇ ಆದ್ದರಿಂದ ದೇಹದ ಇತರ ಅವಯವಗಳು ಸಾಯುತ್ತಿದ್ದಂತೆ ಅದೂ ಸಾಯುತ್ತದೆ. ಕೆಲವೊಮ್ಮೆ ದೇಹದ ಇತರ ಅವಯವಗಳ ರಕ್ಷಣೆ ಇಲ್ಲದ ಕಾರಣಕ್ಕೂ ಮೆದುಳು ಸಾಯುತ್ತದೆ.

ಸಮಾಜದಲ್ಲೂ ದೇಹದ ರೀತಿ ಕೆಲಸ ಮಾಡುವ ಶ್ರಮಜೀವಿಗಳಿಗೂ ಮತ್ತು ಮೆದುಳಿನಂತೆ ಕೆಲಸ ಮಾಡುವ ಬುದ್ಧಿಜೀವಿಗಳಿಗೂ ಸಂಬಂಧವಿರುತ್ತದೆ. ಸಾಮಾಜಿಕ ಚಳವಳಿಗಳು ನರಮಂಡಲಗಳಂತೆ ಸಮಾಜದಲ್ಲಿ ಮಾನವೀಯ ಸಂವೇದನೆ ಪರಿಚಲನೆ ಆಗುವಂತೆ ನೋಡಿಕೊಳ್ಳುತ್ತದೆ. ಸಮಾಜದಲ್ಲಿ ಈ ವ್ಯವಸ್ಥೆ ಚೆನ್ನಾಗಿದ್ದಷ್ಟು ಆ ಸಮಾಜ ಆರೋಗ್ಯಕರವಾಗಿರುತ್ತದೆ. ಸಮಾಜಮುಖಿಯಾಗಿ ನಿಧಾನವಾಗಿಯಾದರೂ ಸಮಾನತೆಯೆಡೆಗೆ ಸಾಗುತ್ತಿರುತ್ತದೆ.

ಆದರೆ ಜಾಗತೀಕರಣದ ಈ ಕಾಲಘಟ್ಟದಲ್ಲಿ ಸಮಾಜದ ಮೆದುಳಿಗೂ ಮತ್ತು ಕಾಲಿಗೂ ಸಂಬಂಧವೇ ಹರಿದುಹೋಗುತ್ತಿದೆ. ಕಾಲಿಗೆ ಬಿದ್ದ ಪೆಟ್ಟು ಮೆದುಳಿಗೆ ತಿಳಿಯುತ್ತಲೇ ಇಲ್ಲ. ಇದು ಪ್ರತಿ ವ್ಯಕ್ತಿಯಲ್ಲೂ ಸಂಭವಿಸುತ್ತಿದೆ. ಸಮಾಜದಲ್ಲೂ ಸಂಭವಿಸುತ್ತಿದೆ. ಏಕೆಂದರೆ ವ್ಯಕ್ತಿಯ ಮತ್ತು ಸಮಾಜದ ದೇಹ ದೇಸೀಯಾಗಿದ್ದರೂ, ಮೆದುಳು ವಸಾಹತೀಕರಣಗೊಳ್ಳುತ್ತಿದೆ. ಬ್ರಾಹ್ಮಣೀಕರಣಗೊಳ್ಳುತ್ತಿದೆ. ಪ್ರಾಯಶಃ ಇದು ಜಾಗತೀಕರಣದ ಕಾಲಘಟ್ಟದಲ್ಲಿ ಬಂಡವಾಳಶಾಹಿ ಸಮಾಜದ ಮೇಲೆ ಮತ್ತು ವ್ಯಕ್ತಿಯ ಮೇಲೆ ಗಳಿಸಿರುವ ಅತಿ ದೊಡ್ಡ ವಿಜಯವೆಂದರೂ ತಪ್ಪಲ್ಲ.

ಹಾಗೆ ನೋಡಿದರೆ, ಇಂದು 1960ರ ಕಾಲಘಟ್ಟಕ್ಕಿಂತಲೂ ಭೀಕರವಾದ ಬಿಕ್ಕಟ್ಟನ್ನು ಬಡಜನತೆ ಹಾಗೂ ಬಹುಪಾಲು ಸಮಾಜ ಎದುರಿಸುತ್ತಿದೆ. 60ರ ದಶಕಕ್ಕಿಂತ ಹೆಚ್ಚಿನ ಅಸಮಾನತೆಯನ್ನೂ, ಭವಿಷ್ಯದ ಬಗೆಗೆ ಆತಂಕವನ್ನೂ, ದಾರುಣ ವರ್ತಮಾನವನ್ನೂ ಸಮಾಜ ಅನುಭವಿಸುತ್ತಿದೆ. ಆದರೆ 60ರ ದಶಕದಲ್ಲಿ ಕನಿಷ್ಟ ಸಾಮಾಜಿಕ ಕಳಕಳಿಯೂ ಒಂದು ದೊಡ್ಡ ಸಾಮಾಜಿಕ ಚಳವಳಿಯಾಗುತ್ತಿತ್ತು. ಆದರೆ ಈಗ ಪರಿಸ್ಥಿತಿ 60ಕ್ಕಿಂತಲೂ ಭೀಕರವಾಗುತ್ತಿದ್ದರೂ ಅವು ದೊಡ್ಡ ಚಳವಳಿಯನ್ನು ಹುಟ್ಟಹಾಕುತ್ತಿಲ್ಲವೇಕೆ?

ಇದಕ್ಕೆ ಒಂದು ಅತಿಮುಖ್ಯ ಕಾರಣ ವಿಶ್ವಾಸ ದ್ರೋಹಗಳು ಹಾಗೂ ಅದು ಹುಟ್ಟಹಾಕಿರುವ ವಿಶ್ವಾಸದ ಬಿಕ್ಕಟ್ಟು. ಆದರೆ ಅದರಷ್ಟೆ ಮುಖ್ಯವಾದ ಒಂದು ವಿದ್ಯಮಾನವನ್ನು ಹಾಗು ಪ್ರಕ್ರಿಯೆಗಳನ್ನು ಜಾಗತೀಕರಣ ಸಮಾಜದಲ್ಲಿ ಹುಟ್ಟಹಾಕಿದೆ. ಅದು ವಿಶ್ವಾಸದ ಬಿಕ್ಕಟ್ಟಿಗಿಂತಲೂ ದಾರುಣವಾದ ಸಂದರ್ಭವನ್ನು ಹುಟ್ಟುಹಾಕುತ್ತಿದೆ. ಅದೇ ಈ ಕಾಲು ಮತ್ತು ಮೆದುಳಿನ ಸಂಬಂಧವನ್ನು ಕಡಿಯುವ ಪ್ರಕ್ರಿಯೆ.

ಕಳೆದ 20 ವರ್ಷಗಳ ಜಾಗತೀಕರಣದ ರೂಪದಲ್ಲಿರುವ ನವಬಂಡವಾಳಶಾಹಿ ಆಕ್ರಮಣವನ್ನು ನೋಡಿದರೆ ಅದು ತಾನು ತನ್ನ ಲೂಟಿಯ ಪ್ರಕ್ರಿಯೆ ಸಮಾಜದಲ್ಲಿ ತನ್ನ ವಿರುದ್ಧ ಹುಟ್ಟಹಾಕುವ ಪ್ರಕ್ರಿಯೆಯನ್ನು ಸಾಕಷ್ಟು ಅಧ್ಯಯನ ಮಾಡಿರುವುದು ಸ್ಪಷ್ಟವಾಗುತ್ತದೆ. ಅದಕ್ಕಾಗಿಯೇ ಅದು ಹಲವಾರು ಅಂತರರಾಷ್ಟ್ರೀಯ ಸಂಸ್ಥೆಗಳನ್ನೂ ಹುಟ್ಟಹಾಕಿದೆ. ಅದರ ಮೂಲಕ ಸಾಕಷ್ಟು "Conflict Management Studies" ಗಳನ್ನೂ ನಡೆಸಿದೆ. ಜಗತ್ತಿನ ಮಟ್ಟದಲ್ಲಿ ಕ್ರಾಂತಿಗಳು ಸಂಭವಿಸಿದ ಪ್ರಕ್ರಿಯೆಗಳನ್ನೂ, ಒಬ್ಬ ಶೋಷಿತ ಮತ್ತು ದಮನಿತ ವ್ಯಕ್ತಿ ಕ್ರಾಂತಿಕಾರಿಯಾಗಿ ಪರಿವರ್ತನೆಯಾಗುವ ಸಂದರ್ಭವನ್ನೂ ಮತ್ತು ಪ್ರಕ್ರಿಯೆಯನ್ನೂ ಈ ಸಂಸ್ಥೆಗಳು ಕೂಲಂಕಷವಾಗಿ ಅಧ್ಯಯನ ಮಾಡಿವೆ.

ಈ ಅಧ್ಯಯನಗಳು ಮಾರುಕಟ್ಟೆ ಶಕ್ತಿಗಳಿಗೆ (ಅರ್ಥಾತ್ ಅಂತರರಾಷ್ಟ್ರೀಯ ಬಂಡವಾಳಶಾಹಿಗೆ-ಸಾಮ್ರಾಜ್ಯಶಾಹಿಗಳಿಗೆ) ಹಲವು ಪ್ರಮುಖ ಸಾರಾಂಶವನ್ನು ಮತ್ತು ಸಲಹೆಗಳನ್ನೂ ನೀಡಿವೆ. ಅದರಲ್ಲಿ ತಾನು ಮಾಡುತ್ತಿರುವ ಲೂಟಿಯನ್ನು, ಸುಲಿಗೆಯನ್ನು, ದಮನವನ್ನು ಜನ ದಮನವೆಂದು ಭಾವಿಸದಂತೆ ನೋಡಿಕೊಳ್ಳುವುದು ಅತಿಮುಖ್ಯ ವಾದದ್ದು. ಅಂದರೆ ಕಾಲಿಗೆ ಪೆಟ್ಟು ಬಿದ್ದರೂ, ಹೊಟ್ಟೆಗೆ ಚಾಕುವೇ ಹಾಕಿದರೂ ಮೆದುಳು ಅದರ ನೋವನ್ನು ದಾಖಲಿಸದಂತೆ ದೇಹಕ್ಕೂ ಮೆದುಳಿಗೂ ಇರುವ ಸಂಬಂಧವನ್ನು ಕಡಿದುಹಾಕುವುದು. ನೋವನ್ನೂ ನೋವೆಂದೇ ಗುರುತಿಸದ ವ್ಯಕ್ತಿ ನೋವಿನ ವಿರುದ್ಧ ಬಂಡೇಳುವ ಸಂದರ್ಭವೇ ಬರುವುದಿಲ್ಲವಲ್ಲ. ಕಾರ್ಲ್‌ಮಾರ್ಕ್ಸ್ ಹೇಳುವಂತೆ "Cognition of necessity is freedom"- ಅಂದರೆ ತನ್ನ ಪರಿಸ್ಥಿತಿ ಮತ್ತು ದಮನದ ಸಂದರ್ಭವನ್ನು ಅರ್ಥಮಾಡಿಕೊಳ್ಳುವುದೇ ಸ್ವಾತಂತ್ರ್ಯ. ಜಾಗತೀಕರಣವೆಂಬ ಬಂಡವಾಳಶಾಹಿಯ ಹೊಸ ತಂತ್ರ ಜನರ ಮೇಲಿನ ತನ್ನ ಸಮರದಲ್ಲಿ ಪ್ರಮುಖವಾಗಿ ದಾಳಿ ಮಾಡುತ್ತಿರುವುದು ದಮನದ ಅರಿವಿನ ಮೇಲೆ! ಏಕೆಂದರೆ ದಮನದ ಅರಿವೇ ಪ್ರತಿರೋಧಕ್ಕೆ ಮೊದಲ ಪ್ರೇರಣೆ. ಅದನ್ನೇ ಇಲ್ಲವಾಗಿಸಿದರೆ ಪ್ರತಿರೋಧ ಹುಟ್ಟುವುದೇ ಇಲ್ಲ.

ಇದನ್ನು ಸಾಧಿಸಲು ತನ್ನ ಪದಪ್ರಯೋಗಗಳಿಂದ ಮೊದಲುಗೊಂಡು ಹಲವು ಬಗೆಯ ಬದಲಾವಣೆಯನ್ನು ಈ ಬಂಡವಾಳಶಾಹಿಗಳು ಮಾಡಿಕೊಂಡಿದ್ದಾರೆ. ಮೊಟ್ಟಮೊದಲಿಗೆ ಅವು ತಮ್ಮನ್ನು ತಾವು ಬಂಡವಾಳಶಾಹಿ ಎಂದೇ ಗುರುತಿಸಿಕೊಳ್ಳುವುದಿಲ್ಲ. ಅವನ್ನು ಅತ್ಯಂತ ಗೌರವಾನ್ವಿತವಾಗಿ ಈಗ "ಮಾರುಕಟ್ಟೆ ಶಕ್ತಿಗಳು" ಎಂದು ಕರೆಯಲಾಗುತ್ತಿದೆ ಮತ್ತು ಅವುಗಳು ಜನರನ್ನು ಸುಲಿಗೆ ಮಾಡಲು ಅನುಸರಿಸುತ್ತಿರುವ ಲೂಟಿ ಪ್ರಕ್ರಿಯೆಯನ್ನು "ಸುಧಾರಣೆ" ಎಂದು ಕರೆಯಲಾಗುತ್ತಿದೆ.

ಇದಲ್ಲದೆ ಬಡತನವೆಂಬುದು ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಸಕಲರಿಗೂ ಸೇರಬೇಕಾದ ಸಂಪನ್ಮೂಲಗಳನ್ನು ಕೆಲವರೇ ಲೂಟಿ ಹೊಡೆಯುತ್ತಿರುವುದರಿಂದ ಸಂಭವಿಸುತ್ತಿರುವ ರಾಜಕೀಯ ಮತ್ತು ಆರ್ಥಿಕ ವಿದ್ಯಮಾನ ಎಂಬುದನ್ನು ಮರೆಮಾಚಲು ಅವರು ಬಡತನವೆಂಬುದು "ಪ್ರತಿಭೆಯ ಕೊರತೆ" ಎಂಬ ವಾದವನ್ನು ಮುಂದಿಡುತ್ತಾರೆ. ಇದನ್ನು "ಸಾಬೀತು" ಮಾಡಲು ಬಡವರಲ್ಲಿ ಮತ್ತು ದಲಿತರಲ್ಲಿ "ಪ್ರತಿಭಾನ್ವಿತರಾದ" ಕೆಲವರನ್ನು ಮಾತ್ರ ಗುರುತಿಸಿ ಅವರನ್ನು ತನ್ನ ಪರಿವಾರದ ಭಾಗವಾಗಿಸಿಕೊಳ್ಳುತ್ತಾರೆ. ಅವರನ್ನು ತನ್ನ ಸಾಮಾಜಿಕ ಬದ್ಧತೆಯ ಶೋಕೇಸ್‌ಗಳನ್ನಾಗಿ ತೋರಿಸುವುದು ಮಾತ್ರವಲ್ಲದೆ ಉಳಿದ ಎಲ್ಲರನ್ನೂ ಸುಲಿಗೆ ಮಾಡಿ ಕೆಲವರನ್ನು ಮಾತ್ರ ಸಂಪನ್ನರಾಗಿ ಮಾಡುವ ಬಂಡವಾಳಶಾಹಿ ತರ್ಕಕ್ಕೆ ಈ "ಮಾಜಿ ದಮನಿತ"ರನ್ನು ಕತ್ತಿಯನ್ನಾಗಿಯೂ ಮತ್ತು ಗುರಾಣಿಯನ್ನಾಗಿಯೂ ಬಳಸಿಕೊಳ್ಳುತ್ತಾರೆ. ಅಲ್ಲದೆ ಆ ಮೂಲಕ ಬಂಡವಾಳಶಾಹಿಯ ವಿರುದ್ಧದ ದಮನಿತ ಸಮುದಾಯಗಳ ಪ್ರತಿರೋಧದ ನೈತಿಕತೆಗೇ ಪೆಟ್ಟುಕೊಡುತ್ತದೆ. ದಮನಿತ ಸಮುದಾಯದ ಮೆದುಳಿನಂತಿರುವ ಈ "ಪ್ರತಿಭಾನ್ವಿತ" ವರ್ಗ ತನ್ನ ಸಮುದಾಯದ ದೇಹದಿಂದ ಬೇರ್ಪಡುವುದು ಹೀಗೆ! ದಮನಿತ ಸಮುದಾಯದ ಮೆದುಳು ಹೀಗೆ ವಸಾಹತೀಕರಣಗೊಂಡು ಬ್ರಾಹ್ಮಣೀಕರಣಗೊಂಡಿರುವುದರಿಂದಲೇ ದೇಹಕ್ಕೆ ಬಿದ್ದ ಪೆಟ್ಟನ್ನು ಮೆದುಳು ಪೆಟ್ಟೆಂದೇ ದಾಖಲಿಸುವುದಿಲ್ಲ.

ಖ್ಯಾತ ಚಿಂತಕ ರಹಮತ್ ತರೀಕೆರೆಯವರು ಒಂದು ದಶಕದ ಹಿಂದೆ ಜಾಗತೀಕರಣದ ಕಾಲಘಟ್ಟದಲ್ಲಿ ಬುದ್ಧಿಜೀವಿಗಳು ಯಾವ ಪಾತ್ರವನ್ನು ವಹಿಸುತ್ತಿದ್ದಾರೆ ಎಂಬುದಕ್ಕೆ ಒಂದು ದೃಷ್ಟಾಂತವನ್ನು ನೀಡಿದ್ದರು. ಮಾನವ ಸಮಾಜದಲ್ಲಿ ಇರುವಂತೆ ಪ್ರಾಣಿ ಮತ್ತು ಪಕ್ಷಿಸಂಕುಲದಲ್ಲೂ ಒಂದು ಕಾರ್ಯವಿಭಜನೆ ಇರುತ್ತದೆ. ಮೊಲ, ಜಿಂಕೆ, ಕುರಿ, ಆಡು, ಮೇಕೆಗಳಂತ ಪ್ರಾಣಿಗಳು ತಲೆತಗ್ಗಿಸಿ ಹುಲ್ಲು ತಿನ್ನುತ್ತವೆ. ಅವುಗಳಿಗೆ ಎತ್ತರದ ನೋಟ ಸಾಧ್ಯವಿಲ್ಲ. ಹೀಗಾಗಿ ದೂರದಿಂದ ಬರುವ ಶತ್ರುಗಳನ್ನು ಅವು ಗುರುತಿಸಲಾಗುವುದಿಲ್ಲ. ಆದರೆ ಮರದ ಮೇಲಿರುವ ಕಾಗೆ, ಗೂಬೆಗಳಂತ ಪಕ್ಷಿಗಳು ದೂರದಿಂದ ಬರುವ ಹುಲಿ, ಸಿಂಹಗಳಂತ ಶತ್ರುವನ್ನು ನೋಡಿದ ಕೂಡಲೇ ಕರ್ಕಶವಾಗಿ ಕಿರುಚುತ್ತಾ ತಲೆತಗ್ಗಿಸಿ ಮೇಯುತ್ತಿರುವ ಮೊಲ, ಜಿಂಕೆ, ಕುರಿಗಳಿಗೆ ಎಚ್ಚರಿಸುತ್ತವೆ. ಮನುಷ್ಯ ಸಮಾಜದಲ್ಲೂ ದುಡಿಯುವ ವರ್ಗಕ್ಕೆ ಓದು-ಬರಹ ಮತ್ತು ಹೊರ ಜಗತ್ತಿನ ಅರಿವಿಲ್ಲದಿರುವುದರಿಂದ ಜಾಗತಿಕರಣವೆಂಬ ಶತ್ರು ಗೋಚರಿಸುವುದೇ ಇಲ್ಲ. ಆದರೆ ಸಮಾಜ ಓದು-ಅರಿವುಳ್ಳ ಬುದ್ಧಿಜೀವಿಗಳನ್ನು ಶತ್ರುಗಳ ಬರವನ್ನು ಮುಂದಾಗಿಯೇ ಗ್ರಹಿಸಿ ಶ್ರಮಜೀವಿಗಳಿಗೆ ಎಚ್ಚರಿಸಲೆಂದು ಅವರನ್ನು ಉನ್ನತ ಸ್ಥಾನದಲ್ಲಿ ಕುಳ್ಳಿರಿಸಿದೆ. ಆದರೆ ಈ ಬುದ್ಧಿಜೀವಿಗಳು ಜಾಗತೀಕರಣವೆಂಬ ಶತ್ರು ತಮ್ಮನ್ನೆಲ್ಲಾ ಕಬಳಿಸಲು ಬರುತ್ತಿದ್ದರೂ ಅದರ ಬಗ್ಗೆ ಸಮಾಜಕ್ಕೆ ಎಚ್ಚರಿಕೆ ನೀಡುವುದಿರಲಿ ತಾವೇ ಅವರ ಜೊತೆ ಕೈಜೋಡಿಸುತ್ತಿದ್ದಾರೆ. ಇದು ರಹಮತ್ ಅವರು ಹೇಳಿದ ದೃಷ್ಟಾಂತದ ತಾತ್ಪರ್ಯ.

ಇದು ಎಲ್ಲಾ ಸಮಾಜಗಳಲ್ಲಿ ನಡೆಯುತ್ತಿದ್ದರೂ ಜಾಗತೀಕರಣದ ಕಾಲಘಟ್ಟದಲ್ಲಿ ಮೆದುಳಿಗೂ ಮತ್ತು ದೇಹಕ್ಕೂ ಇರುವ ಸಾವಯವ ಸಂಬಂಧವನ್ನೇ ಕಡಿದುಹಾಕಲು ಈ ತಂತ್ರವನ್ನು ವಿಶೇಷವಾಗಿ ಬಳಸಿಕೊಳ್ಳುತ್ತಿದೆ. ಹಾಗೆ ನೋಡಿದರೆ ಸಾಮ್ರಾಜ್ಯವಾದಕ್ಕೆ ಈ ತಂತ್ರ ಹೊಸದೇನೂ ಅಲ್ಲ. ಬ್ರಿಟಿಷರ ವಸಾಹತುವಾಗಿದ್ದ ಭಾರತದಲ್ಲಿ ▸▸ 16

ನೋ ಕಾಮೆಂಟ್ಸ್

"ಈ ಕಾಲದಲ್ಲಿ ನೋಮ್ ಚಾಮ್‌ಸ್ಕಿ ಮತ್ತು ವಿಟ್‌ಗೆನ್‌ಸ್ಟೈನ್‌ರಂಥ ಚಿಂತಕರಿರುವುದು ನಿಜವಾದರೂ, ಕಾರ್ಲ್ ಮಾರ್ಕ್ಸ್‌ನಂತಹ ಯುಗಪರಿವರ್ತಕ ಚಿಂತಕರು ನಂತರ ಹುಟ್ಟಿಬರಲಿಲ್ಲ."

- ಶಾ ಫೈಜಲ್, ಈ ಬಾರಿ ಐಎಎಸ್ ಪರೀಕ್ಷೆಯಲ್ಲಿ ಪ್ರಥಮ ಸ್ಥಾನ ಪಡೆದ ಕಾಶ್ಮೀರಿ

"ಐಪಿಎಲ್ ವಿವಾದದಲ್ಲಿ ಸಿಲುಕಿದ ಕೇಂದ್ರ ಸಚಿವ ಶಶಿ ತರೂರ್‌ರವರ ರಾಜೀನಾಮೆಯನ್ನು ಕೇಂದ್ರ ಸರ್ಕಾರ ವಿವಾದ ಪ್ರಾರಂಭವಾದ ಕೆಲವೇ ದಿನಗಳಲ್ಲಿ ಪಡೆದುಕೊಂಡಿತು. ಬಳ್ಳಾರಿ ಸಚಿವರ ಮೇಲೆ ಅಕ್ರಮ ಗಣಿಗಾರಿಕೆ ಮತ್ತು ಗಡಿ ಒತ್ತುವರಿಯ ಆರೋಪ ಕೇಳಿಬಂದಿದ್ದರೂ ಅವರನ್ನು ಸಚಿವಸಂಪುಟದಲ್ಲಿ ಮುಂದುವರೆಸುತ್ತಿರುವುದು ಎಷ್ಟು ಸರಿ?"

- ರಾಜ್ಯಪಾಲ ಭಾರದ್ವಾಜ್

"ದೇಶದಲ್ಲಿ ನಕ್ಸಲ್ ಚಟುವಟಿಕೆ ಹೆಚ್ಚಾಗಲು ನ್ಯಾಯಾಂಗದ ಕಾಣಿಕೆಯೂ ಇದೆ. ನೂರಾರು ವರ್ಷಗಳಿಂದ ಬುಡಕಟ್ಟು ಜನರು ಕಾಡಿನಲ್ಲೇ ವಾಸವಾಗಿದ್ದಾರೆ. ಆದರೆ ಗೋದವರ್ಮ ಕೇಸಿನಲ್ಲಿ ಬುಡಕಟ್ಟು ಜನರನ್ನು ಕಾಡಿನಿಂದ ಹೊರಹಾಕುವಂತೆ ನ್ಯಾಯಾಲಯ ತೀರ್ಪು ನೀಡಿತು. ಹಿಂದೆ ಇದ್ದ ಕೇಂದ್ರ ಸರ್ಕಾರವೂ ನೋಟಿಸನ್ನೂ ನೀಡದೆ ಬುಡಕಟ್ಟು ಜನರನ್ನು ಕಾಡಿನಿಂದ ಹೊರಹಾಕಿತು. ಇದರಿಂದ ನಕ್ಸಲ್ ಚಟುವಟಿಕೆ ಹೆಚ್ಚಾಯಿತು."

- ವೀರಪ್ಪ ಮೊಯ್ಲಿ

"ಬಾಲಿವುಡ್ಡಿನ ಕಾರ್ಪೊರೇಟ್ ಕರಾಳಮುಖ ನನ್ನನ್ನು ಹೆದರಿಸುತ್ತದೆ. ಇಲ್ಲಿನ ಚಿತ್ರ ತಯಾರಿಕೆಯ ಬಗೆಗಿನ ಅಂಕಿಅಂಶಗಳು ನನ್ನನ್ನು ಕಂಗೆಡಿಸುತ್ತವೆ. ಬಾಲಿವುಡ್ಡಿನ ಈ ಆರ್ಥಿಕತೆ ಖಂಡಿತಾ ಅದನ್ನು ವಿನಾಶದೆಡೆಗೆ ಕೊಂಡೊಯ್ಯುತ್ತದೆ. ಆದ್ದರಿಂದಲೇ ನಾನು ಪ್ರಾದೇಶಿಕ ಸಿನಿಮಾಗಳತ್ತ ಮುಖ ಮಾಡಿದ್ದೇನೆ."

- ಮಹೇಶ್ ಮಾಂಜ್ರೇಕರ್, ನಿರ್ದೇಶಕ

"ದಾಂತೇವಾಡದಲ್ಲಿ ನಕ್ಸಲ್ ವಿರೋಧೀ ಕಾರ್ಯಾಚರಣೆಗೆ ವಾಯುಪಡೆಯನ್ನು ಬಳಸಬೇಕು ಎಂದು ಹೇಳುವವರಿಗೆ ದಾಂತೇವಾಡ ಪ್ರದೇಶದ ಪರಿಚಯವಿಲ್ಲ. ಮಾವೋವಾದಿಗಳ ವಿರುದ್ಧ ಹೋರಾಡಬೇಕೆಂದರೆ ಅಭಿವೃದ್ಧಿಗೆ ಮಹತ್ವ ನೀಡಿ ಸ್ಥಳೀಯ ಜನರ ಬೆಂಬಲವನ್ನು ಗಳಿಸಿಕೊಳ್ಳಬೇಕು."

- ದಿಗ್ವಿಜಯ ಸಿಂಗ್, ಕಾಂಗ್ರೆಸ್ ಮುಖಂಡ

"ಹಿಂದಿ ಸಿನಿಮಾಗಳಿಗೆ ಸಂಬಂಧಪಟ್ಟಂತೆ ನನ್ನನ್ನು ಕಾಡುತ್ತಿರುವ ಅತಿಮುಖ್ಯ ಅಂಶವೆಂದರೆ ಅದರಲ್ಲಿ ಹಳ್ಳಿಗಳು ಸಂಪೂರ್ಣವಾಗಿ ಕಣ್ಮರೆಯಾಗುತ್ತಿರುವುದು. ಭಾರತದ ಶೇ.80ರಷ್ಟು ಜನ ಈಗಲೂ ಹಳ್ಳಿಗಳಲ್ಲೇ ಬದುಕುತ್ತಿದ್ದಾರೆ. ಆದರೂ ಇಂದು ಹಿಂದಿ ಸಿನಿಮಾಗಳಲ್ಲಿ ಹಳ್ಳಿಗಳು ಕಾಣದೇ ಹೋಗುತ್ತಿರುವುದು ನಿಜಕ್ಕೂ ಕಳವಳಕ್ಕೆ ಕಾರಣವಾಗಬೇಕು."

- ಶಬಾನಾ ಅಜ್ಮಿ

ನಂಬಿದ್ರೆನಂಬಿ ಬಿಟ್ರೆಬಿಡಿ

"ಅಮೆರಿಕದಲ್ಲಿ ಶೇ.80ರಷ್ಟು ರಾಷ್ಟ್ರೀಯ ಸಂಪತ್ತು ಕೇವಲ ಶೇ.13ರಷ್ಟು ಜನರ ಬಳಿ ಇದೆ. ಅಲ್ಲಿಯ ಕಂಪನಿಯ ಮುಖ್ಯಾಧಿಕಾರಿ ಮತ್ತು ಕಂಪನಿ ನೌಕರರ ಸಂಬಳದ ನಡುವಿನ ಅಂತರ 500ರಿಂದ 600 ಪಟ್ಟಿರುತ್ತದೆ. ಆ ಸಮಾಜದಲ್ಲಿ ಅರ್ಧಕ್ಕಿಂತ ಹೆಚ್ಚು ಜನ ದಿನದ ಮೂರೂ ಹೊತ್ತು ಪುಷ್ಟಿದಾಯಕ ಆಹಾರವನ್ನು ಸೇವಿಸುವುದಿಲ್ಲ. ಶೇ.66ರಷ್ಟು ಮಂದಿ ತಮ್ಮ ಮನೆಯ ಸೂರನ್ನು ಇಳಿವಯಸ್ಸಿನಲ್ಲಿ ಉಳಿಸಿಕೊಳ್ಳಲು ವಿಫಲವಾಗುತ್ತಾರೆ. ಈ ಸಂಗತಿಗಳನ್ನು ಮಾಧ್ಯಮಗಳು ನಮಗೆ ಹೇಳುವುದೇ ಇಲ್ಲ. ಆಕಾಶಕ್ಕೆ ಮುತ್ತಿಡುವ ಗಗನಚುಂಬಿ ಕಟ್ಟಡಗಳ ಕೆಳಗಿನ ನೋಟ ಅಷ್ಟೇನೂ ಆಶಾದಾಯಕವಾಗಿಲ್ಲ ಎನ್ನುವುದನ್ನು ಸರ್ಕಾರದ ಹಣದಲ್ಲಿ ವಿದೇಶ ಸುತ್ತುವ ನಮ್ಮ ರಾಜಕಾರಣಿಗಳು ಮತ್ತು ಸಾಹಿತಿಗಳು ಮನಗಾಣುವುದಿಲ್ಲ."

- ಡಾ. ಅಶೋಕ್ ಹೆಗಡೆ, ಪ್ರಜಾವಾಣಿ ಅಂಕಣದಲ್ಲಿ

"ಹಿಂದುಳಿದ ವರ್ಗಗಳ ನೇತಾರ ದೇವರಾಜ್ ಅರಸ್ ನಂತರ ಮುಂದುವರೆದ ಹಿಂದುಳಿದ ವರ್ಗಗಳ ನಾಯಕರಾಗಿ ಯಡಿಯೂರಪ್ಪ ಗುರುತಿಸಿಕೊಂಡಿದ್ದಾರೆ."

- ಈಶ್ವರಪ್ಪ

ಇದರರ್ಥ ನೀನು ನಿರಪರಾಧಿ ಎಂಬುದಲ್ಲ, ಸರ್ಕಾರವೂ ಸಹ-ಅಪರಾಧಿ ಎಂದು!

"ಈಗಾಗಲೇ ನನ್ನ ಮೇಲೆ 75-80 ಕೇಸುಗಳನ್ನು ದಾಖಲು ಮಾಡಲಾಗಿದೆ. ಆದರೆ ಒಂದು ಪ್ರಕರಣದಲ್ಲೂ ನನಗೆ ಶಿಕ್ಷೆಯಾಗಲಿಲ್ಲವೇಕೆ?

- ಪ್ರಮೋದ್ ಮುತಾಲಿಕ್

ಬಳ್ಳಾರಿ ಫ್ಯಾಸಿಸಮ್ಮ್‌ರಾ!

"ಆಂಧ್ರದ ಚಂದ್ರಬಾಬು ನಾಯ್ಡು ಮತ್ತು ಕರ್ನಾಟಕದ ದೇವೇಗೌಡ ನೀಚಾತಿನೀಚರು. ಅವರಿಬ್ಬರನ್ನು ನಾನು ಫುಟ್‌ಬಾಲ್, ಫುಟ್‌ಬಾಲ್ ಆಡುತ್ತೇನೆ. ತಂದೆಯಂತಹ ವೈ.ಎಸ್. ರಾಜಶೇಖರ ರೆಡ್ಡಿ, ತಾಯಿಯಂತಹ ಸುಷ್ಮಾ ಸ್ವರಾಜ್ ಮತ್ತು ಬಳ್ಳಾರಿ ದುರ್ಗಮ್ಮಗಳ ಆಶೀರ್ವಾದ ಇರುವತನಕ ಯಾರೂ ನನ್ನ ಕೂದಲನ್ನು ಕೊಂಕಿಸಲು ಸಾಧ್ಯವಿಲ್ಲ."

- ಜನಾರ್ದನ ರೆಡ್ಡಿ

ಕೊಚ್ಚಿನ್‌ನಲ್ಲಿ ಒಂದು ದಿನ...



ಕಂಡಹಾಗೆ

ಗೌರಿ ಲಂಕೇಶ್

ಕಳೆದ ಹಲವಾರು ತಿಂಗಳುಗಳಿಂದ ಪತ್ರಿಕೆ ಮತ್ತು ಕಾಶನದ ಕೆಲಸಗಳಲ್ಲೇ ಮುಳುಗಿದ್ದರಿಂದ ನನಗೆ ಒಂದು ಟ್ಟ ಬ್ರೇಕ್ ಬೇಕು ಅನ್ನಿಸಿತ್ತು. ಅದಕ್ಕೆ ಸರಿಯಾಗಿ ಕೇರಳದ ಚ್ಚಿನ್‌ನಿಂದ ಸಿದ್ದಿಕ್ ಎಂಬುವವರು ಫೋನ್ ಮಾಡಿ ನ್ನನ್ನು ಒಂದು ಕಾರ್ಯಕ್ರಮದ ಉದ್ಘಾಟನೆಗೆ ಆಹ್ವಾನಿ ದರು.

ಕೇರಳದಲ್ಲಿ ನಡೆಯಲಿದ್ದ ಆ ಕಾರ್ಯಕ್ರಮದ ಕೇಂದ್ರ ಬಿಂದು ಜಮೈಕಾದ ಬಾಬ್ ಮಾರ್ಲಿ ಎಂಬ ಗಾಯಕ. 981 ರಲ್ಲಿ ಚಿಕ್ಕ ವಯಸ್ಸಿನಲ್ಲೇ ತೀರಿಕೊಂಡ ಮಾರ್ಲಿ ಪ್ಪು ಜನಾಂಗದವನಾಗಿದ್ದನಲ್ಲದೆ, ದಮನಿತರ ಪರವಾಗಿ ಹಾಡುಗಳನ್ನು ಬರೆದು, ಅವುಗಳನ್ನು ಹಾಡಿ ವಿಶ್ವದಾದ್ಯಂತ ಜನಪ್ರಿಯನಾಗಿದ್ದವನು. ನಾನು ಕಾಲೇಜಿನಲ್ಲಿದ್ದಾಗ ಮಾರ್ಲಿ ನಮ್ಮೆಲ್ಲರ ಅಚ್ಚುಮೆಚ್ಚಿನ ಸಂಗೀತಗಾರನಾಗಿದ್ದ. ಅದರಲ್ಲೂ ಮಾನವಹಕ್ಕುಗಳನ್ನು ಕುರಿತು ಆತ ಹಾಡಿದ್ದ 'Get up, stand up, stand up for your rights, don't give up the fight' ನನ್ನ ಪ್ರೀತಿಯ ಹಾಡಾಗಿತ್ತು. ಅಂತಹ ಬಾಬ್ ಮಾರ್ಲಿ ಕುರಿತು ಕೊಚ್ಚಿನ್‌ನಲ್ಲಿ ಎರಡು ದಿನಗಳ ಸಾಂಸ್ಕೃತಿಕ ಪ್ರತಿರೋಧ ಕುರಿತ ವಿಚಾರಸಂಕಿರಣ ಮತ್ತು ಸಂಗೀತ ಕಾರ್ಯಕ್ರಮ ವನ್ನು ಉದ್ಘಾಟಿಸಲು ನನ್ನನ್ನು ಸಿದ್ದಿಕ್ ಕರೆದಿದ್ದರು.

ಬೇಸಿಗೆ. ಬೆಂಗಳೂರಿನ ಶೆಖೆಯನ್ನೇ ತಡೆಯಲಾಗು ತ್ತಿಲ್ಲ, ಇನ್ನು ಕೊಚ್ಚಿನ್ ಹೇಗಿರಬಹುದು? ಅವತ್ತು ಹೋಗದಿದ್ದರೆ ಮತ್ತೆ ರಜೆ ಅಂತ ಸಿಗುವುದು ಮತ್ತಿ ನ್ಯಾವಾಗಲೋ ಅಂತ ನಿರ್ಧರಿಸಿ ಕೇರಳಕ್ಕೆ ಹೊರಟೇಬಿಟ್ಟೆ.

ರಾತ್ರಿ ಕೊಚ್ಚಿನ್‌ನಲ್ಲಿ ವಿಮಾನದಿಂದ ಹೊರಗೆ ಹೆಜ್ಜೆ ಇಡುತ್ತಲೇ ಬಿಸಿ ಗಾಳಿ ಬೆವರಿಳಿಸಿತು. ಸಿದ್ದಿಕ್ ನನಗಾಗಿ ಬುಕ್ ಮಾಡಿದ್ದ ರೂಂನಲ್ಲಿ ಎಸಿ ಇರಲಿಲ್ಲ. ಆದರೂ. ಪರವಾಗಿಲ್ಲ ಎಂದರೂ "ಕಿಟಕಿಗಳನ್ನು ತೆರೆಯಬೇಡಿ, ತುಂಬಾ ಸೊಳ್ಳೆಗಳಿವೆ" ಅಂದರು. ಅಷ್ಟು ಹೊತ್ತು ಸೀಗಡಿ ಸಾರಿನ ಊಟ, ಸ್ನಾನ ಎಲ್ಲ ಮುಗಿಸಿದ ನಂತರವೂ ಸಹಿಸಿಕೊಳ್ಳಲಾಗದಷ್ಟು ಶೆಖೆ. ಏನಾದರಾಗಲಿ ಒಂದು ಟೇಬಲ್ ಫ್ಯಾನ್ ಅನ್ನು ನನ್ನ ಪಕ್ಕದಲ್ಲಿ ಇಟ್ಟುಕೊಂಡು ಕಿಟಕಿಗಳನ್ನೆಲ್ಲ ತೆರೆದೆ. ಅನಂತರವೇ ನಿದ್ದೆ ಬಂದಿದ್ದು.

ಮಾರನೆ ಬೆಳಗ್ಗೆ ಎದ್ದು ನೋಡಿದರೆ ನಾನಿದ್ದದ್ದು ಒಂದು ಪುಟ್ಟ ವಠಾರದಂತಹ ಜಾಗದಲ್ಲಿ, ಆ ಜಾಗ ನಗರದ ಮಧ್ಯೆಯೇ ಇದ್ದರೂ, ದೊಡ್ಡದಾಗಿತ್ತು. ಎಲ್ಲೆಡೆ ಹುಲುಸಾಗಿ ಬೆಳೆದಿದ್ದ ಹುಲ್ಲು, ಮಧ್ಯದಲ್ಲೊಂದು ಪುಟ್ಟ ಹೊಂಡ, ಹತ್ತಾರು ಬಾತುಕೋಳಿಗಳು. ಹೆಚ್ಚಾಗಿ ಎಡಪಂಥೀಯರೇ ತಂಗುವ ಆ ಜಾಗದಲ್ಲಿ ಐಷಾರಾಮಿ ಸವಲತ್ತುಗಳಿಲ್ಲದಿದ್ದರೂ ಅಚ್ಚುಕಟ್ಟಾಗಿತ್ತು.

ಬೆಳಗ್ಗೆಯೇ ಸಿದ್ದಿಕ್ ಮತ್ತು ಅವರ ಕೆಲ ಸ್ನೇಹಿತರು ಆಗಮಿಸಿದರು. ಕೆಲ ಹೊತ್ತು ಇತ್ತೀಚೆಗೆ ಕೇರಳದ ರಾಜಕೀಯ, ಸಾಂಸ್ಕೃತಿಕ, ಸಾಹಿತ್ಯಿಕ ವಲಯಗಳಲ್ಲಿ ಸಂಭವಿಸಿರುವುದನ್ನೆಲ್ಲ ಚರ್ಚಿಸಿದೆವು. ಇತ್ತೀಚೆಗೆ ಕೇರಳದಲ್ಲಿ ಚಿನ್ನದ ಅಂಗಡಿಗಳು ನಾಯಿಕೊಡೆಗಳಂತೆ ತಲೆ ಎತ್ತುತ್ತಿವೆ. ಅದೀಗ ಎಷ್ಟು ಲಾಭದಾಯಕ ವೃತ್ತಿಯಾಗಿದೆ ಎಂದರೆ ಅಲೂಕಾಸ್ ಎಂಬ ಚಿನ್ನದ ಅಂಗಡಿಗೆ ಹೆಸರುವಾಸಿಯಾಗಿದ್ದ ಕುಟುಂಬ ಈಗ ವಿಭಜನೆಗೊಂಡು ಹತ್ತಾರು ಹೊಸ ಅಲೂಕಾಸ್‌ಗಳು ಕೇರಳದಾದ್ಯಂತ ಮಳಿಗೆಗಳನ್ನು ತೆರೆಯುತ್ತಿವೆ. ಸದ್ಯದಲ್ಲೇ ಬೆಂಗಳೂರಿನಲ್ಲೂ ಒಂದು ಮಳಿಗೆ ಆರಂಭಗೊಳ್ಳಲಿದೆ.



ಇನ್ನು ದೇಶದಲ್ಲೇ ಪ್ರಥಮ ಎಡಪಂಥೀಯ ಸರ್ಕಾರವನ್ನು ಚುನಾಯಿಸಿದ ಕೇರಳದಲ್ಲಿ ಇವತ್ತು ಎಡಪಂಥೀಯ ಸಿದ್ಧಾಂತ ಕರಗುತ್ತಿದೆ, ಹಲವಾರು ಎಡಪಂಥೀಯ ನಾಯಕರು ಹಣಕಾಸಿನ ಅವ್ಯವಹಾರದಲ್ಲಿ ಸಿಲುಕಿಕೊಂಡಿದ್ದಾರೆ ಎಂಬುದು ಈಗ ಎಲ್ಲರಿಗೂ ಗೊತ್ತು.

ಆದರೆ ಸಿದ್ದಿಕ್ ಮತ್ತು ಸ್ನೇಹಿತರು ಅಲ್ಲಿನ ಎಡಪಕ್ಷಗಳನ್ನು ಕುರಿತು ವಿಚಿತ್ರ ಸಂಗತಿಯೊಂದನ್ನು ಹೇಳಿದರು. ಅದೇನೆಂದರೆ ಇದೇ ಎಡಪಂಥೀಯರ ಆಶ್ರಯದಲ್ಲಿ "ಅಪ್ಪಿಕೊ" ಅಮ್ಮ ಮಾತಾ ಅಮೃತಾನಂದಮಯಿ ಬಲಿಷ್ಠಗೊಂಡಿದ್ದಾಳಲ್ಲದೆ, ಅದೆಷ್ಟೋ ಎಡಪಕ್ಷಗಳ, ಸದಸ್ಯರು ಆಕೆಯ ಅನುಯಾಯಿಗಳಾಗಿದ್ದಾರೆ!

ಕೊಚ್ಚಿನ್‌ನ ಫೋರ್ಟ್ ಒಳಗಡೆ ಇರುವ, ಸಮುದ್ರದ ದಡದಲ್ಲೇ ಇರುವ ವಾಸ್ಕೋಡಿಗಾಮಾ ಸರ್ಕಲ್‌ನಲ್ಲೇ ಬಾಬ್ ಮಾರ್ಲಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ವೇದಿಕೆಯ ಹಿಂದೆ ಸುಂದರವಾಗಿದ್ದ ಐತಿಹಾಸಿಕ ಬಂಗಲೆಗಳು (ಅವುಗಳನ್ನೆಲ್ಲ ಈಗ ಹೋಟೆಲ್‌ಗಳಾಗಿ ಪರಿವರ್ತಿಸಲಾಗಿದೆ). ಮೇಲೆ ದೊಡ್ಡ ಆಕಾರದ ಮರಗಳ ರೆಂಬೆಗಳು, ಎದುರು ಸಮುದ್ರ ಮತ್ತು ಅಲ್ಲಿ ತೇಲಿಹೋಗುತ್ತಿರುವ ಹಡಗುಗಳು. ಹತ್ತಿರದಲ್ಲೇ 'ಚೀನೀ ನೆಟ್'ಗಳನ್ನು ಹಾಕಿಕೊಂಡು ಮೀನುಗಳನ್ನು ಹಿಡಿಯುತ್ತಿರುವ ಜನ. ಸರ್ಕಲ್ ಮತ್ತು ಮೀನುಗಾರರ ನಡುವೆ ಪುಟ್ಟ ಅಂಗಡಿಗಳನ್ನು ತೆರೆದು ವಿವಿಧ ರೀತಿಯ ಮೀನು, ಏಡಿ, ತಿಮಿಂಗಿಲಗಳನ್ನು ಮಾರುತ್ತಿರುವ ಹುಡುಗರು. (ಜನ ತಮಗೆ ಬೇಕಿರುವ ಮೀನನ್ನು ಆಯ್ಕೆ ಮಾಡಿದ ನಂತರ ಅದನ್ನು ಹತ್ತಿರದಲ್ಲೇ ರುಚಿಕರವಾಗಿ ತಯಾರಿಸಿ ಕೊಡುತ್ತಾರೆ).

ನನ್ನಿಂದ ಕಾರ್ಯಕ್ರಮದ ಉದ್ಘಾಟನೆ. ಇಂಗ್ಲಿಷ್‌ನಲ್ಲಿ, ಆಮೇಲೆ ಅದನ್ನು ಮಲೆಯಾಳಂಗೆ ಭಾಷಾಂತರ. ನನ್ನ ನಂತರ ಚೆನ್ನೈನಿಂದ ಬಂದಿದ್ದ ಖ್ಯಾತ ಚಿಂತಕ ಎ. ಮಾರ್ಕ್ಸ್ ಅವರ ಭಾಷಣ ತಮಿಳಿನಲ್ಲಿ. ಒಂದು ಅಕ್ಷರವೂ ಅರ್ಥವಾಗುತ್ತಿಲ್ಲ. ಸಿದ್ದಿಕ್ ಕಾರ್ಯಕ್ರಮದಲ್ಲಿ ಬ್ಯುಸಿ ಆಗಿದ್ದರಿಂದ ಭಾಷಣಗಳನ್ನು ನನಗೆ ಇಂಗ್ಲಿಷ್‌ಗೆ ಅನುವಾದಿಸಿ ಹೇಳುವವರು ಇರಲಿಲ್ಲ. ಮೂರ್‍ನಾಲ್ಕು ಜನರ ಭಾಷಣ ಮುಗಿಯುವವರೆಗೆ ಕಾದೆ. ಅಷ್ಟೊತ್ತಿಗೆ ಸಿದ್ದಿಕ್ ಕೂಡ ಬಿಡುಗಡೆ ಹೊಂದಿದರು. ನಾವಿಬ್ಬರೂ ಅವರ ಸ್ಕೂಟರ್ ಏರಿ ಹೊರಟೆವು. ಕೊಚ್ಚಿನ್ ಫೋರ್ಟ್ ಒಳಗಿದ್ದ ಹಲವು ಚರ್ಚ್‌ಗಳಿಗೆ, ಅಂಗಡಿಗಳಿಗೆ ಭೇಟಿ ಅಲ್ಲೇ ಸುತ್ತಾಡಿದೆವು.

ಮಧ್ಯಾಹ್ನದ ಊಟಕ್ಕೆಂದು ಬಿರಿಯಾನಿಗೆ ಖ್ಯಾತಿ ಪಡೆದಿರುವ ಕಯೀಕಾಸ್ ಹೋಟೆಲ್‌ಗೆ ಕರೆದುಕೊಂಡು ಹೋಗುವುದಾಗಿ ಸಿದ್ದಿಕ್ ಹೇಳಿದರು. "ಕೊಚ್ಚಿನ್‌ಗೆ ಬಂದು ಮೀನು, ಪ್ರಾನ್ ಬದಲಾಗಿ ಮಟನ್ ಬಿರಿಯಾನಿಯೇ?" ಅಂದೆ. "ಈ ಹೋಟೆಲ್ ತುಂಬಾ ಫೇಮಸ್. ಎಂ.ಎಫ್. ಹುಸೇನ್, ಮಮ್ಮೂಟಿ ಎಲ್ಲರೂ ಕೊಚ್ಚಿನ್‌ಗೆ ಬಂದಾಗ ಅಲ್ಲೇ ಊಟ ಮಾಡುವುದು" ಎಂದರು. ಆ ಹೋಟೆಲ್ ಇರುವುದು ಹಳೇ ಕೊಚ್ಚಿನ್‌ನ ಸಂದಿಗೊಂದುಗಳಲ್ಲಿ, ಒಂದು ತರಹ ನಮ್ಮ ಶಿವಾಜಿನಗರದಂತಹ ಏರಿಯಾ. ಹೋಟೆಲ್ ಕೂಡ ಚಿಕ್ಕದ್ದು. ಬಸವನಗುಡಿಯಲ್ಲಿದ್ದ ಹಳೇ ಪ್ರಶಾಂತ್ ಹೋಟೆಲ್ ಅನ್ನು ಹೋಲುವಂತದ್ದು. ನಾವು ಹೋಗುವ ಹೊತ್ತಿಗೆ ಮಟನ್ ಬಿರಿಯಾನಿ ಖಾಲಿಯಾಗಿತ್ತು, ಆದ್ದರಿಂದ ಚಿಕನ್ ಬಿರಿಯಾನಿ ತರಿಸಿದೆವು. ಅದೂ ಅದ್ಭುತವಾಗಿತ್ತು. ಅದರೊಂದಿಗೆ ಕೊಟ್ಟಿದ್ದ ಖರ್ಜೂರದ ಚಟ್ನಿಯಂತೂ ಸೊಗಸಾಗಿತ್ತು.


ವಾಸ್ಕೊಡಿಗಾಮ ಸರ್ಕಲ್‌ಗೆ ವಾಪಸ್ಸಾದಾಗ ಭಾಷಣಗಳೆಲ್ಲ ಮುಗಿದು ಸಂಜೆಯ ಸಂಗೀತ ಗೋಷ್ಠಿಗೆ ಸಿದ್ಧತೆ ನಡೆದಿತ್ತು. "ನೀವು ಇವತ್ತು ಇಲ್ಲೇ ಉಳಿದುಕೊಂಡಿದ್ದರೆ ಚೆನ್ನಾಗಿರುತ್ತಿತ್ತು" ಎಂದರು ಸಿದ್ದಿಕ್. ಆದರೆ ಅಂದೇ ಸಂಜೆ ರೈಲನ್ನೇರಿ ನಾನು ವಾಪಸ್ಸಾಗಬೇಕಿತ್ತು.

ಎರಡು ದಿನಗಳ ನಂತರ ಸಿದ್ದಿಕ್ ಫೋನ್ ಮಾಡಿ ಎರಡೂ ದಿನಗಳ ಕಾರ್ಯಕ್ರಮ ಚೆನ್ನಾಗಿ ನಡೆಯಿತೆಂದೂ, ಸಂಗೀತ ಗೋಷ್ಠಿಗಳಿಗೆ ಜನ ಜಮಾಯಿಸಿದ್ದರೆಂದೂ, ಮುಂದಿನ ವರ್ಷದ ಕಾರ್ಯಕ್ರಮಕ್ಕೆ ನಾನು ಎರಡು ದಿನ ಬಿಡುವು ಮಾಡಿಕೊಂಡು ಬರಬೇಕು ಎಂದು ಹೇಳಿದರು.

ರೈಲು ಬೋಗಿಯನ್ನೇರಿದಾಗ ನನ್ನ ಬಳಿ ಒಂದಿಷ್ಟು ಪ್ರಾನ್ ಉಪ್ಪಿನಕಾಯಿ, ಬಾಳೆ ಚಿಪ್ಸ್ ಮತ್ತು ನೆನಪುಗಳು ಇದ್ದವು. ಉಪ್ಪಿನಕಾಯಿ ಮಗಳ ಪಾಲಾಯಿತು. ಚಿಪ್ಸ್ ಮನೆ ಮತ್ತು ಆಫೀಸಿನಲ್ಲಿ ಮುಗಿಸಿದ್ದಾಯಿತು. ಉಳಿದಿದ್ದ ನೆನಪುಗಳನ್ನು ನಿಮ್ಮೊಂದಿಗೆ ಹಂಚಿಕೊಂಡಿದ್ದೇನೆ. ಹೊಟ್ಟೆಕಿಚ್ಚು ಪಡಬೇಡಿ!

ಆತ್ಮವಿಮರ್ಶೆ: ಚರ್ಮರೋಗಿಗಳ ತುರಿಕೆಯ ಚಟ

ನಾವು ಸಹಜವಾಗಿ ಬಳಸುವ ಪದಪುಂಜಗಳು ಕನಿಷ್ಠ ಮಟ್ಟದಲ್ಲಿ ನಮ್ಮ ಆಶಯ ಉದ್ದೇಶ, ಅರ್ಥಗಳನ್ನು, ಓದುಗ/ಕೇಳುಗರಿಗೆ ತಲುಪಿಸುವ ಕಾರ್ಯ ಮಾಡುತ್ತವೆ ಷ. ಆದರೆ, ಪದಗಳಿಗೆ 'ಸ್ವಂತಿಕೆ'ಯೂ ಇರುವುದರಿಂದ ಅವು ಒಮ್ಮೊಮ್ಮೆ ಅನಿರೀಕ್ಷಿತ ಅರ್ಥಗಳನ್ನು ಹೊರಡಿಸುತ್ತವೆ. ಉದಾಹರಣೆಗೆ, ಶಿವಸುಂದರ್ ಅವರು ಲೋಹಿಯಾ ವಾದಿಗಳಿಗೆ ಬರೆದ ಪತ್ರದಲ್ಲಿ (ಲಂಕೇಶ್ ಮೇ 26) ಶವಪರೀಕ್ಷೆ (ಪೋಸ್ಟ್ ಮಾರ್ಟಂ) ಮತ್ತು ಆತ್ಮ ವಿಮರ್ಶೆ ಎಂಬ ಪದಗಳನ್ನು ಒಂದೇ ಉಸಿರಿನಲ್ಲಿ ಹೆಣೆದಿದ್ದಾರೆ. ಸಂಬಂಧಪಟ್ಟ ಜೀವಿ, ಜೀವ ಕಳಕೊಂಡ ನಂತರವೇ 'ಶವ' ಆಗುತ್ತದೆ. ಅದನ್ನು ಖಾತ್ರಿ ಪಡಿಸಿಕೊಂಡೇ ವೈದ್ಯರು ಅದರ ಅಂಗಾಂಗಗಳನ್ನು ಕತ್ತರಿಸಲು ಕೈ ಹಾಕುತ್ತಾರೆ. ಆತ್ಮ ವಿಮರ್ಶೆ ಎಂಬ ಪದ ಸ್ವ-ವಿಮರ್ಶೆ ಎಂಬ ಅರ್ಥ ಹೊಂದಿದೆ.



ಆದರೆ, ಆತ್ಮ ಎಂಬ ಶಬ್ದ ಸ್ವಲ್ಪ ಗೊಂದಲ ಉಂಟು ಮಾಡುತ್ತದೆ. ದೇಹದಲ್ಲಿ ಆತ್ಮ ಇರುವತನಕ ಅದು ಶವವಾಗಲು ಸಾಧ್ಯವಿಲ್ಲ, ಅದಿರಲಿ,

ಮಾರ್ಕ್ಸ್‌ವಾದ, ಸಮಾಜವಾದ, ಮಾವೋವಾದ ಇವು ಯಾವುದೂ ತಮ್ಮ ಜೀವಂತಿಕೆಯನ್ನು ಸಂಪೂರ್ಣ ಕಳೆದುಕೊಂಡು ಕಾಲಗರ್ಭವನ್ನು ಕಾಯಂ ಆಗಿ ಸೇರಿದ ಇತಿಹಾಸದವಾಸಿಯಲ್ಲ, ಆದ್ದರಿಂದ ಇವುಗಳ ವಿಶ್ಲೇಷಣೆಯಲ್ಲಿ ಶವಪರೀಕ್ಷೆ (ಪೋಸ್ಟ್ ಮಾರ್ಟಂ) ಎಂಬ ಶಬ್ದವೇ ಅಸಂಗತ. ಶಿವಸುಂದರ್ ಅವರ ವಿಶ್ಲೇಷಣೆಯ ಹೆಚ್ಚುಗಾರಿಕೆ ಎಂದರೆ- ಅವರ ಸ್ಪಷ್ಟ ಒಲವು ಮಾವೋವಾದದ ಕಡೆಗೆ ಇದ್ದರೂ, ಅವರು ಅದನ್ನೂ ಒಳಗೊಂಡಂತೆ ಎಲ್ಲ ವಾದಗಳನ್ನೂ ಸಾಕಷ್ಟು ವಸ್ತುನಿಷ್ಠವಾಗಿಯೇ ನೋಡುತ್ತಾರೆ. ಯಾವ ಹಂತದಲ್ಲೂ ಅವರು ಡಾಗ್‌ಮ್ಯಾಟಿಕ್ ಅನ್ನಿಸ ಲಾರರು. ಅವರ ವಾದ ವೈಖರಿ ಕೂಡಾ ಸುಸಂಬದ್ಧವಾಗಿದ್ದು ಓದುಗರನ್ನು ತನ್ನೊಡನೆ ಕರೆದೊಯ್ಯುತ್ತವೆ.

ಪ್ರಸ್ತುತ ಲೇಖನದಲ್ಲಿ ಶಿವಸುಂದರ್ ಅವರು ವಿಸ್ತೃತ ಚರ್ಚೆಗೆ ಅನುವಾಗುವಂತೆ ಕೆಲವು ಅಂಶಗಳನ್ನು ಪ್ರಸ್ತಾಪಿಸಿದ್ದಾರೆ. ಕಳೆದ ನಾಲ್ಕು ದಶಕಗಳಿಂದ ಒಬ್ಬ ಲೋಹಿಯಾವಾದಿಯಾಗಿ ನಾನು ನಮ್ಮ ನಾಡಿನ ಸಾಹಿತ್ಯಿಕ, ಸಾಂಸ್ಕೃತಿಕ, ರಾಜಕೀಯ ವಿದ್ಯಮಾನಗಳಲ್ಲಿ ಸ್ವಲ್ಪಮಟ್ಟಿಗಾದರೂ ಪಾಲ್ಗೊಂಡಿರುವೆ. 70ರ ದಶಕದ ಸಮಾಜವಾದಿ ಯುವಜನ ಸಭಾ (ಎಸ್‌ವೈಎಸ್), ಜಾತಿವಿನಾಶ ಆಂದೋಲನ, ಕರ್ನಾಟಕ ಬರಹಗಾರರ ಮತ್ತು ಕಲಾವಿದರ ಒಕ್ಕೂಟ, ತುರ್ತುಪರಿಸ್ಥಿತಿಯ ನವನಿರ್ಮಾಣ ಸಮಿತಿ-ಇವೆಲ್ಲಾ ಸ್ಪಷ್ಟವಾಗಿ ಕರ್ನಾಟಕದಲ್ಲಿ ಲೋಹಿಯಾ ವಾದವು ಜನಾಂದೋಲನವಾಗಿ ಸಾಕ್ಷಾತ್ಕಾರಗೊಂಡ ಕ್ರಿಯಾಬಿಂದುಗಳು. ನಂತರದ ಅವಧಿಯಲ್ಲಿ ಎಪ್ಪತ್ತರ ದಶಕದ ಕೊನೆಯಲ್ಲಿ ಬಂಡಾಯ ಸಾಹಿತ್ಯ ಸಂಘಟನೆ ರೂಪುಗೊಳ್ಳುವ ಹೊತ್ತಿಗೆ ಲೋಹಿಯಾವಾದ, ಮಾರ್ಕ್ಸ್‌ವಾದ, ಅಂಬೇಡ್ಕರ್ ವಾದದಂಥ ಎಡಪಂಥೀಯ ಮಾರ್ಗಗಳು ಒಂದು ನೆಲೆಯಲ್ಲಾದರೂ ಒಂದು ದಿಕ್ಕಿನ ಕಡೆಗೆ ಒಟ್ಟಾಗಿ ಸಾಗಬೇಕಾದ ಅನಿವಾರ್ಯತೆಯನ್ನು ಮನಗಂಡಿದ್ದನ್ನು ನೋಡಿದ್ದೇವೆ. ಎಲ್ಲವೂ ಕರಗಿ ಒಂದೇ ಎರಕ ಪಡೆಯಬೇಕೆಂಬ ಗುರಿಯೂ ಆಗ ಇರಲಿಲ್ಲ; ಆ ದಿಕ್ಕಿನಲ್ಲಿ ಪ್ರಯತ್ನಗಳೂ ನಡೆಯಲಿಲ್ಲ, ಆ ಕತೆ ಬೇರೆ.

80-90ರ ದಶಕದ ಹೊತ್ತಿಗೆ ಜಾಗತಿಕ ವಿದ್ಯಮಾನಗಳ ಹೊಡೆತಕ್ಕೆ ಸಿಕ್ಕು, ಶಿವಸುಂದರ್ ಸರಿಯಾಗಿಯೇ ಗುರುತಿಸಿದಂತೆ ಎಲ್ಲ ಜನಪರ ಚಳವಳಿಗಳ ವಿಘಟನೆಯ ಪರ್ವ ಪ್ರಾರಂಭವಾಯಿತು. ಇದಕ್ಕೆ ಸೈದ್ಧಾಂತಿಕ ಅಂಶಗಳಿಗಿಂತ ಆಯಾ ಸಂಘಟನೆಗಳ ನಾಯಕತ್ವದ ವೈಫಲ್ಯವೂ ಮುಖ್ಯ ಕಾರಣ. ಆಡಳಿತ ನಡೆಸಲು ಅಧಿಕಾರಕ್ಕೆ ಬಂದ ಕೆಲವು ರಾಜಕೀಯ ಪಕ್ಷಗಳ ಬಗ್ಗೆ ಇಟ್ಟುಕೊಂಡ ಭ್ರಮೆಗಳೂ ಈ ವಿಘಟನೆಗೆ ನಿಮಿತ್ತವಾದವು. ಮಾರ್ಕ್ಸ್‌ವಾದಿಗಳೇನೋ ತಮ್ಮ ಅನನ್ಯತೆಯನ್ನು ಉಳಿಸಿಕೊಂಡಿದ್ದಾರೆ. ಆದರೆ, ಲೋಹಿಯಾ ವಾದಿಗಳು ಮತ್ತು ಅಂಬೇಡ್ಕರ್ ವಾದಿಗಳು ಮಾತ್ರ ಆಳುವ ಪಕ್ಷದೊಂದಿಗಿನ 'ರಾಜೀ' ರಾಜಕೀಯದಿಂದಾಗಿ ಇಂದು ಸ್ವಂತ ನೆಲೆ ಕಳೆದುಕೊಂಡ ಪರದೇಶಿಗಳಾಗಿರುವುದು ವಾಸ್ತವ.

ಲೋಹಿಯಾವಾದ ಕನ್ನಡನಾಡಿನ ಸಾಹಿತಿಗಳನ್ನು, ಚಿಂತಕರನ್ನು, ಕಲಾವಿದರನ್ನು ಗಾಢವಾಗಿ ಆವರಿಸಿಕೊಂಡು ಅವರ ಮಾತು, ಬರಹ, ವರ್ತನೆಗಳಲ್ಲಿ ಗಣನೀಯ ಮಾರ್ಪಾಡು ತಂದಿದ್ದು ನಿಜ. ಆದರೆ ಇವರೆಲ್ಲ ಸಮಾಜದ ಮೇಲೆ ಬೀರುವ ಪರಿಣಾಮ ಪರೋಕ್ಷವಾದದ್ದು. ನೇರವಾಗಿ ಕ್ರಿಯಾಶೀಲ ರಾಜಕೀಯದಲ್ಲಿ ತೊಡಗಿಕೊಂಡವರು ಮಾತ್ರ ಜನರ ಬದುಕಿನ ಕ್ರಮವನ್ನು ನೇರವಾಗಿ ಪ್ರಭಾವಿಸಬಲ್ಲರು. ಈ ಹಿನ್ನೆಲೆಯಲ್ಲಿ ನಮ್ಮ ರಾಜಕಾರಣಿಗಳು ಮಾತ್ರ ಈ ನಿಟ್ಟಿನಲ್ಲಿ ಸಾಧಿಸಿದ್ದು ಕಡಿಮೆ. ಜೆ.ಪಿ ಚಳವಳಿಯಿಂದ ಬಂದ ನಮ್ಮ ಅನೇಕ ನಾಯಕರು ತಮ್ಮ ವೈಯಕ್ತಿಕ ರಾಜಕೀಯ ತೀಟೆಗಳಿಗಾಗಿ ಬೇರೆ ಪಕ್ಷಗಳಿಗೆ ವಲಸೆ ಹೋದರು. ಅಲ್ಲಿಯಾದರೂ ಲೋಹಿಯಾ ಆದರ್ಶಗಳನ್ನು ಪಾಲಿಸುತ್ತಾ ಅನನ್ಯರಾಗಿ ಉಳಿಯಲಿಲ್ಲ. ಉದಾಹರಣೆಗೆ ಲೋಹಿಯಾ ಅವರು ನಖಶಿಖಾಂತ ವಿರೋಧಿಸಿದ ನೆಹರೂ ಪ್ರಣೀತ ವಂಶಾಡಳಿತವನ್ನು ಇಂದು ಕಾಂಗ್ರೆಸ್ ಸೇರಿದ ಯಾವ ಲೋಹಿಯಾ ವಾದಿಯೂ ಖಂಡಿಸುವ ಪರಿಸ್ಥಿತಿಯಲ್ಲಿ ಇಲ್ಲ, ಹಾಗೆಯೇ ಬ್ರಾಹ್ಮಣ-ಬನಿಯಾ ಕೂಟ ಇಂದು ಜಾಗತಿಕ ಮಟ್ಟದಲ್ಲಿ ಕೋಮುವಾದ-ಬಂಡವಾಳಶಾಹಿಯ ಪ್ರಚಂಡ ರೂಪ ತಳೆದು ತಾಂಡವನೃತ್ಯ ಆಡುತ್ತಿರುವಾಗ ಇವರು ಅದನ್ನು ಪ್ರಶ್ನಿಸುವ ಎದೆಗಾರಿಕೆಯನ್ನು ತೋರುವಂತಿಲ್ಲ.

ಲೋಹಿಯಾ ಸಮಾಜವಾದ ಎಂಬುದು ಮುಗಿದುಹೋದ ಅಧ್ಯಾಯವೆಂದು ಖಾತ್ರಿಯಾಗಿದ್ದರೆ ಮಾತ್ರ ನಮ್ಮ ಲೋಹಿಯಾವಾದಿಗಳು ತಮ್ಮ ಸಾಧನೆಯ ಮೈಲಿಗಲ್ಲುಗಳ ಲೆಕ್ಕ ಹಾಕುತ್ತಾ ಕುಳಿತಿರಲಿ-ವೃದ್ಧಾಶ್ರಮದ ಹಳಬರ ಹಾಗೆ. ಆದರೆ, ಈ ಸಿದ್ಧಾಂತಕ್ಕೆ ಅನೇಕ ಸಾಧ್ಯತೆಗಳಿವೆ ಎಂಬ ಭರವಸೆ ಹೊಂದಿರುವವರು ಮಾತ್ರ, ಶಿವಸುಂದರ್ ಅವರು ಸರಿಯಾಗೇ ಸೂಚಿಸಿದಂತೆ, ನಿರ್ದಾಕ್ಷಿಣ್ಯವಾದ ಆತ್ಮವಿಮರ್ಶೆಯಲ್ಲಿ ತೊಡಗುವುದು ಒಳ್ಳೆಯದು. ಆದರೂ ಒಂದು ಎಚ್ಚರಿಕೆ; ಈ ಆತ್ಮ ವಿಮರ್ಶೆ, ಶವಪರೀಕ್ಷೆ ಎಂಬುದು ಕೂಡಾ ಒಂದು ಚಟವಾಗಿಬಿಡುವ ಸಾಧ್ಯತೆಯೂ ಇದೆ-ತುರಿಕೆಯಲ್ಲೇ ಸುಖ ಕಾಣುವ ಚರ್ಮ ರೋಗಿಗಳ ಹಾಗೆ...



● ಚಂಪಾ


ಪೋರ್ಕಿ ಆನಂದನ ಮಾನ ಹರಾಜು!

ಅದೆಷ್ಟು ಅಮಾಯಕ ಹೆಣ್ಣುಮಕ್ಕಳ ಕಣ್ಣೀರೋ? ಮೋಸ ಹೋದ ಹೆಣ್ಣು ಮಕ್ಕಳ ಹಿಡಿಹಿಡಿ ಶಾಪವೋ? ಅಥವಾ ವಿಕೃತ ಮನಸ್ಸಿನ ಪುಂಡನೊಬ್ಬನಿಗೆ ಸಿಕ್ಕ ಶಿಕ್ಷೆಯೋ ಗೊತ್ತಿಲ್ಲ. ಆದರೆ ಯು-2 ಆನಂದ ಎಂಬ ಅಪಾಪೋಲಿಯೊಬ್ಬ ಮಾಡಿದ ಅನ್ಯಾಯದ ಲೆಕ್ಕವೆಲ್ಲಾ ಒಟ್ಟೊಟ್ಟಿಗೇ ಚುಕ್ತಾ ಆದಂತೆ ಕಾಣುತ್ತಿದೆ.


ಭರಣಿ

ಯು-2 ಆನಂದ ಯಾನೆ ಜಿಮ್ ಆನಂದ ಎಂಬ ಹಂದಿ ಮೂತಿಯ ಹುಡುಗ ಬೆಂಗಳೂರಿನ ವಿಜಯನಗರದ ಮಾರೇನಹಳ್ಳಿಯಲ್ಲಿ ಸ್ವಂತದ್ದೊಂದು ಜಿಮ್ ನಡೆಸಿಕೊಂಡು, ತನ್ನ ಪೋರ್ಕಿ ಪಟಾಲಂನೊಂದಿಗೆ ರೋಡ್ ರೋಮಿಯೋ ಥರಾ ಅಲೆದುಕೊಂಡಿದ್ದವನು. ಆದರೆ ಈತನನ್ನು ಉದಯ ಟೀವಿಯವರು ಕ್ಯಾಮೆರಾ ಮುಂದೆ ನಿಲ್ಲಿಸಿ, ಹರಟೆ ಹೊಡೆಯಲು ಬಿಟ್ಟಿದ್ದೇ ಬಂತು, ಈತನ ದೇಹ ಕೂಡ ಭೂಮಿ ಮೇಲೆ ನಿಲ್ಲದಂತಾಗಿ ಹೋಯಿತು.

ಈತನ ಅದೃಷ್ಟ ಎಂತಹದ್ದು ನೋಡಿ. ಈ ಆನಂದ ಉದಯ ಟೀವಿ ಸೇರಿದ್ದೂ, ಕಾಮಿಡಿ ಟೈಂ ಗಣೇಶ ಗೋಲ್ಡನ್ ಸ್ಟಾರ್ ಆಗಿದ್ದೂ ಒಂದೇ ಸಮಯ... ಕಾಮಿಡಿ ಟೈಂ ಎಂಬ ಕಾರ್ಯಕ್ರಮವನ್ನು ನಡೆಸಿಕೊಡುತ್ತಿದ್ದ ಗಣೇಶ



ಹರಿಪ್ರಿಯಾ ಜೊತೆ ಆನಂದ್

ಸಿನಿಮಾದಲ್ಲಿ ಅವಕಾಶ ಗಿಟ್ಟಿಸಿಕೊಂಡು ಇದ್ದಕ್ಕಿದ್ದ ಹಾಗೆ ದೊಡ್ಡ ಹೀರೋ ಆದ. ಅದೇ ಟೈಮಿಗೆ ಉದಯ ಟೀವಿಯವರು 'ಯು-2' ಎಂಬ ಮರಿ ಚಾನೆಲ್‌ವೊಂದನ್ನೂ ಆರಂಭಿಸಿದರು. ಐದಾರು ಜನ ನಿರೂಪಕರನ್ನು ಸೇರಿಸಿಕೊಂಡರು. ಅವರಲ್ಲಿ ಈ ಆನಂದನೂ ಒಬ್ಬ. ಕ್ಯಾಮೆರಾ ಮುಂದೆ ನಿಂತು ನಿರೂಪಣೆ ಮಾಡು ಎಂದರೆ, ಚಿಕೂನ್ ಗುನ್ಯಾ ಬಂದವನಂತೆ ನುಲಿಯುತ್ತಿದ್ದ ಈ ಪೋಕರಿ ಹುಡುಗನಿಗೆ ತಾನೊಬ್ಬ ಸ್ಟಾರ್ ಎಂಬ ಭ್ರಮೆ ಅಮರಿಕೊಂಡುಬಿಟ್ಟಿತು.

ಉದ್ಯೋಗಸ್ಥರು, ಜವಾಬ್ದಾರಿಯುತ ವ್ಯಕ್ತಿಗಳ್ಯಾರೂ ಇಂಥ ಕಾರ್ಯಕ್ರಮಗಳಿಗೆ ಕರೆ ಮಾಡಿ ಹರಟೆ ಹೊಡೆಯುವುದಿಲ್ಲ. ಕೆಲಸಕಾರ್ಯವಿಲ್ಲದ ಪುಂಡರು, ಬದುಕು ಗೊತ್ತಿಲ್ಲದ ಕಾಲೇಜು ಯುವಕ-ಯುವತಿಯರೇ ಇಂತಹ ಕಾರ್ಯಕ್ರಮಗಳಿಗೆ ಕರೆ ಮಾಡಿ ಮಾತಾಡುವುದು. ಹೀಗೆ ಕರೆ ಮಾಡಿದ ಪ್ರೇಕ್ಷಕರೊಂದಿಗೆ ತಲೆ ಬುಡವಿಲ್ಲದ ಮಾತುಗಳನ್ನಾಡುತ್ತಾ, ಲಂಗುಲಗಾಮಿಲ್ಲದವನಂತೆ ಆಡಿಕೊಂಡೇ ಆನಂದ ಒಂದಿಷ್ಟು ಪಾಪ್ಯುಲಾರಿಟಿ (!) ಪಡೆದ. ಊರಗಲವಿರುವ ತನ್ನ ಮೂತಿ ಮೋರೆಯನ್ನು ಯದ್ವಾತದ್ವಾ ತಿರುಗಿಸುತ್ತಾ ಚಳಿಜ್ವರ ಬಂದಂತೆ ಆಡುತ್ತಿದ್ದ. 'ನೀವು ಓವರ್‌ಾಗಿ ಆಡ್ತೀರಾ' ಅಂತ ಕರೆ ಮಾಡಿದ ವೀಕ್ಷಕರೇ ಕೆಲವೊಮ್ಮೆ ರೇಗಿಸುತ್ತಿದ್ದರು. ಇಂಥ ಆನಂದನಿಗೆ ಕ್ರಮೇಣ ತಾನೂ ಕೂಡಾ ಗೋಲ್ಡನ್ ಸ್ಟಾರ್ ಗಣೇಶನಂಥೇ ಆಗಬೇಕು, ಸಿನಿಮಾದಲ್ಲಿ ನಟಿಸಬೇಕು ಎಂಬ ಹುಚ್ಚು ಶುರುವಾಯಿತು.

ಅದೇ ಹೊತ್ತಿಗೆ ಕನ್ನಡ ಚಿತ್ರರಂಗದಲ್ಲಿಯೂ ರಿಯಲ್ ಎಸ್ಟೇಟ್ ದುಡ್ಡು ಓಡಾಡಲು ಶುರು ಆಯಿತ್ತಲ್ಲಾ? ಕೆಂಗೇರಿ ಶ್ರೀನಿವಾಸ್ ಮತ್ತು ವಿಷ್ಣುಕಾಂತ್ ಸೇರಿ 'ಮನಸುಗಳ ಮಾತು ಮಧುರ' ಎಂಬ ಇಷ್ಟುದ್ದ ಹೆಸರಿನ ಸಿನಿಮಾ ಆರಂಭಿಸಿದರು. ಗಾಂಧಿನಗರದಲ್ಲಿ ತಿರುಪೆ ಎತ್ತುತ್ತಿದ್ದ ಮಂಜು ಮಸ್ಕಲ್‌ಮಟ್ಟಿ ಎಂಬ ಮಹಾನುಭಾವ "ನಾನೇ ಈ ಚಿತ್ರದ ನಿರ್ದೇಶಕ" ಅಂತಾ ಧುತ್ತೆಂದು ಎದ್ದುಕುಳಿತ. ಸಿನಿಮಾ ಮುಗಿದು ತಿಂಗಳುಗಳು ಕಳೆದರೂ ಜೋತುಬಾಯಿ ಆನಂದನ ಮುಖವನ್ನು ನೋಡಿ ಯಾವೊಬ್ಬ ವಿತರಕರೂ ಸಿನಿಮಾವನ್ನು ಕೊಂಡುಕೊಳ್ಳುವ ಮನಸ್ಸು ಮಾಡಲಿಲ್ಲ. ಕಡೆಗೆ 'ಮುಂಗಾರು ಮಳೆ'ಯ ಇ. ಕೃಷ್ಣಪ್ಪ ನಿರ್ಮಾಪಕ ಶ್ರೀನಿವಾಸನ ಗೋಳು ನೋಡಲಾರದೇ ತಮ್ಮ 'ಈಕೆ ಎಂಟರ್‌ಪ್ರೈಸಸ್'ನ ಮೂಲಕ ವಿಶಾಲ ಕರ್ನಾಟಕಕ್ಕೆ ಹಂಚಿಕೆ ಮಾಡಿದರು. 'ಮುಂಗಾರು ಮಳೆ'ಯ ಕಲೆಕ್ಷನ್ ಅನ್ನು ಮೂಟೆಗಟ್ಟಲೆ ತುಂಬಿಕೊಂಡುಬರುತ್ತಿದ್ದ ಕೃಷ್ಣಪ್ಪನವರ ಹುಡುಗರು ಚೀಲ ಕಿತ್ತುಹೋಗುವಂತೆ ಒದರಿದರೂ 'ಮಾತು ಮಧುರ'ಕ್ಕೆ ನಾಲ್ಕಾಣೆಯ ಕಲೆಕ್ಷನ್ ಉದುರಲಿಲ್ಲ!

ಒಮ್ಮೆ ಮಾಗಡಿ ಬಳಿ ಈ ಸಿನಿಮಾದ ಚಿತ್ರೀಕರಣದ ಸಂದರ್ಭದಲ್ಲಿ ಚಿತ್ರೀಕರಣ ವೀಕ್ಷಿಸಲು ಬಂದಿದ್ದ ಸ್ಥಳೀಕರ ಬಳಿ ಕ್ಯಾತೆ ತೆಗೆದು, ಮಟ್ಟಸವಾಗಿ ಏಟು ತಿಂದಿದ್ದ ಆನಂದ. ನಂತರ ಈ ಚಿತ್ರದ ನಾಯಕನಟಿ ಹರಿಪ್ರಿಯಾ ಎಂಬ ಎಳೇ ಹುಡುಗಿಯೊಂದಿಗೆ ಈತನ ಹೆಸರು ತಳುಕು ಹಾಕಿಕೊಂಡಿತು. 'ಹರಿಪ್ರಿಯಾ ಮತ್ತು ಆನಂದನ ನಡುವೆ ಲವ್ ಶುರುವಾಗಿದೆಯಂತೆ, ಇಬ್ಬರೂ ಮದುವೆಯಾಗ್ತಾರಂತೆ..' ಎಂಬ ಕಥೆಗಳು ಗಾಂಧಿನಗರದಲ್ಲಿ ಹುಟ್ಟಿಕೊಂಡವು. ಆದರೆ ಅಷ್ಟೊತ್ತಿಗಾಗಲೇ ಹರಿಪ್ರಿಯಾ ನಾಯಕಿಯಾಗಿ ಸಿಕ್ಕಾಪಟ್ಟೆ ಪಾಪ್ಯುಲಾರಿಟಿ ಪಡೆದು ಹಗಲೂ, ರಾತ್ರೀ ಬ್ಯುಸಿಯಾಗಿ ಆನಂದನತ್ತ ತಿರುಗಿನೋಡುವುದನ್ನೇ ಬಿಟ್ಟುಬಿಟ್ಟಳು. ಅಲ್ಲಿಗೆ ಆನಂದನ ಬದುಕಿನಲ್ಲಿ ಹರಿಪ್ರಿಯಾ ಎಂಬ ಮುಗ್ಧಾತಿಮುಗ್ಧ ಬಾಲೆಯ ಚಾಪ್ಟರ್ ಸಹ ಕ್ಲೋಸ್ ಆಯ್ತು. ಈ ನಡುವೆ ಉದಯ ಟೀವಿಯಲ್ಲಿ ನಿರೂಪಕಿಯಾಗಿ ನಂತರ ದುನಿಯಾ ವಿಜಯ್ ಜೊತೆ 'ಯುಗ' ಚಿತ್ರದಲ್ಲಿ ನಾಯಕಿಯಾಗಿ ನಟಿಸಿದ್ದ ಕಾವ್ಯಾ ಶಾಸ್ತ್ರೀ ಎಂಬ ಪೋರಿಯೊಂದಿಗೂ ಈತನ ಹೆಸರು ಮಾರ್ದನಿಸುತ್ತಿತ್ತು.



ಬಾರ್ನಾ ಬಂದಳು...

ಅದೇ ಹೊತ್ತಿಗೆ ಆನಂದ 'ನನ್ನೆದೆಯಾ ಹಾಡು' ಅನ್ನೋ ಮತ್ತೊಂದು ಚಿತ್ರಕ್ಕೆ ನಾಯಕನಾಗಿ ಬಿಟ್ಟಿದ್ದ. ಈ ಚಿತ್ರಕ್ಕೆ ರಮ್ಯಾ ಬಾರ್ನಾ ಎಂಬ ಮಡಿಕೇರಿಯ ಬಡಗಿಯೊಬ್ಬಳು ನಾಯಕಿಯಾಗಿದ್ದಳು. ಒಂದ್ಹತ್ತು ದಿನ ಬಾಂಬೆಯಲ್ಲಿದ್ದು ಬಂದಿದ್ದ ಆನಂದ ರಮ್ಯಾ ಬಾರ್ನಾ ಜೊತೆ ಬಹಿರಂಗವಾಗೇ ತಿರುಗಾಡಲು ಶುರುಮಾಡಿದ. ಆನಂದನ ಅದೃಷ್ಟಕ್ಕೆ 'ನನ್ನೆದೆಯಾ ಹಾಡು' ಕುಂಟುತ್ತಾ ತೆವಳುತ್ತಾ ವರ್ಷಗಟ್ಟಲೆ ಚಿತ್ರೀಕರಣ ನಡೆಸುತ್ತಿತ್ತು. ಹೀಗೆ ಸಿನಿಮಾ ಚಿತ್ರೀಕರಣ ಎಳೆದಷ್ಟೂ ಆನಂದ ಮತ್ತು ಬಾರ್ನಾರ ಸಂಬಂಧ ಗಟ್ಟಿಗೊಳ್ಳುತ್ತಲೇ ಇತ್ತು...

ಸದ್ಯ ಯೋಗರಾಜ ಭಟ್ಟರ 'ಪಂಚರಂಗಿ' ಚಿತ್ರದಲ್ಲಿ ಸೆಕೆಂಡ್ ಹೀರೋಯಿನ್ ಆಗಿರುವ ರಮ್ಯಾ ಬಾರ್ನಾ ಮೂಲತಃ ಮಡಿಕೇರಿ ಟೌನ್‌ನ ಓಂಕಾರೇಶ್ವರ ದೇವಸ್ಥಾನದ ಏರಿಯಾದವಳು. ಈಕೆ ಬೆಳೆದದ್ದೆಲ್ಲಾ ಬೆಂಗಳೂರಿನಲ್ಲೇ. ಜ್ಯೋತಿ ನಿವಾಸ್ ಕಾಲೇಜಿನಲ್ಲಿ 'ಟ್ರಾವೆಲ್ ಮತ್ತು ಟೂರಿಸಂ ಕೋರ್ಸ್' ಮುಗಿಸಿದ್ದ ಬಾರ್ನಾಳಿಗೆ ಮೊದಮೊದಲು ಅವಕಾಶ ಸಿಕ್ಕಿದ್ದು 'ನೀನ್ಯಾರೆ?' ಚಿತ್ರದಲ್ಲಿ. ಆಮೇಲೆ ಶರಣ್ ಗಬ್ಬೂರು ಎಂಬ ಕುಖ್ಯಾತ ನಿರ್ದೇಶಕ ತನ್ನ 'ಹನಿ ಹನಿ' ಚಿತ್ರದಲ್ಲಿ ಈಕೆಗೊಂದು ಸಣ್ಣ ಪಾರ್ಟ್ ನೀಡಿದ್ದ. ಆಮೇಲೆ ಆನಂದನೊಂದಿಗೆ 'ಹಾಡು' ಹೇಳಲು ಆರಂಭಿಸಿದ್ದಳು. ಮಾಡಿರುವುದು ಮೂರೂ ಮತ್ತೊಂದು ಸಿನಿಮಾವಾದರೂ ಈಕೆ ದಿನವಿಡೀ ಪಿವಿಆರು, ಕಾಫಿಡೇ ಮತ್ತು ರಾತ್ರಿಯಾಗುತ್ತಿದ್ದಂತೇ ನೈಟ್ ಔಟ್ ಪಾರ್ಟಿಗಳಲ್ಲಿ ಕುಣಿದಾಡುತ್ತಾ ಎಲ್ಲೆಂದರಲ್ಲಿ ಕಾಣಿಸಿಕೊಳ್ಳುತ್ತಾಳೆ..


ಬಾರ್ನಾ ಜೊತೆ ಆನಂದ್



'ಜೋಕ್'ನಿಂದ ಟ್ರ್ಯಾಜಿಡಿ ಫಾಲ್ಸ್‌ಗೆ...

ಆನಂದನ ಮೊದಲ ಸಿನಿಮಾ ಬಿಡುಗಡೆಯಾಗಿ ಎರಡನೇ ವಾರಕ್ಕೇ ಎತ್ತಂಗಡಿಯಾಯಿತು. ಇನ್ನು ಎರಡನೇ ಸಿನಿಮಾ ಆರಂಭವಾಗಿ ವರ್ಷಗಳು ಉರುಳಿದರೂ ಸಿನಿಮಾ ಪೂರ್ಣಗೊಂಡಿಲ್ಲ. ಹೀಗಿರುವಾಗ ಗಾಂಧಿನಗರದವರು ಆನಂದನನ್ನು ಮೂಸಿಯೂ ನೋಡಲಿಲ್ಲ. ಒಂದಿಷ್ಟು ದಿನ ಟೀವಿ ನಿರೂಪಣೆಯಿಂದ ದೂರ ಉಳಿದಿದ್ದ ಆನಂದ ಮತ್ತೆ 'ಜೋಕ್ ಫಾಲ್ಸ್' ಅನ್ನೋ ಕಾರ್ಯಕ್ರಮದ ಮೂಲಕ ನಿರೂಪಣೆ ಆರಂಭಿಸಿದ. ಈತನ 'ಜೋಕ್ ಫಾಲ್ಸ್'ಗೆ ಕರೆ ಮಾಡಿದ ಭರಣಿಯೇ ಇವತ್ತು ಆನಂದ ತೋಡಿದ ಟ್ರ್ಯಾಜಿಡಿ ಹೊಂಡಕ್ಕೆ ಬಿದ್ದು ಒದ್ದಾಡುತ್ತಿರುವ ಹೆಣ್ಣುಮಗಳು.

ಪ್ರಾಮಾಣಿಕರಾದ ನಿರೂಪಕರಾರೂ ಕಾರ್ಯಕ್ರಮಕ್ಕೆ ಕರೆ ಮಾಡಿದ ವೀಕ್ಷಕರ ನಂಬರ್ ಅನ್ನು ತಮ್ಮ ಪರ್ಸನಲ್ ಫ್ರೆಂಡ್‌ಶಿಪ್‌ಗಾಗಿ ಬಳಸಿಕೊಳ್ಳುವುದಿಲ್ಲ. ಆದರೆ ಆನಂದ ಮಾತ್ರ ತನ್ನ ಪ್ರೋಗ್ರಾಂಗೆ ಕರೆ ಮಾಡಿದ್ದ ಭರಣಿಯ ನಂಬರ್ ಅನ್ನು ಪಡೆದು ಆಕೆಯೊಂದಿಗೆ ಫ್ಲರ್ಟ್ ಮಾಡಲು ಶುರು ಮಾಡಿದ. ಯಾವಾಗ ಆಕೆ ಇಂಜಿನಿಯರಿಂಗ್ ಪದವೀಧರೆ, ಸಂಪದ್ಭರಿತ ಕುಟುಂಬದ ಹಿನ್ನೆಲೆ ಹೊಂದಿರುವ ಹುಡುಗಿ ಎಂದು ಗೊತ್ತಾಯಿತೋ, ಆನಂದ ಆಕೆಯನ್ನು ಲವ್ ಮಾಡುವ ನಾಟಕವಾಡಿದ. ಯಲಹಂಕದಲ್ಲಿ ನೆಲೆಸಿರುವ ಭರಣಿಯ ತಂದೆ ಶಿವರಾಮ್ ದೇವನಹಳ್ಳಿಯಲ್ಲಿ ಜಮೀನು, ಆಸ್ತಿಗಳನ್ನು ಹೊಂದಿರುವ ಮನುಷ್ಯ. ಹೀಗಾಗಿ ಆನಂದ 'ಮದುವೆಯಾದರೆ ನಿನ್ನನ್ನೇ' ಎಂದು ಹಠ ಹಿಡಿದ. ಈತನ ಲಂಪಟತನವನ್ನು ಅರಿಯದ ಭರಣಿ ಕೂಡಾ ಮನೆಯವರ ವಿರೋಧದ ನಡುವೆಯೇ 'ಆನಂದನೇ ಬೇಕು' ಎಂದು ಹಠ ಹಿಡಿದಳು. ಅವರಿಬ್ಬರು ಬೇರೆಬೇರೆ ಜಾತಿಯವರಾದರೂ 'ಹೇಗಾದರೂ ಆಗಲಿ' ಎಂದು ಅವರಿಬ್ಬರ ಪೋಷಕರು ಕೊನೆಗೂ ತಮ್ಮ ಒಪ್ಪಿಗೆಯನ್ನು ನೀಡಿದರು. ಕೇಜಿಗಟ್ಟಲೆ ಒಡವೆ, ವಸ್ತ್ರ ಕೊಡಿಸಿ 2009ರ ಜನವರಿ 27ರಂದು ಧರ್ಮಸ್ಥಳದಲ್ಲಿ ಮದುವೆಯನ್ನೂ ಮಾಡಿದರು.

ಮದುವೆಯಾಗಿ ಒಂದೆರಡು ತಿಂಗಳು ಕಳೆದ ನಂತರವಷ್ಟೇ ಆನಂದನ ಅಸಲೀ ಹಣೆಬರಹ ಭರಣಿಗೆ ಗೊತ್ತಾಗಲು ಶುರುವಾಗಿದ್ದು. "ನನ್ನ ಎರಡನೇ ಸಿನಿಮಾ ಬಿಡುಗಡೆಯಾದರೆ ನನಗೆ ಒಳ್ಳೇ ಸ್ಟಾರ್‌ಡಮ್ ಸಿಗುತ್ತೆ. ಹೇಗಾದರೂ ಮಾಡಿ ಅದನ್ನು ರಿಲೀಸ್ ಮಾಡಿಸಬೇಕು. ನನಗೆ ನಿಮ್ಮಪ್ಪನಿಂದ ಐವತ್ತು ಲಕ್ಷ ರೂಪಾಯಿ ಹಣ ಕೊಡಿಸು" ಎಂದು ಆನಂದ ಭರಣಿಯನ್ನು ಪೀಡಿಸಲು ಶುರುಮಾಡಿದ. ಮದುವೆಯಾದ ಒಂದೆರಡು ತಿಂಗಳಿಗೇ ಐವತ್ತು ಲಕ್ಷ ಕೇಳಿದರೆ, ಮಾವ ಎಂಥ ಕುಬೇರನಾದರೂ ತಕ್ಷಣವೇ ಎತ್ತಿಕೊಡುವುದಿಲ್ಲ. ಅಂತೆಯೇ ಭರಣಿಯ ತಂದೆ ಕೂಡಾ ಈತ ವರಾತ ತೆಗೆದಾಗಲೆಲ್ಲಾ ಒಂದೋ ಎರಡು ಲಕ್ಷ ಕೈಗಿಟ್ಟು ತೆಪ್ಪಗಾದರು. ಆದರೆ ಈ ಕಿರಾತಕನ ಹಿಂಸೆಯನ್ನು ಎಷ್ಟು ದಿನ ಅಂತ ಭರಣಿ ತಡೆದುಕೊಂಡು ಸುಮ್ಮನಿದ್ದಾಳು?


ಈತನ ಒತ್ತಾಯಕ್ಕೆ ಮಣಿದು ಸುಮಾರು ಇಪ್ಪತ್ತೈದು ಲಕ್ಷ ರೂಪಾಯಿ ಬೆಲೆಬಾಳುವ ಒಡವೆಗಳನ್ನೆಲ್ಲಾ ಆನಂದನ ಮಡಿಲಿಗೆ ಸುರಿದಳು. ನಿಜಸಂಗತಿ ಏನೆಂದರೆ, 'ನನ್ನೆದೆಯ

ಯು-2 ಎಂಬ ಕೊಂಪೆ!

ಯು-2 ವಾಹಿನಿಯ ಹಣೆಬರಹವೇ ಇಷ್ಟು. ಇಲ್ಲಿ ಯಾವುದೂ ನೆಟ್ಟಗಿಲ್ಲ. ಇಲ್ಲಿನ ನಿರೂಪಕರಿಗೆ ತಿಂಗಳಿಗೆ ಸಿಕ್ಕೋದು ಬರೀ ಐದೂವರೆ ಸಾವಿರ ಸಂಬಳ ಮಾತ್ರ. ಚಾನೆಲ್‌ಗೆ ಸೇರಿದ ಮೊದಲೆರಡು ತಿಂಗಳು ಪ್ರೊಬೆಷನರಿ ಪೀರಿಯೆಡ್ ಎಂಬ ನಪದಲ್ಲಿ ಬಿಟ್ಟಿ ಚಾಕರಿ ಬೇರೆ ಮಾಡಬೇಕು. ನೋಡಲು ಸ್ವಲ್ಪ ಸುಂದರವಾಗಿರುವ ಹುಡುಗಿಯರಿಗೆ, ಈ ಕಾರ್ಯಕ್ರಮದಲ್ಲಿ ಕಾಣಿಸಿಕೊಂಡರೆ ಸಿನಿಮಾದಲ್ಲಿ ಛಾನ್ಸು ಸಿಗುತ್ತದೆ ಎಂಬ ಹಂಬಲ. ಈ ಕಾರಣಕ್ಕಾಗಿ ಮಾಡಿದ ಕೆಲಸಕ್ಕೆ ಕಾಸು ಕೊಟ್ಟರೂ ಸರಿ, ಬಿಟ್ಟರೂ ಸರಿ ಹೋಗಿ ಆ್ಯಂಕರಿಂಗ್ ಮಾಡಿಬರುತ್ತಾರೆ.

ಯು-2 ಚಾನೆಲ್‌ನಲ್ಲಿ ಹರೀಶ್ ಎಂಬ ನುಂಗಣ್ಣನೊಬ್ಬನಿದ್ದಾನೆ. ಆವನಿಗೂ ಆನಂದನಿಗೂ ಅದೆಂಥದ್ದೋ ವಿಚಿತ್ರ ಗೆಳೆತನ. ನಿರೂಪಣೆಯ ಛಾನ್ಸು ಪಡೆಯಲು ಆಡಿಷನ್‌ಗೆ ಬರುವ ಹುಡುಗಿಯರನ್ನು ಈ ಹರೀಶ, ಆನಂದ ಮತ್ತು ಜಿತು ಎಂಬ ಮೂವರೇ ಸೆಲೆಕ್ಟ್ ಮಾಡೋದು. ಹಾಗೆ ಸೆಲೆಕ್ಟ್ ಆಗಬೇಕೆಂದರೆ ಇವರ ಸಕಲ ಆಸೆಗಳನ್ನೂ ಆ ಹುಡುಗಿಯರು ಈಡೇರಿಸಬೇಕು; ಕನಕಪುರ ರಸ್ತೆಯಲ್ಲಿರುವ ರೆಸಾರ್ಟ್‌ಗಳಿಂದ ಹಿಡಿದು ಗೋವಾ ಬೀಚ್‌ತನಕ ಇವರು ಕರೆದಲ್ಲೆಲ್ಲಾ ಹುಡುಗಿಯರು ಪಿಕ್‌ನಿಕ್ ಹೋಗಬೇಕು- ಇದು ಕಳೆದ ಮೂರು ವರ್ಷಗಳಿಂದ ಯು-2 ಛಾನೆಲ್‌ನಲ್ಲಿ ನಡೆದುಕೊಂಡುಬಂದಿರುವ ಅಘೋಷಿತ ಸಂಪ್ರದಾಯ!

ಅಶಿಸ್ತಿನ ಪ್ರಜೆ ಆನಂದ ಇದ್ದಕ್ಕಿದ್ದ ಹಾಗೆ ಪ್ರತ್ಯಕ್ಷನಾಗಿ ಚಾನೆಲ್ ಸೇರುತ್ತಾನೆ. ಹಾಗೆಯೇ ಹೇಳದೇಕೇಳದೇ ನಾಪತ್ತೆಯಾಗುತ್ತಾನೆ. ಆದರೂ ಈತನಿಗೆ ಅದರ ಮುಖ್ಯಸ್ಥ ಹರೀಶನಿಂದ ಎಲ್ಲದಕ್ಕೂ ವಿನಾಯ್ತಿ ದೊರೆಯುತ್ತದೆ. ಅದೇ ಬೇರೊಬ್ಬ ನಿರೂಪಕ, ನಿರೂಪಕಿ ಒಂದು ದಿನದ ರಜೆ ಪಡೆಯಬೇಕೆಂದರೆ, ಹದಿನೈದಿಪ್ಪತ್ತು ದಿನಗಳ ಮುಂಚೆಯೇ ಪರ್ಮಿಷನ್ ಕೇಳಬೇಕು. ಈ ಕಾರಣಕ್ಕೇ ಚಾನೆಲ್‌ನ ಉಳಿದ ಸಿಬ್ಬಂದಿ ಹರೀಶ ಮತ್ತು ಆನಂದನನ್ನು ಕಂಡರೆ ಉರಿದುರಿದು ಬೀಳುತ್ತಾರೆ.


ಹರೀಶ್

ಇವರಿಬ್ಬರ ಅರಾಜಕ ನಡವಳಿಕೆ ಈಗ ಉದಯ ಟೀವಿಯ ಮ್ಯಾನೇಜ್‌ಮೆಂಟ್‌ಗೂ ಗೊತ್ತಾಗಿದೆಯಂತೆ. ಈ ವಿಚಾರವಾಗಿ ಚಾನೆಲ್‌ನಲ್ಲಿ ಸಾಕಷ್ಟು ವಾದ-ವಿವಾದಗಳೂ ಭುಗಿಲೆದ್ದಿವೆ. ಒಟ್ಟಿನಲ್ಲಿ ಈ ಪುಂಡಪೋಕರಿಗಳಿರುವವರೆಗೂ ಯು-2 ಎಂಬ ವಾಹಿನಿ ಒಂದು ಕೊಂಪೆಯಾಗೇ ಉಳಿಯುತ್ತದೆ...

'ಆನಂದ'ಮಯವಾಗದ ಬಾರ್ನಾ ಬದುಕು....



ನಿಜಕ್ಕೂ ನೋಡಿದರೆ ರಮ್ಯಾ ಬಾರ್ನಾ ನಾಯಕಿಯಾಗಿ ಒಳ್ಳೆ ಹೆಸರು ಮಾಡಬಹುದಿತ್ತು, ಈಕೆ ಕೊಂಚ ದುಂಡಗಿದ್ದರೂ ಒಬ್ಬ ನಟಿಗೆ ಬೇಕಾದ ಅರ್ಹತೆಗಳು ಈಕೆಯಲ್ಲಿವೆ. ಆನಂದನ ಕನೆಕ್ಷನ್ನು ಬಿಟ್ಟಿದ್ದರೆ ಈ ಹುಡುಗಿಗೆ ಒಳ್ಳೇ ಭವಿಷ್ಯವಿತ್ತು.

ಪ್ರಕಾಶ್ ರೈ ಮುಖ್ಯ ಪಾತ್ರದಲ್ಲಿ ನಟಿಸಿದ್ದ ತಮಿಳಿನ 'ಮಧ್ಯ ಚೆನ್ನೈ' ಮತ್ತು ತೆಲುಗಿನ 'ಕ್ಷುದ್ರ' ಚಿತ್ರಗಳಲ್ಲಿ ಕೂಡಾ ಈಕೆ ನಾಯಕಿಯಾಗಿ ನಟಿಸಿದ್ದಾಳೆ. ಕನ್ನಡದಲ್ಲಿ ಯೋಗರಾಜ ಭಟ್ಟರ ಹೊಸ ಚಿತ್ರ 'ಪಂಚರಂಗಿ'ಯಲ್ಲಿ ನಿಧಿ ಸುಬ್ಬಯ್ಯಳ ಸೋದರಿಯಾಗಿ ಕಾಣಿಸಿಕೊಳ್ಳುತ್ತಿದ್ದಾಳೆ. ಈ ಚಿತ್ರ ಬಿಡುಗಡೆಯಾದ ನಂತರ ರಮ್ಯಾ ಬಾರ್ನಾಗೆ ಒಳ್ಳೇ ಬ್ರೇಕ್ ಸಿಗುತ್ತದೆ ಎಂಬ ಮಾತೂ ಕೇಳಿಬರುತ್ತಿತ್ತು. ಆದರೆ ಬಾರ್ನಾ ಈಗ ಆನಂದಲೋಲನ ವಿವಾದದಲ್ಲಿ ಸಿಲುಕಿರುವುದರಿಂದ ಆಕೆಯ ಕೆರಿಯರ್‌ಗೆ ಕೂಡಾ ಕಪ್ಪು ಚುಕ್ಕೆ ಇಟ್ಟಂತಾಗಿದೆ. ಚಿತ್ರರಂಗದಲ್ಲಿ ತನ್ನ ಭವಿಷ್ಯವನ್ನು ಉತ್ತಮವಾಗಿ ರೂಪಿಸಿಕೊಳ್ಳಬೇಕಿದ್ದ ಬಾರ್ನಾ ಆನಂದನ ವೈವಾಹಿಕ ಜೀವನದಲ್ಲಿ ಮಧ್ಯಪ್ರವೇಶಿಸಿ, ಮತ್ತೊಬ್ಬ ಹೆಣ್ಣುಮಗಳ ಭವಿಷ್ಯವನ್ನೇ ಹಾಳುಮಾಡಲು ಮುಂದಾಗಿದ್ದು ಈಗ ಸ್ವತಃ ಆಕೆಯನ್ನೇ ಅವಮಾನಕ್ಕೆ ತಳ್ಳಿದೆ.

ಇಂಥ ಹುಡುಗಿಯರಿಗೆ ತಿಳಿಹೇಳುವುದಾದರೂ ಹೇಗೆ?

...ಹಾಡು' ಚಿತ್ರದ ಬಿಡುಗಡೆಗೂ ಆನಂದನಿಗೂ ಸಂಬಂಧವೇ ...ದಲಿಲ್ಲ. ಸಂಕಲನಕಾರ ಕೆಂಪರಾಜ್ ಅವರ ಸಹೋದರ ...ದಾಶಿವ ಈ ಚಿತ್ರವನ್ನು ನಿರ್ಮಿಸಿದ್ದರು. ಸದಾಶಿವ ಈ ...ನಿಮಾ ನಿರ್ಮಿಸಲು ಹೋಗಿ ಆರ್ಥಿಕವಾಗಿ ಸಂಕಷ್ಟಕ್ಕೆ ...ದ್ದಿದ್ದು ನಿಜವೇ ಆದರೂ, ಆನಂದನಿಂದ ನಾಲ್ಕಾಣೆಯ ...ಹಾಯವನ್ನೂ ಅವರು ಕೇಳದೇ ಸಾಲಸೋಲ ಮಾಡಿ ...ನಿಮಾ ರಿಲೀಸ್ ಮಾಡಿದ್ದರು. ಆದರೆ ಎರಡನೇ ದಿನಕ್ಕೇ ...ಯೇಟರ್‌ನವರು ಚಿತ್ರದ ರೀಲು ಮತ್ತು ಪೋಸ್ಟರ್ ...ಮೇತ ಈ ಸಿನಿಮಾವನ್ನು ಕಿತ್ತೆಸೆದಿದ್ದರು.

'ನನ್ನೆದೆಯ ಹಾಡು'ವನ್ನು ಬಿಡುಗಡೆ ಮಾಡಬೇಕು ...ಂದು ಬೂಸಿ ಬಿಟ್ಟಿದ್ದ ಆನಂದನಿಗೆ ಈಗ ಭರಣಿಯಿಂದ ...ಣ, ಒಡವೆ ಪೀಕಲು ಯಾವ ನೆಪವೂ ಉಳಿದಿರಲಿಲ್ಲ, ...ಗಲೇ "ನನಗೆ ಮದುವೆಗೆ ಮುಂಚೆಯೇ ತುಂಬಾ ಅಫೇರ್ ...ತ್ತು, ರಮ್ಯಾ ಎಂಬಾಕೆಯನ್ನು ನಾನು ಲವ್ ಮಾಡುತ್ತಿದ್ದೇನೆ" ...ಂದು ನೇರವಾಗಿ ಭರಣಿಯ ಮುಂದೆಯೇ ಹೇಳಿಕೊಳ್ಳಲು ...ರು ಮಾಡಿದ್ದಾನೆ ಈ ಡುಬಾಕ್ಕೋರ್ ಆನಂದ. ಹೊಸತಾಗಿ ...ದುವೆಯಾಗಿ, ನೂರೆಂಟು ಕನಸುಗಳ ಗೋಪುರಗಳನ್ನು ...ರ್ಮಿಸಿಕೊಂಡಿದ್ದ ಹುಡುಗಿಯ ಬಳಿ ಬಂದು ತಾನು ...ಮೂರನ್ನೋ ಲವ್ ಮಾಡ್ತಿದೀನಿ' ಎಂದು ಹೇಳಿದರೆ ...ಾವ ಹೆಣ್ಣುಮಗಳಿಗೆ ತಾನೆ ಎದೆ ಧಸಕ್ ಎನ್ನುವುದಿಲ್ಲ? ...ನ್ನೂ ಒಂದು ಹೆಜ್ಜೆ ಮುಂದೆ ಹೋದ ಆನಂದ ರಮ್ಯಾ ...ಬಾರ್ನಾಳನ್ನು ನೇರವಾಗಿ ಮನೆಗೆ ಕರೆತಂದು ತನ್ನ ತಂದೆತಾಯಿ ...ಮುಂದೆಯೇ "ಈಕೆಯನ್ನೂ ನಾನು ಮದುವೆಯಾಗ್ತೀನಿ" ...ಂದಿದ್ದಾನೆ. ಭರಣಿಯ ಮೊಬೈಲಿಗೆ ಕರೆ ಮಾಡಿದ ರಮ್ಯಾ ...ಬಾರ್ನಾ ಸಹ "ನೀನು ಆನಂದನಿಗೆ ಡೈವೋರ್ಸ್ ನೀಡಿಬಿಡು. ...ವನು ನಾನು ಲವ್ ಮಾಡ್ತಾ ಇದೀವಿ. ಮದುವೆನೂ ...ಗ್ತೀವಿ" ಎಂಬ ಅವಿವೇಕದ ಮಾತುಗಳನ್ನಾಡಿದ್ದಾಳೆ... ...ರಣಿ ಮೊಬೈಲಿಗೆ ಹತ್ತಾರು ಮೆಸೇಜುಗಳನ್ನು ಕಳುಹಿಸಿ ...ಾಕ್ಸ್ ನೋಡಿ) ಮೆಂಟಲ್ ಟಾರ್ಚರ್ ನೀಡಿದ್ದಾಳೆ... ...ದನ್ನೆಲ್ಲ ಸಹಿಸಲಾಗದ ಭರಣಿ ಯಲಹಂಕದ ತನ್ನ ...ವರುಮನೆಯಲ್ಲಿ, ಟಾಯ್ಲೆಟ್ಟಿಗೆ ಹಾಕುವ ಫಿನಾಯಿಲ್ ...ುಡಿದು ಆತ್ಮಹತ್ಯೆಗೆ ಯತ್ನಿಸಿದ್ದಾಳೆ. ಆದರೆ ಆಕೆಯ ತಂದೆ, ...ಾಯಿ ಭರಣಿಯನ್ನು ಆಸ್ಪತ್ರೆಗೆ ಸೇರಿಸಿದ್ದರಿಂದ ಸಾವಿನ ಅಪಾಯದಿಂದ ಪಾರಾಗಿದ್ದಾಳೆ.

ಇದನ್ನು ಹೀಗೇ ಬಿಟ್ಟರೆ ಸರಿಹೋಗುವುದಿಲ್ಲ ಎಂದು ಅರಿತ ಭರಣಿ ಮತ್ತು ಆಕೆಯ ಪೋಷಕರು ಮೇ 14ರಂದು ತ್ಯಾಗರಾಜನಗರ ಮಹಿಳಾ ಠಾಣೆಗೆ ದೂರು ನೀಡಿದ್ದಾರೆ. ತನ್ನನ್ನು ವಂಚಿಸಿ ಮದುವೆಯಾಗಿದ್ದಲ್ಲದೆ, ಬೇರೊಬ್ಬ ಹೆಣ್ಣಿನೊಂದಿಗೆ ಚಕ್ಕಂದವಾಡುತ್ತಿರುವ ಆನಂದನ ವಿರುದ್ಧ ಆತನ ಹೆಂಡತಿ ಭರಣಿಯೇ ತಿರುಗಿಬಿದ್ದಿದ್ದಾಳೆ. ಆನಂದ ಮಾಡಿದ ತಪ್ಪಿಗೆ ಆತನ ಪೋಷಕರ ಮೇಲೂ ಕೇಸು ದಾಖಲಾಗಿದೆ. ನಾಲ್ಕೈದು ದಿನಗಳ ಕಾಲ ನ್ಯಾಯಾಂಗ ಬಂಧನದಲ್ಲಿದ್ದ ಆನಂದ ಪರಪ್ಪನ ಅಗ್ರಹಾರದ ನೀರು ಸಾರು, ಮುದ್ದೆಯ ರುಚಿ ನೋಡಿ, ಸದ್ಯ ಷರತ್ತುಬದ್ಧ ಜಾಮೀನಿನ ಮೇಲೆ ಹೊರಗೆ ಬಂದಿದ್ದಾನೆ.

ಫ್ಲರ್ಟ್ ಮಾಡೋ ಹವ್ಯಾಸ...

ಮೊನ್ನೆ ಪೊಲೀಸರಿಂದ ಅರೆಸ್ಟ್ ಆಗಿ, ಈತನ ಅಪ್ಪಾವತಾರಗಳು ಹೊರಬೀಳುವ ತನಕ ಬಹಳಷ್ಟು ಮಂದಿಗೆ ಈತನಿಗೆ ಮದುವೆಯಾಗಿರುವ ವಿಚಾರವೇ ಗೊತ್ತಿರಲಿಲ್ಲ. ಯಾಕೆಂದರೆ ಆನಂದ ತಾನೊಬ್ಬ ಸಂಸಾರಸ್ಥ ಎಂದು ಗೊತ್ತಾಗಿಬಿಟ್ಟರೆ ಹುಡುಗಿಯರನ್ನು ಪಟಾಯಿಸುವುದು ಕಷ್ಟ ಎಂದು ತನ್ನ ಮದುವೆ ವಿಚಾರವನ್ನು ಗೌಪ್ಯವಾಗೇ ಇಟ್ಟಿದ್ದ. "ನನಗೆ ಇನ್ನೂ ಮದುವೆ ಆಗಿಲ್ಲ.." ಎಂದು ಹೆಣ್ಣುಮಕ್ಕಳನ್ನು ನಂಬಿಸಿ, ಲವರ್ ಥರಾ ಫ್ಲರ್ಟ್ ಮಾಡುತ್ತಿದ್ದ. ರಮ್ಯಾ ಬಾರ್ನಾ ಈತನ ಜೊತೆ ಎರಡು ವರ್ಷದಿಂದ ಕುಂಟಾಬಿಲ್ಲೆ ಆಡುತ್ತಿದ್ದರೂ, ಆನಂದನಿಗೆ ಮದುವೆಯಾಗಿರುವ ವಿಚಾರ ಸ್ವತಃ ಬಾರ್ನಾಳಿಗೇ ಗೊತ್ತಿರಲಿಲ್ಲ ಎಂದರೆ ಈತ ಎಂಥ ಗುಳಿಗೆ ಸಿದ್ದ ಎಂದು ಲೆಕ್ಕಹಾಕಿ.

ಇಂಥ ಸುದ್ದಿಗಳನ್ನು ಎಷ್ಟೇ ಗೌಪ್ಯವಾಗಿಟ್ಟರೂ ಒಂದಲ್ಲಾ ಒಂದು ದಿನ ಅದು ಬೀದಿಗೆ ಬಂದು ಮಾನ ಹರಾಜಾಗುವುದು ದಿಟ. ಅಂತೆಯೇ ಆನಂದನ ಕಥೆಯೂ ಈಗ ಹೊರ ಬಿದ್ದು ಗಬ್ಬು ನಾರುತ್ತಿದೆ. ಇನ್ನು ಸಿನಿಮಾ ಇರಲಿ, ಟೀವಿ ಪರದೆ ಮೇಲೆ ಬಂದರೂ ಜನ ಈತನ ಮುಖಕ್ಕೆ ಕ್ಯಾಕರಿಸಿ ಉಗಿಯುವುದು ಗ್ಯಾರೆಂಟಿ..

● ಅರುಣ್ ಕುಮಾರ್.ಜಿ
arunodayagc@gmail.com

ಬಾರ್ನಾ ಕಳಿಸಿದ ಎಸ್ಸೆಮ್ಮೆಸ್ಸುಗಳು..

ಹುಚ್ಚ ಆನಂದನ ಬೆನ್ನಿಗೆ ಬಿದ್ದ ರಮ್ಯಾ ಬಾರ್ನಾ ಎಂಬ ನಟಿ ಆನಂದನ ಪತ್ನಿ ಭರಣಿಗೆ ಕಳುಹಿಸಿದ ಹಲವಾರು ಎಸ್‌ಎಮ್‌ಎಸ್ ರಮ್ಯಾಳ ಹುಚ್ಚಾಟವನ್ನು ಮತ್ತು ಆನಂದನ ಐಲುತನಗಳನ್ನು ತೋರುತ್ತವೆ. ಅಂತಹ ಹಲವು ಎಸ್‌ಎಮ್‌ಎಸ್‌ಗಳನ್ನು ಇಲ್ಲಿ ನೀಡಿದ್ದೇವೆ.

1) Have u ever been to court? U don't know haw badge is. I know bcos my family is filled with lawers. Its vry embarrassing
2) UR mistaken. He wants me he doesn't want u y don't u understand this? Pls calm down n Tnk. Even if m not with him he won't come to u. V had a fight Yest n I told him to go b with u..... Did he come? C m not d prob. He doesn't want to be with u tat's all. Pls realise this.
3) Then u have to keep attending court every month. Don't u have any self respect? Can't u'll finist it outside court? M sayin this bcos its better for u. again u only told me m not bad at heart. Mayb its sometng bout our previous birth tat v had to fall in love wit d same guy. Seriously spkin I had not spkn to Anand all these days. But I know he was in lot on pain. Don't u want d person u love to be happy. I want him to be happy. Tat's y m trying so hard. Swear m not like this. M from a vry good family. But believe me I can do anytng for his happiness. I would give him up but tell me who's goin to be happy. V can keep fighting like this for many years but nobody will get anything. But if u help Anand u'l get out blessings n out love. If u don want me to b with him then I won't. But he's UR love help him. Pls
4) Its not me its u who's going to court. Anyways all d best in life. Especially wit d love of UR life all these days I ding meet him n not talking to him but m gonna call him now I. L C how u separate us. This is a challenge
5) Atleast I live on my own money n I have d guts to live alone. Not like u who is waitin for husband to have mercy on her. N for the miracle tat he's gonna start living with her.
6) Hi good morn. Have u left from Thr? C Thr's no point goin to his house. Meet me in some common plc with all d photos n everything u want to show me.
7) No next week will be too late. U have to cal him. This weekend a vry big tng is goin to hapn. Pls. Its vry imp. Im telling u. Don't u also want him for urself soon? U have to do it by this Friday. Otherwise it'll be too late.

ಸರಕಾರದ ಹಣ, ಮಠದ ಹಣ ಒಂದೇ ಅಲ್ಲವೇನ್ರಿ!

ಗ್ರಾಮಾಭಿವೃದ್ಧಿಯ ಹರಿಕಾರ ನಜೀರ್ ಸಾಹೇಬರು ಗ್ರಾಮಗಳು ತಮ್ಮ ಕೆಲಸವನ್ನು ತಾವೇ ಮಾಡಿಕೊಳ್ಳಬೇಕೆಂದು ಚಿಂತಿಸಿ ಮಂಡಲ ಪಂಚಾಯ್ತಿ ಪಂಚಾಂಗ ತಯಾರಿಸಿ ಹೆಗಡೆಯವರ ಮುಂದಿಟ್ಟಾಗ, "ಜನತಾಪಕ್ಷ ಇನ್ನೂ ಹಳ್ಳಿಗಳ ಕಡೆ ಬೇರು ಬಿಟ್ಟಿಲ್ಲ, ಅದು ಭದ್ರವಾಗಿ ತಳವೂರಲು ನಿಮ್ಮ ಪಂಚಾಂಗ ಸಹಾಯ ಮಾಡುವುದಾದರೆ ಆಗಲಿ" ಎಂದು ಹೆಗಡೆ ಜಿಲ್ಲಾ ಪಂಚಾಯ್ತಿಯನ್ನು ಒಪ್ಪಿಕೊಂಡಿದ್ದರಂತಲ್ಲಾ, ಅದೇ ರೀತಿ ಎಡೂರಪ್ಪನವರೂ ಕೂಡ ಈ ಪಂಚಾಯ್ತಿ ಚುನಾವಣೆಯಲ್ಲಿ ಬಿಜೆಪಿಯು ಗ್ರಾಮ ಭೂಮಿಯಲ್ಲಿ ಬೇರು ಬಿಡಲೆಂದು ಕಾಯುತ್ತಿರಬೇಕಾದರೆ, ಪಂಚಾಯ್ತಿ ಚುನಾವಣೆ ಫಲಿತಾಂಶ ತೀರ ನಿರಾಶೆ ಮೂಡಿಸಿದೆಯಂತಲ್ಲಾ, ಇದನ್ನು ಕಂಡ ಎಡೂರಪ್ಪ ಪಂಚಾಯ್ತಿ ಅಧ್ಯಕ್ಷ ಬಿಜೆಪಿ ಎಂದು ಘೋಷಿಸಿಕೊಂಡು ಅವನು ಕೇಳಿದಷ್ಟು ಕಾಸು ಕೊಡುವೆ ಎಂಬ ಗುಪ್ತ ಸುತ್ತೋಲೆಯನ್ನು ಹೊರಡಿಸುವ ಸನ್ನಾಹದಲ್ಲಿದ್ದಾರಂತಲ್ಲಾ, ಥೂತ್ತೇರಿ!

* * * * * *

"ಸಿ.ಎಂ. ಎಡಿಯೂರಪ್ಪನವರು ಸಿರಿಗೆರೆ ಮಠದಲ್ಲಿ ಹಣವಿಟ್ಟಿದ್ದಾರೆ ಎಂಬುದೆಲ್ಲಾ ಶುದ್ಧ ಸುಳ್ಳು. ವದಂತಿಗಳಿಗೆ ಕಿವಿಗೊಡಬೇಡಿ. ನಮ್ಮ ಮಠದ ಆಡಿಟ್ ವರದಿಯಲ್ಲೂ ಕೂಡ ಸಿ.ಎಂ. ನಿಧಿ ದಾಖಲಾಗಿಲ್ಲ" ಎಂದು ಶಿವಮೂರ್ತಿಸ್ವಾಮಿ ಘೋಷಿಸಿದ್ದಾರಂತಲ್ಲಾ, ಮುಂದುವರಿದ ಶಿವಮೂರ್ತಿ ಶಿವಾಚಾರಿಗಳು, "ಮಠಗಳು ಸಾರ್ವಜನಿಕರ ಹಣದಿಂದಲೇ ನಡೆಯುತ್ತವೆ. ಹಾಗೆಯೇ ಸರ್ಕಾರವೂ ಸಾರ್ವಜನಿಕರ ಹಣದಿಂದಲೇ ಬದುಕುತ್ತವೆ. ಹಾಗಿದ್ದ ಮೇಲೆ ಸರ್ಕಾರ ಮಠಕ್ಕೆ ಹಣ ಕೊಟ್ಟರೆ ತಪ್ಪೇನ್ನು?" ಎಂದು ತಿಪ್ಪೆಸಾರಿಸಿದ್ದಾರಂತಲ್ಲಾ, ಸ್ವಾಮಿಗಳ ಇಂತಹ ಹೇಳಿಕೆಯಿಂದ ಭಕ್ತಾದಿಗಳು ಮತ್ತೂ ಅನುಮಾನದ ಕಣ್ಣು ಬಿಟ್ಟಾಗ, "ನಮ್ಮ ಏರಿಯಾದ ಅಭಿವೃದ್ಧಿಗೆಂದು 25 ಕೋಟಿ ಕೇಳಿದ್ದೇನೆ. ಇದು ತಪ್ಪಾ? " ಎಂದರಂತಲ್ಲಾ, ಅವರ ಪ್ರಕಾರ ಸಾರ್ವಜನಿಕರ ಸರ್ಕಾರವೊಂದು ಸಾದರ ಸರ್ಕಾರಕ್ಕೆ ಹಣ ಕೊಡುವುದು ತಪ್ಪೇ ಅಲ್ಲವಂತಲ್ಲಾ, ಥೂತ್ತೇರಿ!

ಥೂತ್ತೇರಿ

» ಯಾಹೂ

* * * * * *

ಪುರೋಹಿತರ ಭಾಗಕ್ಕೆ ಆಧುನಿಕ ಮನುವಾಗಿ ಇಳಿವಯಸ್ಸಿನಲ್ಲಿ ಅವತರಿಸಿರುವ ರಾಮಾಜೋಯಿಸರೆಂಬ ಪುರೋಹಿತರು, ಶುದ್ಧ ಬಂಡಾಯದ ಚಂಪಾರ ತಲೆ ಸವರಿ ಕಳಿಸಿದ್ದಾರಂತಲ್ಲಾ, ಜೋಯಿಸನ ಪಕ್ಕ ಕುಳಿತ ಕಾರಣಕ್ಕೆ ತಮ್ಮ ಮೂಲಭೂತ ನಂಬಿಕೆಗಳನ್ನೇ ಈ ಚಂಪ ಸಡಿಲ ಮಾಡಿಕೊಂಡಿದ್ದು ಎಷ್ಟು ಸರಿ ಎಂಬುದು ಹಲವರ ಪ್ರಶ್ನೆಯಾಗಿದೆಯಂತಲ್ಲಾ, ಜೋಯಿಸ ಎಂದರೆ ಪುರೋಹಿತ, ಪುರೋಹಿತನ ಹುಟ್ಟು ಕಸುಬೇ ಪುರೋಹಿತಶಾಹಿ ವ್ಯವಸ್ಥೆಯನ್ನು ಕಾಪಾಡುವುದು. ಭೈರಪ್ಪ ತನ್ನ ಅಸಂಖ್ಯಾತ ಕಾದಂಬರಿಗಳಲ್ಲಿ ಮಾಡುತ್ತಿರುವುದನ್ನೇ ಈ ಜೋಯಿಸರು ಮನುಗ್ರಂಥ ಹಿಡಿದು ಮಾಡುತ್ತಿದ್ದಾರೆ. "ಮನುಸ್ಮೃತಿಯಲ್ಲಿ ಅಸ್ಪೃಶ್ಯತೆ ಕೈಬಿಟ್ಟರೆ ಇನ್ನುಳಿದ ಸಾಲುಗಳು ಸೂರ್ಯಚಂದ್ರ ಇರುವತನಕ ಇರುತ್ತವೆ" ಎಂದು ಹೇಳುತ್ತಿರುವ ಜೋಯಿಸರು ಹೊಸ ಪಾದ್ರಿ ಮತ್ತು ಹೊಸ ಮುಲ್ಲಾನನ್ನು ಮೀರಿಸಿದ್ದಾರಂತಲ್ಲಾ, ಥೂತ್ತೇರಿ!

* * * * * *


ಮಹಾಭಾರತಕ್ಕೆ ಜರಡಿಯಾಡಿಸಿ ತನಗೆ ಬೇಕಾದುದನ್ನು ಬರೆದುಕೊಂಡ ಭೈರಪ್ಪನಂತೆಯೇ ಜನ ಮೆಚ್ಚುವ ನಾಲ್ಕು ಶ್ಲೋಕಗಳನ್ನು ಹೇಳುತ್ತ ಹೊರಟಿರುವ ಜೋಯಿಸರು ಬಿಜೆಪಿ ಸರ್ಕಾರದ ವಕ್ತಾರ, ಮೀಸಲಾತಿ ವಿರೋಧಿ, ಶ್ರೇಣೀಕೃತ ಸಮಾಜದಿಂದ ಯಾವ ತಪ್ಪೂ ಆಗಿಲ್ಲ, ಅದರ ಆಚರಣೆಯಲ್ಲಿ ಒಂದಿಷ್ಟು ಲೋಪಗಳಿರಬಹುದು. ಅದೇನೇ ಆದರೂ ಮುಂದಿನ ಪೀಳಿಗೆಗೆ ಮನುಧರ್ಮ ಶಾಸ್ತ್ರವೇ ಬಾಳಿನ ಬೆಳಕು. ಅದಕ್ಕಿಂತ ಮೊದಲು ಶಾಲಾ ಕಾಲೇಜಿಗೆ ಭಗವದ್ಗೀತೆ ಪಠ್ಯವಾಗಲಿ, ನಂತರ ನಿಧಾನವಾಗಿ ಮನುಧರ್ಮದ ಕೈಪಿಡಿ ನಮ್ಮ ಮಕ್ಕಳ ಕೈಗೆ ಬರಲಿ ಎಂಬ ಕನಸು ಕಾಣುತ್ತಿರುವ ಪುರೋಹಿತರ ಪ್ರತಿನಿಧಿಯಂತಿರುವ ಜೋಯಿಸರನ್ನು ಚಂಪಾರಂತಹವರು ಸಾರಾಸಗಟು ತಿರಸ್ಕರಿಸಬೇಕಲ್ಲವೇ, ಥೂತ್ತೇರಿ!

* * * * * *

ರಾಮಾಜೋಯಿಸರ ಮಾತು, ಮನೋಭಾವ ಮತ್ತು ಬರವಣಿಗೆಯನ್ನು ಗಮನಿಸಿದರೆ, ಸದರಿ ವಿದ್ವಾಂಸರು ಪುತ್ತಿಗೆ ವಿದ್ಯಾಪೀಠದ ಪ್ರಾಂಶುಪಾಲರಾಗಲು ಶುದ್ಧ ಯೋಗ್ಯರೆಂದು ದಸಂಸದ ಮಾಜಿ ಹುಡುಗರು ಹೇಳತೊಡಗಿವೆಯಂತಲ್ಲಾ, ಈ ವಿದ್ಯಾಪೀಠದ ಧ್ಯೇಯೋದ್ದೇಶಗಳೇನೆಂದರೆ ವೈದಿಕ ಸಂಸ್ಕೃತಿಯನ್ನು ಹುಲುಸಾಗಿ ಬೆಳೆಸುವುದು, ನಂತರ ಕಾಪಾಡುವುದು, ಇಡೀ ಶಿಕ್ಷಣ ಸಂಸ್ಕೃತ ಭಾಷೆಯಲ್ಲೇ ಜರುಗುವುದರಿಂದ ಇದಕ್ಕೆ ಪೇಜಾವರಶ್ರೀ ಉಸ್ತುವಾರಿ ಇರುತ್ತದೆ. ಬನ್ನಂಜೆ ಗೋವಿಂದಾಚಾರ್ಯರ ಭಯಂಕರ ಉಪನ್ಯಾಸವಿರುತ್ತದೆ. ಇಷ್ಟಿದ್ದ ಮೇಲೆ ಇಲ್ಲಿ ಕಲಿಯಲು ಬರುವವರು ಯಾರೆಂದು ಬಿಡಿಸಿ ಹೇಳಬೇಕಿಲ್ಲ. ಶ್ರೇಣೀಕೃತ ಸಮಾಜದ ಪುನರುತ್ಥಾನಕ್ಕಾಗಿಯೇ ಇರುವ ಪುತ್ತಿಗೆ ಪೀಠಕ್ಕೆ ಜೋಯಿಸರು ಹೇಳಿಮಾಡಿಸಿದಂತಿರುವುದರಿಂದ ಅಲ್ಲಿಗೆ ಹೋಗಿ ಮಸ್ತಿ ಹೊಸೆಯುವುದು ಸೂಕ್ತವೆಂದು ದಸಂಸದೊಳಗಿನ ಬಿಎಸ್ಪಿಗಳು ಆಡಿಕೊಳ್ಳುತ್ತಿವೆಯಂತಲ್ಲಾ, ಥೂತ್ತೇರಿ!


* * * * * *

ಮತ್ತೊಂದು ವಿದ್ಯಾಪೀಠ ಆರಂಭಗೊಳ್ಳುವ ಸೂಚನೆಯಿದೆಯೆಂದು ನಮಗೊಂದು ಮೆಸೇಜ್ ಬಂದಿದೆಯಲ್ಲಾ, ನಮ್ಮ ಓದುಗರ ಕುತೂಹಲಕ್ಕಾಗಿ ಅದನ್ನಿಲ್ಲಿ ದಾಖಲಿಸಬೇಕಿದೆ. ಬಿಡದಿಯ ನಿತ್ಯಾನಂದಶ್ರಮದಲ್ಲಿ ಸೆಕ್ಶುಯಲ್ ಸೈನ್ಸ್ ಕೋರ್ಸ್ ಆರಂಭವಾಗಲಿದೆಯಂತೆ. ಈಗಾಗಲೇ ತುರ್ತಾಗಿ ಪ್ರಾರಂಭವಾಗಲಿರುವ ಎರಡು ಸಬ್ಜೆಕ್ಟ್‌ಗಳಿಗೆ ಅರ್ಜಿ ಕರೆಯಲಾಗಿದೆ. ರೇಪ್ ಡಿಪಾರ್ಟ್‌ಮೆಂಟಿನ ಹೆಚ್.ಓ.ಡಿ. ಆಗಿ ಪ್ರೊ.ಹಾಲಪ್ಪ, ಡಿಪಾರ್ಟ್‌ಮೆಂಟ್ ಆಫ್ ನರ್ಸಿಂಗ್‌ನ ಹೆಚ್.ಓಡಿ ಆಗಿ ರೇಣುಕಾಚಾರಿ ಈಗಾಗಲೇ ನೇಮಕಗೊಂಡಿದ್ದು ಬರುವ ದಿನಗಳಲ್ಲಿ ಅಬಾರ್ಷನ್, ಡೆಲಿವರಿ ಕುರಿತ ಎಕ್ಸ್‌ಪರ್ಟ್‌ಗಳಿಗಾಗಿ ಬಿಜೆಪಿಯಲ್ಲಿ ಹುಡುಕಲಾಗುತ್ತಿದೆಯಂತಲ್ಲಾ, ಥೂತ್ತೇರಿ!!



ಡಿಸಿಪಿ ನಂಜುಂಡಸ್ವಾಮಿ ಎಂಬ ಜೋಕರ್






ಚಿತ್ರಕೃಪೆ: ಬೆಂಗಳೂರು ಮಿರರ್

ಬೆಂಗಳೂರು ನಗರದ ಸಶಸ್ತ್ರ ಪೊಲೀಸ್‌ಬಲದ ಡಿಸಿಪಿಯಾಗಿರುವ ನಂಜುಂಡಸ್ವಾಮಿ ಎಂಬ ಜೋಕರ್‌ಗೆ ತಾನೇನೂ ಅಭಿನವ ಸುಭಾಷ್ ಚಂದ್ರ ಬೋಸ್ ಎಂಬ ಭ್ರಮೆ ಇದೆ. ಇವನ ಮನೆಯ ಕಾಂಪೌಂಡಿನ ಮೇಲೆ ಸುಭಾಷ್ ಚಂದ್ರ ಬೋಸ್, ಮಹಾತ್ಮ ಗಾಂಧಿ ಮುಂತಾದವರ ಚಿತ್ರ ಬರೆಸಿ ಅವರ ಪಕ್ಕದಲ್ಲೇ ತನ್ನದೂ ಒಂದು ಚಿತ್ರ ಬರೆಸಿಕೊಂಡಿದ್ದಾನೆ. ಹೀಗೆ ದುಂಬಾಲುಬಿದ್ದು ತನ್ನ ಚಿತ್ರ ಯಾಕೆ ಬರೆಸಿಕೊಂಡ ಗೊತ್ತೆ?

ಕರ್ನಾಟಕದ ಐಪಿಎಸ್ ಆಫೀಸರ್‌ಗಳ ಪೈಕಿ ಅತೀ ಉಡಾಳನೂ, ಘನತೆ ಹೀನನೂ ಆಗಿರುವ ಪೊಲೀಸ್ ಎಂದರೆ ಎಂ. ನಂಜುಂಡಸ್ವಾಮಿ.



ಇವನೊಬ್ಬ ಜೋಕರ್ ಕೂಡ.

ಹಾಲಿ ಬೆಂಗಳೂರು ನಗರದ ಸಶಸ್ತ್ರ ಪೊಲೀಸ್‌ಬಲದ (ಸಿಟಿ ಆರ್ಮಡ್ ರಿಸರ್ವ್) ಡಿಸಿಪಿಯಾಗಿರುವ ಈ ನಂಜುಂಡಸ್ವಾಮಿ ಒಂದರ ಹಿಂದೆ ಒಂದರಂತೆ ಹಗರಣಗಳನ್ನು ಸೃಷ್ಟಿಸುತ್ತಿದ್ದಾನೆ. ಯಾರೂ ಮೆಚ್ಚಲೂ ಆಗದ, ಒಪ್ಪಲೂ ಆಗದ ಕೆಲಸ ಮಾಡುವುದೇ ಈ ಉಡಾಳನ ದಿನಚರಿ.

ಮೈಸೂರು ರಸ್ತೆಯ ನಳಂದ ಟಾಕೀಸ್ ಎದುರಿಗಿರುವ ಪೊಲೀಸ್ ಮೈದಾನದ ಬಳಿ ಈ ಸಿಟಿ ಮೀಸಲು ಸಶಸ್ತ್ರ ಪೊಲೀಸರ ಹೆಡ್ ಕ್ವಾಟರ್ಸ್ ಇದೆ. ವರ್ಷಕ್ಕೆರಡು ಬಾರಿ ವರ್ಗಾವಣೆಯ ಒದೆ ತಿನ್ನುತ್ತಾ ಊರೂರು ಅಂಡಲೆಯುತ್ತಿದ್ದ ನಂಜುಂಡಸ್ವಾಮಿ ಇತ್ತೀಚೆಗೆ ಸಿಎಆರ್ ಡಿಸಿಪಿಯಾಗಿ ವಕ್ಕರಿಸಿದ. ಆಗಲೇ ಈತ ಎಂಥ ಹಾಸ್ಯಾಸ್ಪದ ವ್ಯಕ್ತಿ ಎಂಬುದು ಬಯಲಿಗೆ ಬಂತು.

ಈಗ ಬೆಂಗಳೂರು ಮಹಾ ನಗರ ಪಾಲಿಕೆಯವರು ಬೆಂಗಳೂರಿನ ಸರ್ಕಾರಿ ಕಾಂಪೌಂಡಿನ ಗೋಡೆಗಳ ಮೇಲೆಲ್ಲಾ ಅಸಂಬದ್ಧ ಘೋಷಣೆಗಳನ್ನು, ಪೇಂಟಿಂಗ್‌ಗಳನ್ನು ಮಾಡಿಸುತ್ತಿದ್ದಾರೆ. ಪರಿಸರ ಉಳಿಸಿ, ಶಿಕ್ಷಣ ಕೊಡಿಸಿ, ಕರ್ನಾಟಕ ದೇಗುಲಗಳ ಬೀಡು, ನಿಸರ್ಗದ ಹಾಡು.... ಎಂಬಿತ್ಯಾದಿ ಚಿಲ್ಲರೆ ಸ್ಲೋಗನ್‌ಗಳಿವು. ಇದರಿಂದ ಬೆಂಗಳೂರು ಹಿಂದೆಂದಿಗಿಂತಲೂ ಅಸಹ್ಯವಾಗಿ ಕಾಣೆಸುತ್ತಿದೆ ಎಂಬುದು ಬೇರೆ ಮಾತು. ಆದರೆ ಈ ನಂಜುಂಡಸ್ವಾಮಿ ಇಲ್ಲೂ ಒಂದು ಕಿತಾಪತಿ ಮಾಡಿಬಿಟ್ಟ. ಇವನ ಮನೆಯ ಕಾಂಪೌಂಡಿನ ಮೇಲೆ ಸುಭಾಷ್ ಚಂದ್ರ ಬೋಸ್, ಮಹಾತ್ಮ ಗಾಂಧಿ ಮುಂತಾದವರ ಚಿತ್ರ ಬರೆಸಿ ಅವರ ಪಕ್ಕದಲ್ಲೇ ತನ್ನದೂ ಒಂದು ಚಿತ್ರ ಬರೆಸಿಕೊಂಡಿದ್ದಾನೆ. ಹೀಗೆ ದುಂಬಾಲುಬಿದ್ದು ತನ್ನ ಚಿತ್ರ ಯಾಕೆ ಬರೆಸಿಕೊಂಡ ಗೊತ್ತೆ?

ಇವನು 2005 ರಲ್ಲೊಮ್ಮೆ ವಿಶ್ವಸಂಸ್ಥೆಯ ಶಾಂತಿಪಾಲನಾ ಪಡೆಯ ಭಾಗವಾಗಿ ಕೊಸೊವೊಗೆ ಹೋಗಿ ಹನ್ನೊಂದು ತಿಂಗಳು ಇದ್ದು ಬಂದಿದ್ದ. ಇದೇ ಒಂದು ಮಹಾನ್ ಸಾಧನೆಯೆಂಬಂತೆ. ಇದೊಂದು ವಿರೋಚಿತ ಕಮಾಂಡೊ ಕಾರ್ಯಾಚರಣೆಯೆಂಬಂತೆ ನಂಜುಂಡಸ್ವಾಮಿ ಭ್ರಮಿಸಿಕೊಂಡಿದ್ದಾನೆ. ಹಾಗಾಗಿ ಮನೆ ಕಾಂಪೌಂಡಿನ ಗೋಡೆಯ ಮೇಲೆ ಈ ವೀರನು ಹಾಲಿವುಡ್ ನಟ ಕ್ಲಿಂಟ್ ಈಸ್ಟ್‌ವುಡ್ ತರ ಕೌಬಾಯ್ ಸ್ಟೈಲ್‌ನಲ್ಲಿ ಮೆಕ್ಸಿಕನ್ ಹ್ಯಾಟ್ ಧರಿಸಿ ನೀಡಿರುವ ಪೇಂಟಿಂಗ್ ಕಾಣಿಸಿಕೊಂಡಿದೆ. ಜೊತೆಗೆ ಧೀರ, ಶೂರ, ಭುಜಬಲ ಪರಾಕ್ರಮಿ ಎಂಬಂತಹ ಬರಹಗಳು ಕಾಣಿಸುತ್ತಿವೆ. ಆಶ್ಚರ್ಯ ಏನೆಂದರೆ ಕರ್ನಾಟಕದಿಂದ ಇದುವರೆಗೂ ಸುಮಾರು 15 ಐಪಿಎಸ್ ಪೊಲೀಸ್ ಆಫೀಸರ್‌ಗಳು ಕೊಸೊವೊ, ಸಿಯೊರಾ ಲಿಯೋನ್, ಸೂಡಾನ್, ರುವಾಂಡಗಳಿಗೆ ವಿಶ್ವಸಂಸ್ಥೆಯ ಶಾಂತಿಪಾಲನಾ ಪಡೆಯ ವತಿಯಿಂದ ಹೋಗಿ ಕೆಲಸ ಮಾಡಿ ಬಂದಿದ್ದಾರೆ. ಅಲೋಕ್‌ಕುಮಾರ್, ಅಲೋಕ್ ಮೋಹನ್, ಭಾಸ್ಕರ ರಾವ್, ಅಮರ್ ಕುಮಾರ್ ಪಾಂಡೆ, ಮಧುಕರ್ ಶೆಟ್ಟಿ

ಅಲಟ್ರ್ಟ ರಾಘವೇಂದ್ರ ಎಸ್ಕೇಪ್ ಆದ!

ಇದು ಟೀವಿ ಮೀಡಿಯಾದವರ ಹುಚ್ಚಾಟದ ಪರಮಾವಧಿಯಲ್ಲದೇ ಮತ್ತೇನೂ ಅಲ್ಲ.

ಹಿಮಾಚಲ ಪ್ರದೇಶದಲ್ಲಿ ಅವಿತುಕೊಂಡಿದ್ದ ಸೆಕ್ಸ್ ಸ್ವಾಮಿ ನಿತ್ಯಾನಂದನನ್ನು ಅರೆಸ್ಟು ಮಾಡಿಕೊಂಡು ಬಂದ ಬೆಂಗಳೂರು ಪೊಲೀಸರು ಆತನನ್ನು ಹೆಚ್ಚಿನ ವಿಚಾರಣೆಗೆ ಸಿ.ಐ.ಡಿಗೆ ಒಪ್ಪಿಸಿದ್ದರು. ಸಿ.ಐ.ಡಿ. ಪೊಲೀಸರು ಆತನನ್ನು ಬೆಂಗಳೂರಿನಲ್ಲಿರುವ ಕಾರ್ಲಟನ್ ಹೌಸ್‌ನಲ್ಲಿ ಸೆರೆಯಲ್ಲಿರಿಸಿ ವಿಚಾರಣೆ ನಡೆಸಿದ್ದರು. ಲೈಂಗಿಕ ಹಗರಣದಿಂದ ಮರ್ಯಾದೆ ಕಳೆದುಕೊಂಡು, ಮನೋರೋಗಿಯಂತೆ ವರ್ತಿಸುತ್ತಿದ್ದ ನಿತ್ಯಾನಂದ ಆತ್ಮಹತ್ಯೆ ಮಾಡಿಕೊಂಡರೆ ಏನು ಗತಿ ಎಂದು ಆತನ ಪ್ರತಿಯೊಂದು ಚಲನವಲನಗಳ ಮೇಲೆ ನಿಗಾ



ಸಿಸಿ ಕ್ಯಾಮೆರಾದಲ್ಲಿ ರೆಕಾರ್ಡ್ ಆಗಿರುವ ಸ್ವಾಮಿ

ಇಡುವ ಉದ್ದೇಶದಿಂದ ಅವನನ್ನು ಬಂಧಿಸಿಟ್ಟಿದ್ದ ಕೋಣೆಯಲ್ಲಿ ಸಿ.ಸಿ. ಕ್ಯಾಮೆರಾಗಳನ್ನು ಪೊಲೀಸರು ಅಳವಡಿಸಿದ್ದರು. ನಿತ್ಯಾನಂದ ಉಂಡು, ಹೊದ್ದು ಮಲಗುವುದರಿಂದ, ನವೆಯಾದಾಗ ಕೆರೆದುಕೊಳ್ಳುವ ದೃಶ್ಯಗಳೂ ಅದರಲ್ಲಿ ಅಡಕಗೊಳ್ಳುತ್ತಿದ್ದವು. ವಿಚಾರಣೆಯ ದೃಶ್ಯಗಳನ್ನೂ ಸಹ ಸಾಕ್ಷಿಯ ಕಾರಣಕ್ಕಾಗಿ ಗುಪ್ತ ಕ್ಯಾಮೆರಾದ ಮೂಲಕ ಸಿಐಡಿಯವರು ಸೆರೆಹಿಡಿದಿದ್ದರು.

ಹೀಗೆ ಸೆರೆಹಿಡಿದ ಇಂಥ ಪರಮ ರಹಸ್ಯದ ದೃಶ್ಯಾವಳಿಗಳು ಯಕಶ್ಚಿತ್ ಒಂದು ಖಾಸಗಿ ವಾಹಿನಿಯ, ಕ್ರೈಂ ಕಾರ್ಯ ಕ್ರಮದಲ್ಲಿ ಬಿತ್ತರಗೊಳ್ಳುತ್ತದೆ, ಅದನ್ನು ಲಕ್ಷಾಂತರ ಜನ ನೋಡುತ್ತಾರೆ ಎಂದರೆ ನಮ್ಮ ಸಿಐಡಿಯವರ ಗೌಪ್ಯತೆ ಯಾವ ಮಟ್ಟದ್ದು ಎಂಬುದು ಸಾಮಾನ್ಯರನ್ನೂ ಕೊರೆಯುತ್ತಿತ್ತು. ಸಿಐಡಿಯಂಥ ಮೇಲ್ಮಟ್ಟದ ವಿಚಾರಣೆಗಳು ಹೊರ ಜಗತ್ತಿಗೆ ಈ ರೀತಿಯ ದೃಶ್ಯಾವಳಿಗಳ ರೂಪದಲ್ಲಿ ಬರುತ್ತವೆ ಎಂದರೆ ಅದು ಸುಮ್ಮನೇ ಮಾತಲ್ಲ, ಹಾಗೊಮ್ಮೆ ಅದನ್ನು ಕದ್ದು ತಂದು ಟೀವಿಯಲ್ಲಿ ಬಿತ್ತರಿಸುವುದೂ ಸಾಮಾನ್ಯವಾದ ಅಪರಾಧವೂ ಅಲ್ಲ. ಈಗ ಈ ದೃಶ್ಯಗಳನ್ನು ತನ್ನ ಕಾರ್ಯಕ್ರಮದಲ್ಲಿ ಬಿತ್ತರಿಸಿ, ಇವತ್ತಿಗೆ ಪೊಲೀಸರ ಬಲೆಯಿಂದ ತಪ್ಪಿಸಿಕೊಂಡು ತಿರುಗುತ್ತಿರುವ 'ತನಿಖಾ ಪತ್ರಕರ್ತ'ನ ಹೆಸರು ಎಂ.ಎಸ್. ರಾಘವೇಂದ್ರ.

'ಸಣ್ಣಪುಟ್ಟ ರೌಡಿಗಳಿಂದ ಹಿಡಿದು ದೊಡ್ಡದೊಡ್ಡ ಡಾನ್‌ಗಳ ತನಕ ಇಡೀ ಅಂಡರ್‌ವರ್ಲ್ಡ್ ನನಗೆ ಗೊತ್ತು. ಇಲ್ಲಿನ ಪೊಲೀಸ್ ಇಲಾಖೆಯೇ ನನ್ನ ಕಿಸೆಯಲ್ಲಿದೆ' ಎಂದು ಸ್ಕೋಪು ಹೊಡೆದುಕೊಂಡು ತಿರುಗಾಡುತ್ತಿದ್ದ ರಾಘವೇಂದ್ರ ಎಂಬ ರೋಲ್ ಕಾಲ್ ಆಸಾಮಿ ಈಗ ಅದೇ ಪೊಲೀಸರ ಕಣ್ಣು ತಪ್ಪಿಸಿಕೊಂಡು ತಿರುಗಾಡುತ್ತಿದ್ದಾನೆ.


ಸಿಡಿ ಸಿಕ್ಕಿದ್ದು ಹೇಗೆ?

ಜೆ.ಪಿ. ನಗರದಲ್ಲಿ ಮೋಹನ ಎಂಬ ಸಕಲ ವಿದ್ಯಾಪಾರಂಗತನೊಬ್ಬನಿದ್ದಾನೆ. ಈ ಮಹಾನುಭಾವನನ್ನು ಡಿಸಿಪಿ ಮೋಹನ ಎಂದೂ ಗುರುತಿಸುತ್ತಾರೆ. ಹಾಗೆಂದು ಈತ ಪೊಲೀಸ್ ಅಧಿಕಾರಿಯೇನೂ ಅಲ್ಲ. ಬೆಂಗಳೂರು ದಕ್ಷಿಣ ವಿಭಾಗದ ಪೊಲೀಸ್ ಸ್ಟೇಷನ್ನುಗಳಲ್ಲಿನ ಕಂಪ್ಯೂಟರ್ ಸರ್ವಿಸಿಂಗ್ ಕಾಂಟ್ರಾಕ್ಟುಗಳನ್ನು ಪಡೆದು, ಅಲ್ಲಿನ ಕಂಪ್ಯೂಟರ್ ಗಳನ್ನು ರಿಪೇರಿ ಮಾಡಿಕೊಂಡಿದ್ದವನು. ನಂತರ ಕ್ರೈಂ ಸ್ಟೋರಿ ಕಾರ್ಯಕ್ರಮದಲ್ಲಿ ಕೆಲಸ ಮಾಡುತ್ತೇನೆ ಎಂದು ಹೇಳಿ ಒಂದಷ್ಟು ಡೀಲು ಕುದುರಿಸುತ್ತಿದ್ದವನು. ಕಂಪ್ಯೂಟರ್ ರಿಪೇರಿ ನೆಪದಲ್ಲಿ ಪೊಲೀಸ್ ಸ್ಟೇಷನ್ನುಗಳಲ್ಲಿ ಕಾಣಿಸಿಕೊಳ್ಳುತ್ತಿದ್ದ ಈತ ಮೆತ್ತಗೆ ಅಲ್ಲಿನ ಗುಪ್ತ ವಿಚಾರಗಳನ್ನು ತಿಳಿದುಕೊಂಡು, ಸಣ್ಣಪುಟ್ಟ ಪತ್ರಿಕೆಗಳಿಗೆ ಆಹಾರ ಒದಗಿಸುತ್ತಿದ್ದ. ಎರಡಕ್ಷರ ಬರೆಯಲು ಗೊತ್ತಿಲ್ಲದ ಈ ಗಿರಾಕಿ ಪೊಲೀಸ್ ಠಾಣೆ ಲೆವೆಲ್ಲಿನ ಡೀಲುಗಳನ್ನೂ ಹ್ಯಾಂಡಲ್ ಮಾಡುತ್ತಿದ್ದ.

ತೀರಾ ಇತ್ತೀಚೆಗೆ ಎಂ.ಎಸ್. ರಾಘವೇಂದ್ರನನ್ನು ಟಿ.ವಿ.ಒಂಭತ್ತರ ವಾರೆಂಟ್ ವಿಭಾಗದಿಂದ ಕಿತ್ತೆಸೆದಾಗ ರಾಘವೇಂದ್ರನಿಗೆ ಹೆಗಲುಕೊಟ್ಟು ನಿಂತಹನೂ ಇದೇ ಮೋಹನನೇ. ಮೋಹನ ಮತ್ತು ರಾಘವೇಂದ್ರ 'ಸಿಂಚನ ಕ್ರಿಯೇಷನ್ಸ್' ಎಂಬ ಕಂಪೆನಿ ಶುರುಮಾಡಿದರು. ಉದಯ ಟೀವಿಯಲ್ಲಿ 'ರೆಡ್ ಅಲರ್ಟ್' ಅನ್ನೋ ಕಾರ್ಯಕ್ರಮವನ್ನೂ ಆರಂಭಿಸಿದರು. ಒಂದು ಎಪಿಸೋಡಿಗೆ ನಲವತ್ತು ಸಾವಿರ ರೂಪಾಯಿಗಳನ್ನು ಇವರೇ ಪಾವತಿಸುವ ಕಮರ್ಷಿಯಲ್ ಸ್ಲಾಟ್ ಅದು. ಈ ಕಾರ್ಯಕ್ರಮಕ್ಕೆ ಸಣ್ಣಮಟ್ಟದ ಟಿಆರ್‌ಪಿ ರೇಟಿಂಗ್ ಕೂಡಾ ಇಲ್ಲ. ಹೀಗಿರುವಾಗ ಯಾರು ತಾನೆ ಈ ಕಾರ್ಯಕ್ರಮಕ್ಕೆ ಜಾಹೀರಾತು ಕೊಡುತ್ತಾರೆ?. ಕಾಸು ಕೊಟ್ಟು ಕಾರ್ಯಕ್ರಮ ಪ್ರಸಾರ ಮಾಡಿಸುವ ದರ್ದಾದರೂ ಇವರಿಗ್ಯಾಕಿತ್ತು? ಎಂದರೆ ಅಲ್ಲಿ ಮತ್ತೊಂದು ಸೀಕ್ರೆಟ್ ಓಪನ್ ಆಗುತ್ತದೆ. ಒಂದು ಮೂಲದ ಪ್ರಕಾರ ಈ ಕಾರ್ಯಕ್ರಮಕ್ಕೆ ಪೊಲೀಸ್ ಇಲಾಖೆಯ ಹಿರಿಯ ಅಧಿಕಾರಿಗಳಾದ ಬಲರಾಮೇಗೌಡ, ಪಾಲಾಕ್ಷ ಮತ್ತು ನಿಯತ್ತಿನ ವ್ಯಕ್ತಿ ಎಸ್.ಕೆ. ಉಮೇಶ್‌ರಂಥ ಅಧಿಕಾರಿಗಳು ಹಣ ಹೂಡುತ್ತಿದ್ದಾರಂತೆ; ಅದು ನಿಜವೂ ಇರಬಹುದು.

ಹೀಗೆ ಕಳೆದ ಮೂರು ತಿಂಗಳಿನಿಂದ ಪ್ರಸಾರಗೊಳ್ಳುತ್ತಿರುವ 'ರೆಡ್ ಅಲರ್ಟ್' ಕಾರ್ಯಕ್ರಮದಲ್ಲಿ 'ಟಾಪ್ ಸೀಕ್ರೆಟ್' ಆದ ವಿಡಿಯೋ ದೃಶ್ಯಾವಳಿಗಳು ಬಿತ್ತರಗೊಂಡಿದ್ದು ಮಾತ್ರ ಇಡೀ ಪೊಲೀಸ್ ಇಲಾಖೆಯನ್ನು ಗಾಬರಿಗೆ ಈಡುಮಾಡಿತ್ತು, ಮಾಧ್ಯಮದವರೆಲ್ಲಾ ಚಕಿತಗೊಂಡಿದ್ದರು.

ಕಾರ್ಲಟನ್ ಹೌಸ್‌ನಲ್ಲಿ ಸಿಸಿ ಟೀವಿ ಆಪರೇಟ್ ಮಾಡುವ ಸುರೇಶ್ ಎಂಬಾತ 'ರೆಡ್ ಅಲರ್ಟ್'ನ ಅಧಿಕೃತ ನಿರ್ಮಾಪಕ ಮೋಹನನ ಹಳೇ ದೋಸ್ತಿಯಂತೆ. ಹೀಗಾಗಿ ಸುರೇಶನನ್ನು ಪುಸಲಾಯಿಸಿ, ಈ ದೃಶ್ಯಾವಳಿಗಳ ಸೀಡಿ ಪಡೆದು ಮುಂದೆ ಆಗುವ ಅನಾಹುತಗಳ ಗೊಡವೆಗೇ ಹೋಗದೆ, ಕಾರ್ಯಕ್ರಮದಲ್ಲಿ ರಾಜಾರೋಷವಾಗಿ ಟೆಲಿಕಾಸ್ಟ್ ಮಾಡಿಬಿಟ್ಟಿದ್ದಾರೆ. ಯಾವುದೋ ಕೆಲಸಕ್ಕೆ ಬಾರದ ಟೀವಿ



ಪ್ರೋಗ್ರಾಂನಲ್ಲಿ ತಮ್ಮ ಇಲಾಖೆಯ ಗುಪ್ತ ದೃಶ್ಯಗಳು ಪ್ರಸಾರವಾಗುತ್ತದೆ ಎಂದರೆ ಪೊಲೀಸರಾದರೂ ಸುಮ್ಮನೇ ಕೂರುವುದುಂಟೇ? ತಕ್ಷಣ ಕಾರ್ಯಪ್ರವೃತ್ತರಾದ ಪೊಲೀಸರು ಸೀಡಿ ಹೊರಹೋದ ದಾರಿಯನ್ನು ಟ್ರೇಸ್‌ಔಟ್ ಮಾಡಿ, ಅದಕ್ಕೆ ಕಾರಣನಾದ ಸುರೇಶನಿಗೆ ಲಾತ ಕೊಟ್ಟು ಜೈಲಿಗಟ್ಟಿದ್ದಾರೆ. ಇಂಥ ಕಾನೂನುಬಾಹಿರ ಕೃತ್ಯಕ್ಕೆ ಕಾರಣರಾದ ರಾಘವೇಂದ್ರ ಮತ್ತು ಮೋಹನ ಎಂಬ ಪಾಖಂಡಿ ಜೋಡಿ ಈಗ ತಲೆಮರೆಸಿಕೊಂಡು ತಿರುಗುತ್ತಿದೆ.

ಕಳೆದ ಎಂಟತ್ತು ವರ್ಷಗಳಿಂದ ಕ್ರೈಂ ಪತ್ರಕರ್ತನಾಗಿ ಗುರುತಿಸಿಕೊಂಡಿದ್ದ ರಾಘವೇಂದ್ರ ಟ್ಯಾಬ್ಲಾಯ್ಡ್ ಪತ್ರಿಕೆಯೊಂದರ ವರದಿಗಾರನಾಗಿದ್ದ. ಅಲ್ಲಿದ್ದಾಗ ಆತ ಮಾಡಿದ ಎತ್ತುವಳಿ ಕೆಲಸಗಳು ಒಂದಲ್ಲಾ ಎರಡಲ್ಲ. ನಂತರ ಈಟಿವಿಯಲ್ಲೊಂದಷ್ಟು ದಿನ, ಆಮೇಲೆ ಟಿ.ವಿ. ಒಂಭತ್ತರಲ್ಲಿ ಒಂದಷ್ಟು ದಿನ ಕೆಲಸ ಮಾಡಿಕೊಂಡಿದ್ದ. ಮುಜರಾಯಿ ಖಾತೆಯ ಮಾಜಿ ಸಚಿವ ಕೃಷ್ಣಯ್ಯ ಶೆಟ್ಟಿಯ ಬ್ಯಾಂಕ್ ವಂಚನೆ ಪ್ರಕರಣವನ್ನು ಪ್ರಸಾರ ಮಾಡದಿರಲು ತನ್ನ ಸಹಪಾಠೀ ಓಂಕಾರ್ ಉಮೇಶ್ ಎಂಬಾತನೊಂದಿಗೆ ಸೇರಿ 25 ಲಕ್ಷ ಅಮೌಂಟು ಪೀಕಿದ್ದ. ಈ ವಿಚಾರವನ್ನು ಸ್ವತಃ ಕೃಷ್ಣಯ್ಯ ಶೆಟ್ಟಿಯೇ ಟೀವಿ ಒಂಭತ್ತರ ಮುಖ್ಯಸ್ಥ ಮಹೇಂದ್ರ ಮಿಶ್ರಾನ

ತಾ ಧರ್ಮಾಧಿಕಾರಿ ಮುಂತಾದವರೂ ವಿದೇಶಗಳಿಗೆ ೦ಗಿಬಂದಿದ್ದರೂ ತಮ್ಮ ಪಾಡಿಗೆ ಕೆಲಸ ಮಾಡಿಕೊಂಡಿ . ನಂಜುಂಡಸ್ವಾಮಿ ತರಹ ತುತ್ತೂರಿ ಊದಿಕೊಳ್ಳುತ್ತಿಲ್ಲ. ಗ ನೋಡಿದರೆ 'ಇದ್ಯಾಕಯ್ಯ ಹೀಗೆ ಲೋಕನಾಯಕನ ನಿನ್ನ ಚಿತ್ರ ಮಹಾತ್ಮಾ ಗಾಂಧಿ ಜೊತೆ ಹಿಸಿಕೊಂಡಿದ್ದೀಯಾ?' ಅಂತಾ ಕೇಳಿದರೆ 'ನನಗೆ ಗೊತ್ತಿಲ್ಲ, ರ್ಪೊರೇಷನ್ನಿನವರೇ ನನ್ನ ಸಾಧನೆ ನೋಡಿ ಬರೆಸಿದ್ದಾರೆ' ನ್ನುತ್ತಿದ್ದಾನೆ.

'ಇದು ನಿಜಾನಾ?' ಎಂದು ನಗರಪಾಲಿಕೆಯವರನ್ನ ದರೆ 'ಅಯ್ಯೋ ಸ್ವಾಮಿ, ನನ್ನ ಚಿತ್ರ ಬರೆಸಿ ಅಂತ ಾ ತಿಂದು ಬಿಟ್ಟು, ಅದಕ್ಕೆ ಬರೆಸಿದ್ದೀವಿ' ಎನ್ನುತ್ತಿದ್ದಾರೆ. ಈ ನಂಜುಂಡಸ್ವಾಮಿ ಅದಿನ್ನೆಂತಾ ತಿಕ್ಕಲ ಎನ್ನಲು ೇ ಸಾಕ್ಷಿ.

ಅಷ್ಟೇ ಅಲ್ಲ ಇವನು ಕ್ರೂರಿ ಸಹ. ನಾಗರಬಾವಿಯಲ್ಲಿ ನೊಂದು ದೊಡ್ಡ ಬಂಗಲೆ ಕಟ್ಟಿಸುತ್ತಿದ್ದು ಕಟ್ಟಡ ರ್ಮಾಣದ ಕೆಲಸಕ್ಕೆ ಇಪ್ಪತ್ತು ಜನ ಪೊಲೀಸರನ್ನೇ ರ್ಯವಾಗಿ ಬಳಸಿಕೊಳ್ಳುತ್ತಿದ್ದಾನೆ.

ಕಾನೂನಿನಲ್ಲಿ ಇದಕ್ಕೆ ಅವಕಾಶವಿದೆಯಾ? ಪೊಲೀಸ್ ಷಕ್ಕೆಂದು ಸೇರಿರುವ ಅಮಾಯಕ ಯುವಕರನ್ನು ಪೊಲೀಸ್ ಕಾರಿಗಳ ಮನೆ ಕಟ್ಟಲು ಗುಲಾಮರಂತೆ ದುಡಿಸಿಕೊಂಡರೆ ದು ಹೇಳುವ ಗಂಡೆದೆಯವನೊಬ್ಬ ಇಡೀ ಬೆಂಗಳೂರು ಲೀಸ್ ಇಲಾಖೆಯಲ್ಲಿ ಕಾಣುತ್ತಿಲ್ಲ.

ನಾಚಿಕೆ ಮಾನ ಮರ್ಯಾದೆ ಮೂರು ಬಿಟ್ಟಿರುವ ಜುಂಡಸ್ವಾಮಿಯ ಪೊಲೀಸ್ ಚರಿತ್ರೆ ಕರಾಳವಾಗಿದೆ. ಪಿ ಸರ್ಕಾರ ಅಧಿಕಾರಕ್ಕೆ ಬಂದ ಹೊಸದರಲ್ಲಿ 2008 ಜನವರಿಯಲ್ಲಿ ಹಾವೇರಿಯಲ್ಲಿ ರೈತರ ಮೇಲೆ ಲಿಬಾರ್ ಮಾಡಿಸಿ ಇಬ್ಬರನ್ನು ಕೊಲ್ಲಿಸಿದ ಪಾತಕಿ ೇ ನಂಜುಂಡಸ್ವಾಮಿ. ಇವನೊಮ್ಮೆ ಹಾಸನ ಎಸ್‌ಪಿ ಗಿದ್ದಾಗ ದೇವೇಗೌಡರಿಗೆ ಎಷ್ಟು ಸಿಟ್ಟು ಬರಿಸಿದ್ದನೆಂದರೆ ಜುಂಡಸ್ವಾಮಿಯನ್ನು ಹಾಸನದಿಂದ ಓಡಿಸದಿದ್ದರೆ ಖ್ಯಮಂತ್ರಿ ಎಸ್.ಎಂ. ಕೃಷ್ಣ ಮನೆಯೆದುರು ಧರಣಿ ರುವುದಾಗಿ' ದೇವೇಗೌಡ ಎಚ್ಚರಿಕೆ ನೀಡಿದ್ದರು. ಹೀಗೆ ೋದಲ್ಲೆಲ್ಲಾ ಥೀ... ಥೂ ಎನಿಸಿಕೊಂಡೇ ಬರುವ ಜುಂಡಸ್ವಾಮಿ ಎಂಬ ಜೋಕರ್‌ಗೆ ತಾನೇನೊ ಅಭಿನವ ಭಾಷ್ ಚಂದ್ರ ಬೋಸ್ ಎಂಬ ಭ್ರಮೆ ಇದೆ. ರಾಜ್ಯ ಲೀಸ್ ಮುಖ್ಯಸ್ಥರಾದ ಅಜಯ್‌ಕುಮಾರ್ ಸಿಂಗ್‌ರವರು ಜೋಕರ್ ನಂಜುಂಡಸ್ವಾಮಿ ವಿರುದ್ಧ ಸರಿಯಾಗಿ ಖೆ ಮಾಡಿಸಿ ಶಿಕ್ಷಿಸಲಿ.

ನಂಜುಂಡಸ್ವಾಮಿಯಂತಹ ಜೋಕರ್‌ಗಳಿಂದ ಪೊಲೀಸ್ ಾಖೆಯ ಮಾನ ಉಳಿಯುವುದಿಲ್ಲ. ●

ಗೆ ಊದಿಬಿಟ್ಟಿದ್ದರು. ಹೀಗಾಗಿ ಮಿಶ್ರಾ ರಾಘಣ್ಣನ ರೆಂಟ್' ವಾಪಾಸು ಪಡೆದು ಹೊರಗೆ ಓಡಿಸಿದ್ದರು.

ಮಾಜಿಮಂತ್ರಿ ಗುರುಪಾದಪ್ಪ ನಾಗಮಾರಪಲ್ಲಿ ಮಗ ೂರ್ಯಕಾಂತ್ ಶೂಟ್ ಔಟ್ ಪ್ರಕರಣದಲ್ಲಿ ಖಕೊಂಡಾಗ "ನಿಮ್ಮ ಫೇವರ್ ಆಗಿ ರಿಪೋರ್ಟ್ ಾಡ್ತೀನಿ" ಎಂದು ಹೇಳಿ 80 ಗ್ರಾಂನ ಚಿನ್ನದ ಸರವನ್ನು ಾಗಿ ಪಡೆದಿದ್ದ ಉಪ್ಪಿನಕಾಯಿ ಡೀಲರ್ ಗಿರೀಶ್ ಮಟ್ಟಣ್ಣಾ ಬ ಮಂಕುದಿಣ್ಣೆಯನ್ನು ಬಳಸಿಕೊಂಡು ಪಟ್ಟಣಗೆರೆಯಲ್ಲಿ ಬ್ಬನ ಜಮೀನುಗಳಿಗೆ ಬೇಲಿ ಹಾಕಿಸಿ, ಹಣ ವಸೂಲಿ ಾಡುವ ಪ್ಲಾನು ಮಾಡಿದ್ದ. ಆದರೆ ಅದು ವರ್ಕ್‌ಔಟ್ ಗಲಿಲ್ಲ. ಸಾರಾಯಿ ವಿರೋಧಿ ಆಂದೋಲನದ ಎ.ಟಿ. ಬು ಎಂಬ ನಿಯತ್ತಿನ ಹೋರಾಟಗಾರ ಕೊಲೆಯಾದಾಗ ಿ ಒಂಭತ್ತರಲ್ಲಿ 'ಅವರ ಪತ್ನಿಯೇ ಕೊಲೆ ಮಾಡಿಸಿದ್ದಾರೆ' ಬ ರೀತಿಯ ಎಪಿಸೋಡು ಮಾಡಿದ್ದ.

ಕಾಸುಪಡೆದು ಸತ್ಯವನ್ನು ತಿರುಚುವ ರಾಘವೇಂದ್ರ ಮಕೂರು ರಸ್ತೆ ಶಿರಾ ಬಳಿ ಜಮೀನು, ಬೆಂಗಳೂರಿನ ಗೇರಿ ಉಪನಗರದಲ್ಲೊಂದು ಬಂಗಲೆ ಎಲ್ಲವನ್ನೂ ಪಾದಿಸಿದ್ದಾನೆ. ರಶ್ಮಿ ಆಳ್ವಾ ಎಂಬ ಹುಡುಗಿಗೆ ಮದುವೆ ಾಗುತ್ತೇನೆ ಎಂದು ನಂಬಿಸಿದ ರಾಘವೇಂದ್ರ ಬೇರೊಬ್ಬ ಡುಗಿಯೊಂದಿಗೆ ಮದುವೆಯಾಗಲು ಮುಂದಾಗಿದ್ದ. ಗ ಆ ಹುಡುಗಿ ರಶ್ಮೀ ಮದುವೆಮನೆಗೇ ನುಗ್ಗಿ ರಾದ್ಧಾಂತ ಾಡಿಬಿಟ್ಟಿದ್ದಳು.


ಇಂಥ ಹತ್ತಾರು ಫೋರ್‌ಟ್ವೆಂಟಿ ಕೆಲಸಗಳು, ರೋಲ್ ಲ್‌ಗಳಿಗೆ ಹೆಸರಾದ ರಾಘವೇಂದ್ರ ಈಗ ತನ್ನ ೂತೆಗಾರರೊಂದಿಗೆ ಸೇರಿ ಸರ್ಕಾರಿ ಸುಪರ್ದಿನಲ್ಲಿರಬೇಕಾದ ಸಿಟಿವಿ ದೃಶ್ಯಾವಳಿಗಳನ್ನೇ ಕದಿಯುವ ಮೂಲಕ ಮಾಡ ರದ ಅಪರಾಧಕ್ಕೆ ಕೈ ಇಟ್ಟಿದ್ದಾನೆ.

ತಲೆ ಮರೆಸಿಕೊಂಡಿರುವ ರಾಘವೇಂದ್ರ ಸದ್ಯ ಹೊಸ ರ್ಗದಲ್ಲಿ ಬೇಕರಿ ಇಟ್ಟುಕೊಂಡಿರುವ ಭಾವನ ನೆಯಲ್ಲೋ ಅಥವಾ ತನ್ನ ಹುಟ್ಟೂರಾದ ಪಾವಗಡದ ಂಡಿಕಸಿರಾದಲ್ಲೋ ಇರಬಹುದು ಎಂಬ ಸುಳಿವು ದೊರೆ ದೆ.

ಕ್ರೈಮು, ಕ್ರಿಮಿನಲ್‌ಗಳನ್ನು ವಿಜೃಂಭಿಸುವ ಇಂಥ ತ್ರಕರ್ತರೂ ಕ್ರಿಮಿನಲ್‌ಗಳಾದರೆ ಅಚ್ಚರಿಯೇನು?! ●

ಕುವೆಂಪುಗೂ ಪಂಚಾಚಾರ್ಯರಿಗೂ ಎತ್ತಿಂದೆತ್ತಣ ಸಂಬಂಧವಯ್ಯಾ?

ವಿಚಾರವಾದಿ ಕುವೆಂಪು ಅವರ ಹೆಸರಿಟ್ಟುಕೊಂಡಿರುವ ವಿಶ್ವವಿದ್ಯಾಲಯದಲ್ಲಿ ಬಿಜೆಪಿ ಸರ್ಕಾರ 'ಶ್ರೀ ಶ್ರೀ ಜಗದ್ಗುರು ಪಂಚಾಚಾರ್ಯ ಅಧ್ಯಯನ ಪೀಠ'ವನ್ನು ಸ್ಥಾಪಿಸಲು ಹೊರಟಿರುವುದು ಕುವೆಂಪು ಅವರ ವಿಚಾರಧಾರೆಗೆ ಅವಮಾನ ಮಾಡಿದಂತೆ, ಪ್ರಜಾಪ್ರಭುತ್ವದ ತತ್ವಗಳಿಗೆ ದ್ರೋಹ ಬಗೆದಂತೆ. ಚೆಡ್ಡಿಗಳ ಈ ಷಡ್ಯಂತ್ರ ಕುರಿತ ಲೇಖನ ಇಲ್ಲಿದೆ. ●



'ಹುಚ್ಚು ಮುಂಡೆ ಮದುವೆಯಲ್ಲಿ ಉಂಡವನೆ ಜಾಣ' ಎಂಬಂತೆ ಯಡ್ಡಿಯ ಸರಕಾರದಲ್ಲಿ ಅಡ್ಡಾದಿಡ್ಡಿಯಾಗಿ ಆಲೋಚಿಸುವವನೆ 'ಪಂಡಿತ', 'ಬುದ್ಧಿಜೀವಿ'. ಇಲ್ಲದಿದ್ದರೆ, ಕನ್ನಡ ವಿವಿಯ ಭೂಮಿಯನ್ನೇ ಕಬಳಿಸಿ ಅದನ್ನು ಚೆಡ್ಡಿಗಳ ಖೊಟ್ಟಿ ಗ್ಯಾಂಗಿಗೆ ಕೊಡಲು ಸರ್ಕಾರ ಹೊರಡುತ್ತಿತ್ತೇ? ಈಗಿರುವ ವಿಶ್ವವಿದ್ಯಾಲಯಗಳನ್ನು ಸ್ವಚ್ಛಗೊಳಿಸುವ ಬದಲು ಸಂಸ್ಕೃತಕ್ಕಾಗಿ ಹೊಸ ವಿವಿಯನ್ನು ಪ್ರಾರಂಭಿಸುತ್ತಿತ್ತೇ? ಮುಜರಾಯಿ ಇಲಾಖೆಯ ಸಚಿವ ಎಲ್ಲ ದೇವಾಲಯಗಳಲ್ಲೂ ಯಡಿಯೂರಪ್ಪನವರ ಹೆಸರಿನಲ್ಲಿ ಮಂಗಳಾರತಿ ಮಾಡಬೇಕು ಎಂದು ಆಜ್ಞೆ ಹೊರಡಿಸುತ್ತಿದ್ದನೆ? ಇಪ್ಪತ್ತೊಂದನೆಯ ಶತಮಾನದಲ್ಲಿಯೂ ಶಿವರಾತ್ರಿಯ ದಿನದಂದು ಸರಕಾರದ ಖರ್ಚಿನಲ್ಲಿ ಗಂಗೋತ್ರಿ, ಯಮುನೋತ್ರಿಯ ನದಿಯ ನೀರನ್ನು ತಂದು ಪವಿತ್ರ ಉದಕವೆಂದು ಹಂಚುತಿತ್ತೆ? ಇದೆಲ್ಲ ಅವೈಜ್ಞಾನಿಕ ಹಾಗೂ ಮೂರ್ಖತನದ ಪರಮಾವಧಿಯಲ್ಲದೆ ಮತ್ತೇನು?

ಆದರೆ ನಾಚಿಕೆ ಎಂಬುದೇ ಇಲ್ಲದ, ತಲೆಯಲ್ಲಿ ಕೊಂಚವೂ ಮಿದುಳು ಇಟ್ಟುಕೊಳ್ಳದ, ಪುರೋಹಿತಶಾಹಿ ಬಿಜೆಪಿ ಪಕ್ಷದಿಂದ ಇಂಥ ಅವೈಜ್ಞಾನಿಕ ಆಲೋಚನೆಗಳ ಹೊರತಾಗಿ ಇನ್ನೇನಿರಲು ಸಾಧ್ಯ? ಚೆಡ್ಡಿಗಳ ಇಂಥ ತಲೆಕೆಟ್ಟ ನೀತಿಗಳನ್ನು ಗಮನಿಸಿಯೇ ಹಲವರು ಸರ್ಕಾರಿ ಲಾಭ ಪಡೆಯಲು ಹೊಂಚುಹಾಕುತ್ತಿದ್ದಾರೆ. ಇತ್ತೀಚೆಗೆ ಶಿವಮೊಗ್ಗೆಯಲ್ಲಿರುವ ಕುವೆಂಪು ವಿಶ್ವವಿದ್ಯಾಲಯದ ಸಿಂಡಿಕೇಟ್ ಸಭೆಯು 'ಶ್ರೀ ಶ್ರೀ ಜಗದ್ಗುರು ಪಂಚಾಚಾರ್ಯ ಅಧ್ಯಯನ ಪೀಠ'ವನ್ನು ಸ್ಥಾಪಿಸಲು ಕೋರಿ ರಾಜ್ಯಪಾಲರ ಅನುಮೋದನೆ ಅರ್ಜಿ ಕಳುಹಿಸಿರುವುದೇ ಇದಕ್ಕೆ ಒಂದು ಉದಾಹರಣೆಯಾಗಿದೆ.

ಮೊದಲನೆಯದಾಗಿ, 'ಜಗದ್ಗುರು' ಎಂಬ ಪದವೇ ಪ್ರಜಾಪ್ರಭುತ್ವವನ್ನು ಅಣಕ ಮಾಡುವ ಪದ. ಈ ಪದದಲ್ಲಿ ಸಮಾನತೆ ಎಂಬುದೇ ಇಲ್ಲ, ಇದು ಭೂರ್ಜತನದ ಪಳಿಯುಳಿಕೆ. ಅಸಮಾನತೆ-ಅವೈಜ್ಞಾನಿಕತೆ-ಅಸಂಗತ ಸಂಗತಿಗಳೇ ಇದರ ಮೂಲ ತತ್ವಗಳು.

ಎರಡನೆಯದಾಗಿ, ಪಂಚಾಚಾರ್ಯರ ಅಸ್ತಿತ್ವದ ಬಗೆಗೆ ಸ್ಪಷ್ಟ ಚಿತ್ರಗಳೆ ಇಲ್ಲ. ಜಗತ್ತು ಹುಟ್ಟುವುದಕ್ಕಿಂತ ಮೊದಲೆ - ಅಂದರೆ ಕೈಲಾಸದಲ್ಲಿ ಪರಶಿವನಿಗೆ - ಮತಬೋಧೆಯನ್ನು ಇವರು ಮಾಡಿದವರಂತೆ! ಹರಪ್ಪ ಮಹೆಂಜೋದಾರು ನಾಗರಿಕ ಸಂಸ್ಕೃತಿಯ ದಿನಮಾನಗಳಲ್ಲಿ ಪಂಚಾಚಾರ್ಯರು ಬದುಕಿದ್ದರಂತೆ! ಇವರು ವಿಭೀಷಣನಿಗೆ ಲಿಂಗಧಾರಣೆ ಮಾಡಿದವರಂತೆ! ಮತ್ತೊಂದು ಪರಮಾಶ್ಚರ್ಯದ ಸಂಗತಿಯೆಂದರೆ ಇವರು ಹುಟ್ಟುಸಾವುಗಳಿಂದ ಅತೀತರಾದ ಲಿಂಗೋದ್ಭವರಂತೆ! ಇನ್ನೂ ಸ್ಪಷ್ಟವಾಗಿ ಹೇಳಬೇಕಾದರೆ ತಂದೆ-ತಾಯಿಗಳ ದೈಹಿಕ ಸಂಪರ್ಕ ಇಲ್ಲದೆ ಲಿಂಗದಲ್ಲಿ ಹುಟ್ಟಿದ ಲಿಂಗೋದ್ಭವರಂತೆ! ಇಂತಹ ಅಂತೆಕಂತೆಗಳ ಸಂತೆಯಲ್ಲಿ ಹುಟ್ಟಿದ ಜಗದ್ಗುರುಗಳ ಅಧ್ಯಯನದಲ್ಲಿ ಮಾಡುವುದಾದರೂ ಏನನ್ನು?

ಪಂಚಾಚಾರ್ಯರ ಸುತ್ತ ಇರುವ ಎಲ್ಲ ಕತೆಗಳು ಬರೀ ಭೂಸ. ಅವರ ಬದುಕಿದ, ಬರೆದರೆಂದು ಹೇಳಲಾಗುವ ಎಲ್ಲವೂ ಅಸಂಗತ ಸಂಗತಿಗಳು. ಹದಿನೈದು-ಹದಿನೇಳನೆ ಶತಮಾನದಲ್ಲಿ ರಚಿಸಿರಬಹುದಾದ ಖೊಟ್ಟಿ ಗ್ರಂಥ 'ಸಿದ್ಧಾಂತ ಶಿಖಾಮಣಿ' ಎಂಬ ಪುಸ್ತಕವೇ ಇವರಿಗೆ ಆಧಾರ. ಈ ಕೃತಿಯ ಕುರಿತು ಸಂಪೂರ್ಣವಾಗಿ ಅಧ್ಯಯನ ನಡೆಸಿದ ಹಿರೇಮಲ್ಲೂರ ಈಶ್ವರನ್ ಎಂಬ ಭಾಷಾ ತಜ್ಞ "ಇದು ಕೇವಲ ಒಬ್ಬ ವ್ಯಕ್ತಿ ಬರೆದ ಕೃತಿ ಅಲ್ಲ" ಎಂದು ಸ್ಪಷ್ಟವಾಗಿ ಹೇಳಿದ್ದಾರೆ.

ಮಗದೊಂದು ಚೋದ್ಯದ ಸಂಗತಿಯೆಂದರೆ ಈ ಪಂಚ ಪೀಠಗಳು ಮೂಲತಃ ಭಿನ್ನ ಭಿನ್ನ ಜನಾಂಗದವರು ಸಂಸ್ಥಾಪಿಸಿದ ಪೀಠಗಳು. ಕಾಲಾನಂತರವಷ್ಟೆ ಅವುಗಳನ್ನೆಲ್ಲ ತಮ್ಮ ಕಬ್ಜಾಕ್ಕೆ ತೆಗೆದುಕೊಂಡ 'ಜಾತಿ ಜಂಗಮರು' ತಮ್ಮ ಅದರಲ್ಲಿ 'ಟೆನೆಂಟ್'ಗಳಾಗಿದ್ದಾರಷ್ಟೇ. ಮೊದಮೊದಲು 'ಚತುರಾಚಾರ್ಯ'ರಾಗಿದ್ದ ಇವರು 'ಪಂಚಾಚಾರ್ಯ'ರಾದದ್ದೂ ಕೂಡ ತೀರ ಇತ್ತೀಚಿನ ಶತಮಾನಗಳಲ್ಲಿ. ಇದು ಅಂಗೈಯಲ್ಲಿರುವ ಹುಣ್ಣಿನಷ್ಟೇ ಸ್ಪಷ್ಟ.

'ಜಟ್ಟಿ ಬಿದ್ದರೂ ಮೀಸೆಗೆ ಮಣ್ಣು ಹತ್ತಿಲ್ಲ' ಎಂದು ಹೇಳುವ ಕಲೆಯನ್ನು ಕರಗತ ಮಾಡಿಕೊಂಡ ಪಂಚಾಚಾರ್ಯರ ಜಗದ್ಗುರು(ಜಾಗದ ಗುರುಗಳು ಅರ್ಥಾತ್ ಜಗದ್ಗುರು)ಗಳು ಲಿಂಗಾಯತರಿಗೆ ನಾವು ಗುರುಗಳು ಎಂದು ಸಾಧಿಸುತ್ತಲೆ ಹೊರಟಿದ್ದಾರೆ. ಹೋಗಲಿ ಇವರು ಬಸವಣ್ಣನವರು ಬಿತ್ತಿ ಬೆಳಸಿದ ಸಂಸ್ಕೃತಿಗೆ ಸೂಕ್ತವಾಗಿ ನಡೆದುಕೊಂಡಿದ್ದರೆ ಅವರನ್ನು ಒಪ್ಪಿಕೊಳ್ಳಬಹುದಿತ್ತೇನೋ? ಆದರೆ ಬಸವಣ್ಣನವರ ಹಾಗೂ ಅಂದಿನ ಶರಣರ ವಿಚಾರಗಳು ಉತ್ತರವಾದರೆ ಈ ಪಂಚಾಚಾರ್ಯ ಜಗದ್ಗುರುಗಳ ವಿಚಾರಗಳು ದಕ್ಷಿಣ ದಿಕ್ಕಿಗೆ ಕರೆದುಕೊಂಡು ಒಯ್ಯುತ್ತವೆ. ಬಸವಣ್ಣನವರ ವಿಚಾರಧಾರೆ ಇಂದಿನ ಪ್ರಜಾಪ್ರಭುತ್ವದ ಹಾಗೂ ವೈಜ್ಞಾನಿಕ ದಿನಮಾನಗಳಲ್ಲೂ ಪ್ರಸ್ತುತವೆನಿಸಿದರೆ ಈ ಜಗದ್ಗುರುಗಳ ವಿಚಾರಗಳೆಲ್ಲ ಅಸಂಗತ ಹಾಗೂ ಅವೈಜ್ಞಾನಿಕ.

ಹೀಗೆ ತೀರಾ ಅವೈಜ್ಞಾನಿಕ ಹಾಗೂ ಅಸಂಗತ ಸಂಗತಿಗಳ ಮೇಲೆ ನಿಂತಿರುವ ಜಗದ್ಗುರುಗಳಿಗಾಗಿ ಕುವೆಂಪು ವಿಶ್ವವಿದ್ಯಾಲಯದಲ್ಲಿ ಪೀಠವೊಂದನ್ನು ಸಂಸ್ಥಾಪಿಸುವುದು ನಿಜಕ್ಕೂ ಖಂಡನಾರ್ಹ. ಪ್ರಜಾಪ್ರಭುತ್ವದ ಇಂದಿನ ದಿನಮಾನಗಳಲ್ಲಿ ಅಸಮಾನತೆಯನ್ನು ಪೋಷಿಸಿ ಬೆಳೆಸಿಕೊಂಡು ಹೋಗುವ, ವ್ಯವಸ್ಥೆಯಲ್ಲಿನ ಮೇಲು ಕೀಳುಗಳಿಗೆಲ್ಲ ನಮ್ಮ ಕರ್ಮ- ಪ್ರಾರಬ್ಧವೇ ಕಾರಣ ಎಂದು ಸಾರಿಕೊಂಡು ಹೊರಟಿರುವ ಈ ಸನಾತನಿಗಳಿಗಾಗಿ ಪೀಠವನ್ನು ಸ್ಥಾಪಿಸುವುದೆಂದರೆ ಏನರ್ಥ?

ನಾಚಿಕೆ, ಮಾನ, ಮರ್ಯಾದೆ ಎಂಬುದ್ಯಾವುದೂ ಇಲ್ಲದ, ಯಾರ್‍ಯಾರಿಗೋ ತಮ್ಮ ಬುದ್ಧಿಯನ್ನು ಬಕರಿ ಮಾಡಿರುವ ಕುವೆಂಪು ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯರು ಒಮ್ಮತದಿಂದ ಇಂತಹ ಪೀಠ ಸ್ಥಾಪನೆಗೆ ಪ್ರಸ್ತಾವನೆ ಸಲ್ಲಿಸಿದ್ದಾರೆ! ಸರಕಾರವೂ ಇವರ ವಾದಕ್ಕೆ ತಲೆದೂಗುತ್ತ ತನ್ನ ಖಜಾನೆಯಿಂದ ಐವತ್ತು ಲಕ್ಷ ರೂಪಾಯಿಗಳ ಮಂಜೂರಾತಿಯನ್ನೂ ಕೊಟ್ಟಿದೆ!!

ವಿಶ್ವವಿದ್ಯಾಲಯದ ಪ್ರಾಧ್ಯಾಪಕರು, ಸಿನೆಟ್ ಹಾಗೂ ಸಿಂಡಿಕೇಟ್ ಸದಸ್ಯರು ಅಂದರೆ ಅವರೆಲ್ಲ ಪ್ರಜಾಪ್ರಭುತ್ವದ ಮೌಲ್ಯಗಳನ್ನು ಕಾಪಾಡಿಕೊಂಡು ಹೋಗುವ, ಸಮಾಜದ ಸ್ವಾಸ್ಥ್ಯವನ್ನು ತಮ್ಮ ಬೌದ್ಧಿಕ ಪ್ರೌಢಿಮೆಯ ಮೂಲಕ ಬೆಳೆಸುತ್ತ ಹೊರಡುವವರು ಎಂದೇ ನಂಬಲಾಗಿತ್ತು, ಆದರೆ ಬಿಜೆಪಿಯ



ಪುರೋಗಾಮಿ ಸರಕಾರ ಬಂದ ಮೇಲೆ ಸೆನೆಟ್/ಸಿಂಡಿಕೇಟ್‌ಗಳಲ್ಲಿ ಯೋಗ್ಯತೆ ಇಲ್ಲದವರು ಮತ್ತು ಚೆಡ್ಡಿ ಬೆಂಗಲಿಗರು ಬಂದು ಕೂತಿದ್ದಾರೆ. ಇವರೆಲ್ಲರ ಒನ್ ಪಾಯಿಂಟ್ ಪ್ರೋಗ್ರಾಮ್: ಮತ್ತದೆ ಸನಾತನವಾದ ಪುರೋಹಿತಶಾಹಿ ಸಂಸ್ಕೃತಿಯನ್ನು ಹೊಸ ಬಾಟಲಿಯಲ್ಲಿ ವಿದ್ಯಾರ್ಥಿಗಳಿಗೆ ಕೊಡುವುದು. ಜನಸಾಮಾನ್ಯರ ಮುಗ್ಧ ಮನಸ್ಸುಗಳಲ್ಲಿ ಮತ್ತದೇ ಭೂರ್ಜ್ವತನದ ಬೀಜಗಳನ್ನು ಬಿತ್ತುವುದು. ಈ ಮೂಲಕ ಅವರೆಲ್ಲರನ್ನು ಕುರಿಗಳನ್ನಾಗಿ ಮಾಡುವುದು.

ನಾವೆಲ್ಲರೂ ಖಂಡಿಸಲೇಬೇಕಾದ ಮತ್ತೊಂದು ಸಂಗತಿಯಿದೆ.

ಶಿವಮೊಗ್ಗ ವಿಶ್ವವಿದ್ಯಾಲಯದ ಹೆಸರು 'ಕುವೆಂಪು ವಿಶ್ವವಿದ್ಯಾಲಯ'. ಕುವೆಂಪು ಅವರು ತಮ್ಮ ಜೀವಿತಾವಧಿಯಲ್ಲಿ ವೈಚಾರಿಕರಾಗಿ ಬರೆದು ಬದುಕಿದವರು. ತಮ್ಮ ಸುತ್ತಮುತ್ತ ಇದ್ದ ಮೌಢ್ಯವನ್ನು, ಪುರೋಗಾಮಿ ಶಕ್ತಿಗಳನ್ನು ಹೀಯಾಳಿಸುತ್ತಿದ್ದವರು. ಪಂಚಾಂಗಗಳನ್ನು, ಜೋತಿಷ್ಯರುಗಳನ್ನು ಆಮೂಲಾಗ್ರವಾಗಿ ತಿರಸ್ಕರಿಸಿದವರು. ರಾಹುಕಾಲ ಗುಳಿಕಾಲ ನೋಡುತ್ತ ಮನೆ ಬಿಟ್ಟು ಹೊರಗೆ ಬರುತ್ತಿದ್ದ ವಿಶ್ವವಿದ್ಯಾಲಯಗಳ ಪ್ರೊಫೆಸರ್‌ಗಳನ್ನೆ ತರಾಟೆಗೆ ತೆಗೆದುಕೊಂಡವರು. ರಾಷ್ಟ್ರಕ್ಕೆ ಮಾರ್ಗದರ್ಶಕರಾಗಬೇಕಿರುವ, ಸಮಾಜದ ರೋಗರುಜಿನಿಗಳಿಗೆ ಮದ್ದರೆಯಬೇಕಾಗಿರುವ, ಸತ್ಯಾನ್ವೇಷಣೆಯೆ ಜೀವನ ಧ್ಯೇಯವಾಗಬೇಕಿರುವ ಸಾಹಿತಿಗಳು, ವಿಶ್ವವಿದ್ಯಾಲಯದ ಪ್ರೊಫೆಸರ್‌ಗಳು ಸರಕಾರದ ಸತ್ತೆಗೆ ಎಂದೂ ತಲೆಬಾಗಬೇಕಿಲ್ಲ ಎಂದು ಹೇಳಿದವರು. ರಾಜ್ಯದಲ್ಲಿ ರಾಜಪ್ರಭುತ್ವ ಅಧಿಕಾರದಲ್ಲಿದ್ದ ದಿನಗಳಲ್ಲಿಯೆ ಅವರು "ಕವಿಗರುಹು ಗಿರಸುಗಳ ಋಣವಿಲ್ಲ; ಅವನಗ್ನಿ ಮುಖಿ, ಪ್ರಳಯಶಿಖಿ" ಎಂದು ಗುಡುಗಿದವರು.

"ಆತ್ಮಶ್ರೀಗಾಗಿ ನಿರಂಕುಶ ಮತಿಗಳಾಗಿ" ಎಂಬ ತಮ್ಮ ಒಂದು ಉಪನ್ಯಾಸದಲ್ಲಿ "ಯುವಕರು ನಿರಂಕುಶ ಮತಿಗಳಾಗಬೇಕು...: ಮತಿ ಮಾನವನ ಸರ್ವೋತ್ಕೃಷ್ಟ ಆಯುಧ... ಮೌಢ್ಯದಿಂದಲೂ ಮತಾಚಾರಗಳಿಂದಲೂ ಸಮಾಜ ಭೀತಿಯಿಂದಲೂ ರಾಜಭಯದಿಂದಲೂ ಸ್ವರ್ಗನರಕ ದೇವಾನುದೇವತೆಗಳ ಮೋಹಮಾಹೆಗಳಿಂದಲೂ ಅದು ಸತ್ವರಹಿತವಾಗಿದೆ; ಕಾಂತಿ ಹೀನವಾಗಿದೆ. ಚಕ್ರವರ್ತಿಯಂತೆ ಸಿಂಹಾಸನದಲ್ಲಿ ಮಂಡಿಸಬೇಕಾದುದು ತೊತ್ತಾಗಿ ಕಾಲೊತ್ತಬೇಕಾಗಿದೆ. ಎಂದರೆ ಮತಿಗೆ ಅಂಕುಶಗಳು ಅತಿಯಾಗಿ ಹೋಗಿ ಜೀವವೆ ನಿಸ್ತೇಜವಾಗಿದೆ" ಎಂದು ನುಡಿದು "ಮತಿಯೊಂದೇ ಮಾನವನ ಬೆಳಕು; ಅದಿಲ್ಲದವ ಮನುಷ್ಯನಾಗಲು ಸಾಧ್ಯವಿಲ್ಲ. ಅದು ವಿಚಾರಗಳೆ ಇಲ್ಲದೆ ಜಡವಸ್ತು ಮಾತ್ರ ಆಗಬಲ್ಲುದು" ಎಂದು ಅಭಿಪ್ರಾಯವನ್ನು ವ್ಯಕ್ತಪಡಿಸಿದವರು ಕುವೆಂಪು.

"ಮತ ನಮಗೊಂದು ದೊಡ್ಡ ಬಂಧನವಾಗಿದೆ; ನಾಡಿನ ಏಳ್ಗೆಗೆ ಕುತ್ತಿಗೆ ಉರುಳಾಗಿದೆ. ಪರಮಶಾಂತಿಯೂ ಪರಮಾನಂದವೂ ಆಗಿರುವ ಪರಮೇಶ್ವರನನ್ನು ಪಡೆಯಲೆಂದು ಜೀವ ಮಾಡುವ ಪ್ರಯತ್ನವೇ ಮತದ ನಿಜಾಮಷ್ಠೆ, ಆದರೆ ಈಗ ನಾವು ಮತ ಎಂದು ಕರೆದುಕೊಳ್ಳುವ ಆಚಾರ ಸಮೂಹ ಬರಿಯ ಸಾಮಾಜಿಕವಾದ ಕಟ್ಟುಕಟ್ಟಳೆಗಳ ಕಾಟವಾಗಿದೆ. ಒಬ್ಬರನ್ನೊಬ್ಬರು ಮುಟ್ಟದಿರುವುದು, ನೋಡದಿರುವುದು; ಒಬ್ಬರೊಡನೊಬ್ಬರು ಕುಳಿತು ಭೋಜನ ಮಾಡದಿರುವುದು; ನಾಮ ಹಾಕಿಕೊಳ್ಳುವುದು; ವಿಭೂತಿ ಹಚ್ಚಿಕೊಳ್ಳುವುದು, ಮುದ್ರೆ ಹೊಡೆದುಕೊಳ್ಳುವುದು, ಶಿಲುಬೆ ಧರಿಸಿಕೊಳ್ಳುವುದು, ಕೆಲವರನ್ನು ಸಾರ್ವಜನಿಕವಾದ ಬಾವಿ ಕೆರೆಗಳಲ್ಲಿ ನೀರು ತೆಗೆದುಕೊಳ್ಳುವಂತೆ ಮಾಡುವುದು; ಕೆಲವರನ್ನು ದೇವಸ್ಥಾನಗಳಿಗೆ ಸೇರಿಸದಿರುವುದು..." ಇತ್ಯಾದಿ ಮತಾಚರಣೆಗಳನ್ನವರು ಖಂಡಿಸಿದವರು.

ಈ ಪಂಚಾಚಾರ್ಯರ ಜಗದ್ಗುರುಗಳಾದರೋ ಇವತ್ತಿನ ದಿನಮಾನಗಳಲ್ಲೂ ಅಡ್ಡಪಲ್ಲಕ್ಕಿಯಂತಹ ಜೀವವಿರೋಧಿ ಕೃತ್ಯಗಳಲ್ಲಿ ವಿರಾಜಮಾನರಾಗುವವರು. ಮಾನವ ಹಕ್ಕುಗಳ ಉಲ್ಲಂಘನೆ ಮಾಡುವವರು. ತಾವು ಬಂಗಾರದ ಕಿರೀಟ ಧರಿಸಿ, ಭವ್ಯವಾದ ಮೆರವಣಿಗೆ ಹೊರಟರೆ ತಮ್ಮ ಅನುಯಾಯಿಗಳ ಬಾಳೂ ಬಂಗಾರವಾಗುತ್ತದೆ ಎಂದು ಭ್ರಮಿಸುವವರು. ತಮ್ಮ ಬಲಗೈಯನ್ನು ಮೇಲೆತ್ತಿ ಆಶೀರ್ವಾದ ಮಾಡಿದರೆ ತಮ್ಮ ಶಿಷ್ಯನಿಗೆ ಒಳ್ಳೆಯದಾಗುತ್ತದೆ, ಬದಲಾಗಿ ಮನಸ್ಸಿನಲ್ಲಿಯೆ ಆ ಶಿಷ್ಯನನ್ನು ಹಳಿದರೆ ಕೆಟ್ಟದ್ದು ಘಟಿಸುತ್ತದೆ ಎಂದು ವಿವರಿಸುವವರು. ತಾವು ಗುರುಗಳಾದ್ದರಿಂದ ಎಲ್ಲರಿಗಿಂತಲೂ ಒಂದುಫೀಟೋ-ಎರಡು ಫೀಟೋ ಎತ್ತರದ ಸಿಂಹಾಸನವೇ ಬೇಕೆಂದು ಹಂಬಲಿಸುವವರು. ಇಂದಿನ ಪ್ರಜಾಪ್ರಭುತ್ವದ ದಿನಗಳಲ್ಲಿಯೂ ರಾಜ್ಯಪಾಲರೆ ಇರಲಿ, ರಾಷ್ಟ್ರಪತಿಗಳೆ ಇರಲಿ ಅವರೆಲ್ಲರಿಗಿಂತಲೂ ತಾವು ಹೆಚ್ಚು ಎಂದೇ ಭ್ರಮಿಸಿಕೊಂಡು ಭ್ರಮಾಲೋಕದಲ್ಲಿರುವವರು.

ಇಂತಹ ಅವೈಜ್ಞಾನಿಕ ಮನೋಭಾವದ, ಮಾನವ ಹಕ್ಕುಗಳ ಉಲ್ಲಂಘಿಸುವ, ಪ್ರಜಾಪ್ರಭುತ್ವ ವಿರೋಧಿ ನಿಲುವುಗಳನ್ನು ಹೊಂದಿರುವ, ದಲಿತರ-ದಮನಿತರ ಶೋಷಣೆಯೆ ತಮ್ಮ ಗುರಿಯೆಂದು ಸಾರಿಕೊಂಡು ಬಂದಿರುವ ಜಗದ್ಗುರುಗಳ ಪೀಠವನ್ನು ಕುವೆಂಪು ವಿಶ್ವವಿದ್ಯಾಲಯದಲ್ಲಿ ಸ್ಥಾಪಿಸುವುದೆಂದರೆ ಒಂದೇ ಏಟಿಗೆ ಕುವೆಂಪು ಹಾಗೂ ಪ್ರಜಾಪ್ರಭುತ್ವ ತತ್ವಗಳಿಗೆ ಎಳ್ಳು ನೀರು ಬಿಟ್ಟಂತೆಯೇ.

ಯಾವ ಕಾಲದ ಶಾಸ್ತ್ರವೇನು ಹೇಳಿದರೇನು?
ಎದೆಯ ದನಿಗೂ ಮಿಗಿಲು ಶಾಸ್ತ್ರವಿಹುದೇನು?
ಎಂದೋ ಮನು ಬರೆದಿಟ್ಟುದಿಂದೆಮಗೆ ಕಟ್ಟೇನು?


ಎಂಬ ಕುವೆಂಪು ವಾಕ್ಯವನ್ನು ಮತ್ತೆ ಮತ್ತೆ ನೆನಪಿಸುತ್ತ ಮನುವಿನ ಮೊಮ್ಮಕ್ಕಳಾದ ಜಗದ್ಗುರುಗಳ ಪೀಠ ಸ್ಥಾಪನೆಯನ್ನು ರಾಜ್ಯಪಾಲರು ತಿರಸ್ಕರಿಸುವ ಮೂಲಕ ಪ್ರಜಾಪ್ರಭುತ್ವದ ರಕ್ಷಣೆ ಮಾಡಲೇಬೇಕಾಗಿದೆ.

● ವಿಶ್ವಾರಾಧ್ಯ ಸತ್ಯಂಪೇಟೆ
satyampet1969@gmail.com


ಮಂಡ್ಯ: ಮಿಮ್ಸ್‌ಗೆ ಕಂಟಕ ಅಧೀಕ್ಷಕ ರಾಮಲಿಂಗೇಗೌಡ!



ಮಂಡ್ಯ ಮೆಡಿಕಲ್ ಕಾಲೇಜು ಪ್ರಾರಂಭವಾದಾಗಿನಿಂದಲೂ ಒಂದಿಲ್ಲೊಂದು ಬಗೆಯಲ್ಲಿ ಸುದ್ದಿಯಲ್ಲಿದೆ! ಜಿಲ್ಲಾಸ್ಪತ್ರೆಯಲ್ಲಿನ ವೈದ್ಯರ ಗುಂಪುಗಾರಿಕೆ, ನಕಲಿ ಸರ್ಟಿಫಿಕೇಟ್ ಹಗರಣಗಳು, ಔಷಧಿ ಖರೀದಿ ಹಗರಣಗಳು, ಬಡ್ತಿ ವರ್ಗಾವಣೆಗಳು, ನೇಮಕಾತಿ ಹಗರಣ, ಟೆಂಡರ್ ಹಗರಣಗಳಿಂದಾಗಿ ಜಿಲ್ಲಾಸ್ಪತ್ರೆ ಮತ್ತು ಮಿಮ್ಸ್ ಕೊಳೆತು ನಾರುತ್ತಿವೆ. ಇಲ್ಲಿನ ಬಹುಪಾಲು ಹಗರಣಗಳಿಗೆ ವೈದ್ಯಕೀಯ ಅಧೀಕ್ಷಕ ಕಡುಭ್ರಷ್ಟ ರಾಮಲಿಂಗೇಗೌಡನೇ ಕಾರಣನಾಗಿದ್ದಾನೆ.



ರಾಮಚಂದ್ರಗೌಡ



ಜಿಲ್ಲೆಗೆ ಮೆಡಿಕಲ್ ಕಾಲೇಜು ಬಂದಿದ್ದರಿಂದ ಮಂಡ್ಯ ಜಿಲ್ಲೆಯ ಜನರು ಹಲವು ನಿರೀಕ್ಷೆಗಳನ್ನಿಟ್ಟುಕೊಂಡಿದ್ದರು, ಆದರೀಗ ಆ ನಿರೀಕ್ಷೆಗಳು ಹುಸಿಯಾಗಿವೆ. ಹಿಂದೆಂದಿಗಿಂತ ವೈದ್ಯರ ಸುಲಿಗೆ ಸಲೀಸಾಗಿದೆ, ಜಿಲ್ಲಾಸ್ಪತ್ರೆಗೆ ಬರುವ ರೋಗಿಗಳು ರೋಸಿಹೋಗಿ ಜಿಲ್ಲಾಸ್ಪತ್ರೆಯ ವೈದ್ಯರೇ ನಡೆಸುವ ಖಾಸಗಿ ನರ್ಸಿಂಗ್ ಹೋಂಗಳಿಗೆ ಹೋಗಿ ದುಬಾರಿ ಬೆಲೆತೆತ್ತು ಚಿಕಿತ್ಸೆ ಪಡೆಯುವ ದುರ್ಗತಿ ಬಂದಿದೆ. ಇದರಿಂದ ಮಂಡ್ಯದ ಖಾಸಗಿ ಬ್ಲೇಡ್ ನರ್ಸಿಂಗ್ ಹೋಂಗಳ ವ್ಯಾಪಾರ ಜೋರಾಗಿಯೇ ನಡೆಯುತ್ತಿದೆ.


ಖಾಸಗಿ ನರ್ಸಿಂಗ್ ಹೋಂಗಳ ಗುಲಾಮರು!

ಬಹುಪಾಲು ವೈದ್ಯರು ಜಿಲ್ಲಾಸ್ಪತ್ರೆಗೆ ಬರುವ ಏಕೋದ್ದೇಶವೆಂದರೆ ರೋಗಿಗಳನ್ನ ತಮ್ಮ ಖಾಸಗಿ ನರ್ಸಿಂಗ್ ಹೋಂಗಳಿಗೆ ಕರೆಸಿಕೊಳ್ಳುವ ಉದ್ದೇಶದಿಂದಲೇ ಎನ್ನುವ ಸತ್ಯ ಗುಟ್ಟಾಗಿ ಉಳಿದಿಲ್ಲ. ಸರ್ಕಾರದ ಸಂಬಳ ಮತ್ತು ನಾನ್ ಪ್ರಾಕ್ಟೀಸ್ ಅಲೊಯನ್ಸ್ ಪಡೆದು ಹಲವಾರು ನರ್ಸಿಂಗ್ ಹೋಂಗಳಿಗೆ ಗುಲಾಮರಾಗಿರುವ ವೈದ್ಯರುಗಳೇ ಇಲ್ಲಿ ತುಂಬಿತುಳುಕುತ್ತಿದ್ದಾರೆ. ಸರ್ಕಾರಿ ನಿಯಮಗಳು ಇಲ್ಲಿನ ವೈದ್ಯರುಗಳಿಗೆ ಅನ್ವಯಿಸದಂತಾಗಿವೆ. ಡಾ.ವಿದ್ಯಾಪ್ರಸಾದ್, ಯಡ್ಡಿಯ ಮಾನಸ ಪುತ್ರಿ ಡಾ.ಕಾವ್ಯ, ಡಾ.ಪಂಡರಿನಾಥ್, ಡಾ.ರಾಜಶೇಖರ್‌ರಂತೂ ಆಸ್ಪತ್ರೆಯಲ್ಲಿ ಕಾಣಿಸುವುದೇ ಇಲ್ಲ, ಇದೇ ವಿಚಾರವಾಗಿ ಸಿಕ್ಕಿಬಿದ್ದ ಮೈಕ್ರೋಬಯೊಲಜಿಯ ಮುಖ್ಯಸ್ಥೆ ಡಾ.ಸುಮಂಗಲರ ಮೇಲೆ ತನಿಖೆಯೂ ನಡೆಯುತ್ತಿದೆ. ಆದರೆ ಮಿಕ್ಕ ಬಹುಪಾಲು ವೈದ್ಯರು ಜಿಲ್ಲಾಸ್ಪತ್ರೆಯಲ್ಲಿ ಸಹಿ ಹಾಕಿ, ಹತ್ತಾರು ನರ್ಸಿಂಗ್ ಹೋಂಗಳ ಸೇವೆ ಮಾಡುತ್ತಿರುವುದು ಬೆಳಕಿನಷ್ಟೆ ಸತ್ಯ. ಇದು ಮಂಡ್ಯ ಜಿಲ್ಲೆಯ ಜನರ ಆರೋಗ್ಯ ಸೇವೆ ನೀಡಬೇಕಾಗಿರುವ ಜಿಲ್ಲಾಸ್ಪತ್ರೆಯ ವೈದ್ಯರ ಸೇವೆಯ ಅಸಲಿ ವರಸೆಗಳಾಗಿವೆ. ಇಷ್ಟೆಲ್ಲಾ ಗೊತ್ತಿದ್ದು ಮಿಮ್ಸ್ ನಿರ್ದೇಶಕಿ ಪುಷ್ಪ ಸರ್ಕಾರ್, ಅಧೀಕ್ಷಕ ರಾಮಲಿಂಗೇಗೌಡರು ಮುಗುಮ್ಮಾಗಿರುವುದು ಯಾತಕ್ಕಾಗಿ ಎಂದು ಹೇಳಬೇಕಿದೆ.

ಭ್ರಷ್ಟರಿಗೆ ಮಾತ್ರ ಅಧೀಕ್ಷಕ ಹುದ್ದೆ!

ರಾಮಲಿಂಗೇಗೌಡ ಹೇಳಿಕೇಳಿ ಅಧೀಕ್ಷಕ. ಈ ಹುದ್ದೆಗೆ ಬರುವವರೆಲ್ಲ ಬಹುಪಾಲು ಭ್ರಷ್ಟಾಚಾರಿಗಳೇ ಆಗಿರುತ್ತಾರೆ. ಅಂತೆಯೇ ರಾಮಲಿಂಗೇಗೌಡರು ಇದರಿಂದ ಹೊರತಾಗಿಲ್ಲ. ಈತ ಹೋದ ಕಡೆಯಲ್ಲೆಲ್ಲಾ ಮೇಯ್ದಾಟದಿಂದ ಸಂಪಾದಿಸಿದಕ್ಕಾಗಿಯೆ ಈತನ ಮನೆಯ ಮೇಲೆ ಲೋಕಾಯುಕ್ತ ದಾಳಿ ನಡೆದು ಒಂದು ಬಾರಿ ಅಮಾನತ್ತಾಗಿದ್ದರೂ ಬುದ್ಧಿಬಂದಂತೆ ಕಾಣುತ್ತಿಲ್ಲ. ರಾಮಲಿಂಗೇಗೌಡರ ನುಂಗಾಟಕ್ಕೆ ಮಂಡ್ಯದ ರಾಜಕಾರಣಿಗಳೇ ಅವಾಕ್ಕಾಗಿದ್ದಾರೆ. ರೋಗಿಗಳಿಗೆ ಕೊಡಬೇಕಾಗಿರುವ ಆಹಾರ ಪದಾರ್ಥಗಳ ಟೆಂಡರ್‌ಗಳಲ್ಲಿ, ಆಸ್ಪತ್ರೆಯ ಅಗತ್ಯ ವಸ್ತುಗಳ ಖರೀದಿ, ಕಸವಿಲೇವಾರಿ ಟೆಂಡರ್, ಕ್ಲೀನಿಂಗ್ ಟೆಂಡರ್‌ಗಳಲ್ಲಿ ಈತ ನಡೆಸಿರುವ ಅಕ್ರಮಗಳು ಅಷ್ಟಿಷ್ಟಲ್ಲ. ಇದಕ್ಕೆಲ್ಲಾ ಬೆಂಗಾವಲಾಗಿರುವುದು ವೈದ್ಯಕೀಯ ಶಿಕ್ಷಣ ಸಚಿವ ರಾಮಚಂದ್ರಗೌಡರಂತೆ.

ಯೋಗೀಶ್‌ನೆಂಬ ಪಡ್ಡೆ ಹುಡುಗನ ಮೂಲಕ ತನ್ನ ಕಪ್ಪು ಹಣವನ್ನ ತೊಡಗಿಸಿ ತೇಜಸ್ವಿನಿ ಎಂಟರ್‌ಪ್ರೈಸಸ್ ಎಂಬ ಅಂಗಡಿ ತೆರೆದು ಆಸ್ಪತ್ರೆಯಲ್ಲಿ ಕ್ಲೀನಿಂಗ್ ಟೆಂಡರ್‌ನ್ನು ಸಚಿವ ರಾಮಚಂದ್ರಗೌಡನಿಗೆ 3 ಲಕ್ಷ ಕಪ್ಪಕೊಟ್ಟು, ಅಕ್ರಮ ಟೆಂಡರ್ ಕೊಡಿಸಿದ್ದಾನೆ ಎಂಬ ಆರೋಪಗಳು ಕೇಳಿಬರುತ್ತಿವೆ. ಅಸಲಿಗೆ ತೇಜಸ್ವಿನಿ ಎಂಟರ್‌ಪ್ರೈಸಸ್ ಟೆಂಡರ್ ಪಡೆಯಲು ಕಾರ್ಮಿಕ ಇಲಾಖೆಯಿಂದ ಅನುಮತಿಯನ್ನೆ ಪಡೆಯದ ಬ್ಲೇಡ್ ಸಂಸ್ಥೆಯಾಗಿದೆ.



ಹಲವಾರು ವರ್ಷಗಳಿಂದ ಕ್ಲೀನಿಂಗ್ ಕೆಲಸ ಮಾಡುತ್ತಿರುವ ಕಾರ್ಮಿಕರು ಕಡಿಮೆ ಕೂಲಿಗೆ ಕೆಲಸ ಮಾಡುತ್ತಿದ್ದರು. ಈ ಕಾರ್ಮಿಕರು ತಮ್ಮದೇ ನಾನ್ ಕ್ಲಿನಿಕಲ್ ಕಾರ್ಮಿಕರ ಸಂಘ ಕಟ್ಟಿಕೊಂಡು ಇಎಸ್‌ಐ, ಪಿಎಫ್, ಕನಿಷ್ಟ ಕೂಲಿ ಕೇಳಿದ್ದಕ್ಕೆ 41 ಕಾರ್ಮಿಕರನ್ನೆ ಬೀದಿಪಾಲು ಮಾಡಿದ್ದು ಟೆಂಡರ್‌ದಾರ ಯೋಗೀಶ್ ಮತ್ತು ಅಧೀಕ್ಷಕ ರಾಮಲಿಂಗೇಗೌಡ. ಇದರಲ್ಲಿ ಅಧೀಕ್ಷಕರ ಪಾಲುದಾರಿಕೆ ಇದ್ದುದರಿಂದ ಹಲವಾರು ಅಕ್ರಮಗಳು ನಡೆದಿವೆ ಎಂದು ಪ್ರಭಾರ ಜಿಲ್ಲಾಧಿಕಾರಿ ಪುಟ್ಟಮಾದಯ್ಯನವರ ಎದುರು ಪ್ರಗತಿಪರ ಸಂಘಟನೆಗಳ ಮುಖಂಡರು ಜಾಡಿಸಿದ್ದಕ್ಕೆ ಕಾರ್ಮಿಕರನ್ನ ಕೆಲಸಕ್ಕೆ ತೆಗೆದುಕೊಂಡಿದ್ದಾರೆ. ಆದರೆ ಕಾರ್ಮಿಕರು ತಮಗೆ ಸಿಗಬೇಕಾಗಿರುವ ಸೌಲಭ್ಯಗಳನ್ನ ಕೇಳಿದರೆ ಟೆಂಡರ್‌ದಾರ ಯೋಗಿಶ್ ಪುಂಡಾಟಿಕೆ ನಡೆಸಿ ಕಾರ್ಮಿಕರಿಗೆ ಕಿರುಕುಳ ನೀಡುತ್ತಿರುವುದರ ಹಿಂದೆ ಅಧೀಕ್ಷಕ ರಾಮಲಿಂಗೇಗೌಡ ಇರುವುದು ಸ್ಪಷ್ಟವಾಗಿದೆ. ಇಂತಹ ಕಡುಭ್ರಷ್ಟ ಅಧೀಕ್ಷಕ ರಾಮಲಿಂಗೇಗೌಡನಂತಹ ಅಧಿಕಾರಿಗಳು ಜಿಲ್ಲಾಸ್ಪತ್ರೆಯನ್ನ ಗುಡಿಸಿ ಗುಂಡಾಂತರ ಮಾಡುತ್ತಿದ್ದರೂ ಚಾರವೆತ್ತದ ಶಾಸಕ ಎಂ.ಶ್ರೀನಿವಾಸರದ್ದು ಸೋಮಾರಿತನದ ಪರಮಾವಧಿ ಎನ್ನದೆ ವಿಧಿ ಇಲ್ಲ, ಇದೀಗ ತಾನೇ ಮೆಡಿಕಲ್ ಕಾಲೇಜಿನ ಉಸ್ತುವಾರಿ ವಹಿಸಿಕೊಂಡಿರುವ ಎ.ಸಿ. ರಂಗಪ್ಪ ಸರಿಪಡಿಸುತ್ತಾರೋ ಕಾದು ನೋಡಬೇಕಿದೆ.

• ಲಕ್ಷ್ಮಣ್ ಚೀರನಹಳ್ಳಿ

ರಾಮಲಿಂಗೇಗೌಡನ ಅಸಲಿ ಮುಖ......!

ಹಲವಾರು ವರ್ಷಗಳಿಂದ ಜಿಲ್ಲಾಸ್ಪತ್ರೆಯಲ್ಲಿ ಬೀಡುಬಿಟ್ಟಿರುವ ಡಿ.ಎಸ್. ರಾಮಲಿಂಗೇಗೌಡ ಇಲ್ಲಿ ಎಸಗಿರುವ ಅಕ್ರಮಗಳಿಗೆ ಕೊನೆಯಿಲ್ಲ. ಅಸಲಿಗೆ ಈ ಸಾರಿಯ ನಾನ್ ಕ್ಲಿನಿಕಲ್ ಟೆಂಡರ್‌ನಲ್ಲಿ ಯಾವೊಬ್ಬ ಗುತ್ತಿಗೆದಾರನೂ ಭಾಗವಹಿಸದಂತೆ ನೋಡಿಕೊಂಡು ತನ್ನದೇ ಬೇನಾಮಿ ಸಂಸ್ಥೆಯಾಗಿರುವ ತೇಜಸ್ವಿ ಎಂಟರ್ ಪ್ರೈಸಸ್‌ಗೆ ಟೆಂಡರ್ ಸಿಗುವಂತೆ ನೋಡಿಕೊಂಡ. ಕಡೆಗೆ ಕಾರ್ಮಿಕ ಸಂಘಟನೆಗಳು ಸಿಂಗಲ್ ಟೆಂಡರ್‌ದಾರನಿಗೆ ಟೆಂಡರ್ ನೀಡುವುದಕ್ಕೆ ವಿರೋಧ ವ್ಯಕ್ತಪಡಿಸುತ್ತಿದ್ದಂತೆ ಜಿಲ್ಲಾಧಿಕಾರಿಗಳು ಮರುಟೆಂಡರ್‌ಗೆ ಆದೇಶಿಸಿಬಿಟ್ಟರು. ಹೊಸ ಟೆಂಡರ್ ಕೂಡಾ ತೇಜಸ್ವಿ ಎಂಟರ್‌ಪ್ರೈಸಸ್‌ಗೆ ದಕ್ಕುವಂತೆ ನೋಡಿಕೊಳ್ಳಲಾಯಿತು. ನಂತರ ಕನಿಷ್ಟ ಕೂಲಿ ಕೇಳಿದ ಕಾರ್ಮಿಕರನ್ನು ಕೆಲಸದಿಂದಲೇ ಕಿತ್ತೆಸೆಲಾಯಿತು. ಕಡೆಗೆ ಕಾರ್ಮಿಕರು ಸ್ಟ್ರೈಕ್ ಅಂತಾ ವಾರಗಟ್ಟಲೆ ಬೀದಿಗಿಳಿದ ಮೇಲೆ ಇನ್ನು ಈತನ ಆಡಳಿತದಲ್ಲಿ ಆಸ್ಪತ್ರೆಯಾಡಳಿತವಾದರೂ ನೆಟ್ಟಗಿದೆಯಾ ಎಂದರೆ ಅಲ್ಲೂ ಹೆಗ್ಗಣಗಳನ್ನು ಬಿಟ್ಟದ್ದಾನೆ ಮೇಯಲು.

ರೋಗಿಗಳಿಗೆ ಪ್ರತಿದಿನ ಜಿಲ್ಲಾಸ್ಪತ್ರೆಯಿಂದ ಊಟ ನೀಡಲಾಗುತ್ತದೆ. ಹಾಲು, ಬ್ರೆಡ್, ಅಕ್ಕಿ, ತರಕಾರಿ ಎಲ್ಲವನ್ನು ಗೋಲ್‌ಮಾಲ್ ಮಾಡಿಬಿಡುವ ಅಡುಗೆಮನೆಯ ಡಿ ಗ್ರೂಪ್ ನೌಕರರಾದ ಪುಟ್ಟಸ್ವಾಮಿ, ಚಿಕ್ಕಣ್ಣ, ಶಿವಲಿಂಗಯ್ಯ, ತಿಂಗಳೊಂದಕ್ಕೆ ರಾಮಲಿಂಗೇಗೌಡರಿಗೆ ಕನಿಷ್ಠವೆಂದರೂ 50 ಸಾವಿರ ಕಪ್ಪ ಕಟ್ಟಲೇಬೇಕು. ರಾಮಲಿಂಗೇಗೌಡರದು ಅದ್ಯಾವ ಪರಿ ಹುಸಿಮೆಂದರೆ ರೋಗಿಗಳಿಗೆ ಹಾಕುವ ಗ್ಲೂಕೋಸ್‌ನ ಖಾಲಿ ಡ್ರಿಪ್‌ಗಳನ್ನು ಬಿಡದೆ ಗುಜರಿಗೆ ಸಾಗಿಸಿ ಕಾಸು ಎಣಿಸಿಕೊಳ್ಳುತ್ತಾರೆ. ಇವತ್ತು ಜಿಲ್ಲೆಯ ಎಲ್ಲಾ ತಾಲ್ಲೂಕು ಆಸ್ಪತ್ರೆಗಳ ನಾನ್ ಕ್ಲಿನಿಕಲ್‌ನ ಗುತ್ತಿಗೆದಾರರ ಬಿಲ್ ಪಾಸ್ ಮಾಡಬೇಕೆಂದರೆ ಪ್ರತಿ ಗುತ್ತಿಗೆದಾರ ಡಿ.ಎಸ್.ಗೆ ಪ್ರತಿ ತಿಂಗಳು 5 ಸಾವಿರ ಮಾಮೂಲು ಎಣಿಸಲೇಬೇಕು. ಹೀಗೆ ತಿಂಗಳೊಂದಕ್ಕೆ ರಾಮಲಿಂಗೇಗೌಡರ ಜೇಬು ಸೇರುವ ಆಮದನಿಯೆ ೫೦ ಸಾವಿರ ದಾಟುತ್ತದೆ.

ಮಿಕ್ಕಿದ್ದು ಪಕ್ಕಿದ್ದಕ್ಕೆ ಜನಾರ್ದನ್ ಎಂಬ ಆಸಾಮಿ ಇದ್ದೇ ಇದ್ದಾನೆ. ಖೊಟ್ಟಿ ಬಿಲ್ ಸೃಷ್ಟಿಸಲು ಶಿವಲಿಂಗಯ್ಯನೆಂಬ ಕೇಸ್ ವರ್ಕರ್ ಇದ್ದಾನೆ. ಜಿಲ್ಲಾಸ್ಪತ್ರೆಯಲ್ಲಿ ಯಾವ ಔಷಧಿ ಇದೆ ಇಲ್ಲ ಎಂಬ ಯಾವ ದಾಖಲೆಯನ್ನು ನಿರ್ವಹಿಸದ ಇವರು ಮೆಡಿಸಿನ್ ತರಿಸಿಕೊಡುವುದಾಗಿ ಹೇಳಿ ಸರ್ಕಾರಿ ಮೆಡಿಸಿನ್ ನೀಡಿ ರೋಗಿಗಳಿಂದಲೆ ಸಾವಿರಾರು ಸುಲಿಯಲು ನರ್ಸಿಂಗ್ ಸೂಪರಿಂಟೆಂಡೆಂಟ್ ಹೆಸರಿನಲ್ಲಿರುವ ಶಕುಂತಲಾ, ಸರೋಜಿನಿ, ಗೀತಾ ಎಂಬ ಕಿರಾತಕ ದಾದಿಯರಿಗೆ ಇನ್‌ಚಾರ್ಜ್ ನೀಡಲಾಗಿದೆ. ಮೆಡಿಕಲ್ ಎಜುಕೇಷನ್ ಮಿನಿಸ್ಟರ್ ರಾಮಚಂದ್ರಗೌಡರಿಗೆ ಅವರ ಪಿ.ಎ. ನಂಜುಂಡೇಗೌಡ, ವಿರೂಪಾಕ್ಷರ ಮೂಲಕ ತಿಂಗಳ ಮಾಮೂಲು ಸಲ್ಲಿಸಿಯೇ ಎಲ್ಲವೂ ಸುಗಮವಾಗುವಂತೆ ನೋಡಿಕೊಂಡಿರುವ ರಾಮಲಿಂಗೇಗೌಡರಿಗೆ ಯಾರ ಭಯವೂ ಇಲ್ಲ.

ಆಸ್ಪತ್ರೆಗಳಲ್ಲಿ ಗುತ್ತಿಗೆ ನಿರ್ವಹಿಸಲು ಅಸಲು ತೇಜಸ್ವಿ ಎಂಟರ್‌ಪ್ರೈಸಸ್ ಸಂಸ್ಥೆಗೆ ಲೈಸನ್ಸ್ ಇಲ್ಲ ಎಂಬುದು ಇನ್ನೊಂದು ಚೋದ್ಯ. ಸದ್ಯ ಲೋಕಾಯುಕ್ತ ತನಿಖೆ ಎದುರಿಸುತ್ತಿರುವ ರಾಮಲಿಂಗೇಗೌಡರು ಜಿಲ್ಲೆಯಿಂದ ಎತ್ತಂಗಡಿಯಾಗದಿದ್ದರೆ ಜಿಲ್ಲಾಸ್ಪತ್ರೆ ಉಳಿಯುವಂತೆ ಕಾಣುತ್ತಿಲ್ಲ.









ಪತ್ನಿ ಹಂತಕ ಭಟ್ಟನಿಂದ ಪ್ರಚಾರದ 'ಶ್ರೀನಿವಾಸ ಕಲ್ಯಾಣ'!

ಪತ್ನಿ ಹತ್ಯೆಯ ಆರೋಪದಿಂದ ಮುಕ್ತನಾಗದ ಉಡುಪಿ ಶಾಸಕ ರಘುಪತಿ ಭಟ್, ತನ್ನ ಪತ್ನಿ ಪದ್ಮಪ್ರಿಯಾಳ ಸಾವು ಸಂಭವಿಸಿ ಎರಡು ವರ್ಷಗಳ ತುಂಬುವ ಸಂದರ್ಭದಲ್ಲಿ ತಾನು ಮೊಕ್ತೇಸರನಾಗಿರುವ ಕರಂಬಳ್ಳಿ ವೆಂಕಟರಮಣ ದೇಗುಲದಲ್ಲಿ 'ಶ್ರೀನಿವಾಸ ಕಲ್ಯಾಣ' ನಡೆಸಿ ಪಾಪ ಮುಕ್ತನಾಗುವುದರ ಜೊತೆಗೆ ವಿವಾದಕ್ಕೊಂದು ಅಂತಿಮ ವಿರಾಮ ನೀಡಲು ಇಚ್ಚಿಸಿದ್ದಾನೆ. ಇದೀ ಉಡುಪಿ ಜಿಲ್ಲೆಯ ತುಂಬೆಲ್ಲಾ ಫ್ಲೆಕ್ಸ್‌ಗಳನ್ನು ಹಾಕಿ, ತಾನು 'ಪತ್ನಿ ಹಂತಕ'ನ ಪಟ್ಟದಿಂದ 'ಭಯಂಕರ ದೈವಭಕ್ತ' ಎಂಬ ಬಿರುದು ಹೊರಲು ಇಚ್ಚಿಸಿದ್ದಾನೆ.


ಅಷ್ಟಕ್ಕೂ ಈ ದೇಗುಲವೇನೂ ಅಷ್ಟಾಗಿ ಪ್ರಚಾರದಲ್ಲಿದ್ದ, ಪ್ರಮುಖವಾಗಿದ್ದ ದೇವಸ್ಥಾನ ಆಗಿರಲಿಲ್ಲ. ಶಿವಳ್ಳಿ ಗ್ರಾಮ ವ್ಯಾಪ್ತಿಯ ಹಲವು ದೇಗುಲಗಳ ಪೈಕಿ ಇದೂ ಒಂದಷ್ಟೇ. ಇದು ಕೆಲವು ಬ್ರಾಹ್ಮಣ ಕುಟುಂಬಗಳ ಪ್ರಧಾನ ದೇವಸ್ಥಾನವಾಗಿದ್ದ ಈ ದೇಗುಲ ಕಳೆದ ಇಪ್ಪತ್ತು ವರ್ಷಗಳವರೆಗೂ ಅಸ್ಪೃಶ್ಯತೆಯ ಆಚರಣೆಯನ್ನು ಉಳಿಸಿಕೊಂಡೇ ಬಂದಿತ್ತು, ಇಂದಿಗೂ ಕೆಲವು ಆಚರಣೆಗಳಲ್ಲಿ ಜಾತಿವಾದದ ವಾಸನೆ ಹೊಡೆಯುವುದು ನಿಂತಿಲ್ಲ. ಇಪ್ಪತ್ತೈದು ವರ್ಷಗಳ ಹಿಂದೆ ಬಹುಸಂಖ್ಯಾತ ಜಾತಿಯಾದ ಬಿಲ್ಲವರಿಗೂ ಇಲ್ಲಿ ಮುಕ್ತ ಎಂಟ್ರಿ ಇರಲಿಲ್ಲವೆಂದಾದರೆ, ಇಲ್ಲಿನ ಜಾತಿ ಲಾಬಿ ಎಷ್ಟರಮಟ್ಟಿಗೆ ಇತ್ತು ಎಂದು ಅರಿವಾಗಬಹುದಾಗಿದೆ.

ಒಟ್ಟಾರೆ ಪತ್ನಿ ಹಂತಕನ ಪಟ್ಟವನ್ನು ಜನಮಾನಸದಿಂದ ದೂರ ಮಾಡುವುದಕ್ಕೆಂದೇ ಭಟ್ಟ ಗೃಹ ಸಚಿವ ಆಚಾರ್ಯನ ಮನೆ ದೇಗುಲವಾಗಿದ್ದ ಇಲ್ಲಿ ಅದ್ದೂರಿಯ ಶ್ರೀನಿವಾಸ ಕಲ್ಯಾಣ ನಡೆಸಲು ಮುಂದಾಗುವುದರ ಮೂಲಕ ತನ್ನನ್ನು ಕಾಡುತ್ತಿರುವ ಪಾಪಪ್ರಜ್ಞೆಯಿಂದ ವಿಮೋಚನೆ ಪಡೆಯಲು ಮತ್ತು ಜನರನ್ನು ಮರಳು ಮಾಡಲು ಮುಂದಾಗಿದ್ದಾನೆ.

ಅಲ್ಲದೆ ಕಾಂಗ್ರೆಸ್ ಮುಖಂಡ ಆಸ್ಕರ್ ಫರ್ನಾಂಡಿಸ್ ಮತ್ತು ಮಾಜಿ ಸಂಸದ ವಿನಯ್‌ಕುಮಾರ್ ಸೊರಕೆ ಮತ್ತಿತರ ಕಾಂಗ್ರೆಸ್ ನಾಯಕರನ್ನೂ ಈ ಸಮಾರಂಭಕ್ಕೆ ಅತಿಥಿಗಳಾಗಿ ಕರೆಸಿ ಕೃತಜ್ಞತೆ ಸಲ್ಲಿಸಲು ಮುಂದಾಗಿದ್ದ.





ತಿರುಪತಿ ತಿಮ್ಮಪ್ಪನ ಆಣೆಗೂ ಇದು ಸಾರ್ವಜನಿಕ ಹಿತಾಸಕ್ತಿಗಾಗಿ ಮಾಡಿದ್ದಲ್ಲ ಎಂಬುದನ್ನು ಅರ್ಥೈಸಿಕೊಳ್ಳಬೇಕಾದರೆ, ಈ 'ಶ್ರೀನಿವಾಸ ಕಲ್ಯಾಣ' ಕಾರ್ಯಕ್ರಮಕ್ಕೆ ಮಾಡುವ ವೆಚ್ಚದ ಎರಡರಷ್ಟು ಹಣವನ್ನು ತನ್ನ ಪ್ರಚಾರಕ್ಕೆ ಈತ ಬಳಸಿದ್ದನ್ನು ಗಮನಿಸಬೇಕು. ಉಡುಪಿಯ ಅಷ್ಟ ಯತಿಗಳ ಪರ್ಯಾಯ ಕಾರ್ಯಕ್ರಮಕ್ಕೆ ಕೂಡಾ ಇಷ್ಟೊಂದು ಪ್ರಚಾರ ಸಿಕ್ಕಿಲ್ಲವೆಂದಾದರೆ ಈ ಕಾರ್ಯಕ್ರಮದ ಹಿಂದಿನ ಉದ್ದೇಶ ಏನೆಂಬುದು ಎಂಥವರೂ ತಿಳಿಯಬಹುದು.

ರೆಡ್ಡಿಗಳ ವಿರುದ್ಧ ರಾಜ್ಯಪಾಲರ ದಾಳಿ!



ಇದೇ ಪ್ರಥಮ ಬಾರಿಗೆ ಜನಾರ್ದನ ರೆಡ್ಡಿ ಗ್ಯಾಂಗಿನ ವಿರುದ್ಧ ಕಾಂಗ್ರೆಸ್ ಮತ್ತು ಜೆಡಿಎಸ್ ನಾಯಕರು ಒಟ್ಟಿಗೆ ಟೊಂಕಕಟ್ಟಿಕೊಂಡು ನಿಂತಿದ್ದಾರೆ.

ಕಳೆದ ಮೇ 19ರಂದು ಮೊದಲಿಗೆ ಜೆಡಿಎಸ್ ದಂಡನಾಯಕ ದೇವೇಗೌಡರು ರಾಜ್ಯಪಾಲರ ಜೊತೆ ಸುಮಾರು ಎರಡು ತಾಸುಗಳ ಕಾಲ ಸುದೀರ್ಘ ಮಾತುಕತೆ ನಡೆಸಿದರು. ದೇವೇಗೌಡರು ರಾಜಭವನದಿಂದ ಹೊರಬರುವಷ್ಟರಲ್ಲೇ ಸಿದ್ದರಾಮಯ್ಯ ನಾಯಕತ್ವದಲ್ಲಿ ಕಾಂಗ್ರೆಸ್

ನಾಯಕರು ರಾಜ್ಯಪಾಲರನ್ನು ಭೇಟಿಯಾಗಿ ಸಮಾಲೋಚನೆ ನಡೆಸಿದರು. ಎರಡೂ ಪಕ್ಷಗಳ ನಾಯಕರು, ಬಳ್ಳಾರಿ ಗಣಿಧಣಿಗಳ ವಿರುದ್ಧ ರಾಜ್ಯಪಾಲರಿಗೆ ದೂರು ನೀಡಿದ್ದು ಅದರೊಂದಿಗೆ ದಾಖಲೆಗಳನ್ನು ನೀಡಿದರು. ಅಂದರೆ ಎರಡು ದಿಕ್ಕುಗಳಿಂದ ಈಗ ಏಕಕಾಲದಲ್ಲಿ ಜನಾರ್ದನ ರೆಡ್ಡಿ ವಿರುದ್ಧ ವಿರೋಧಪಕ್ಷದವರು ಆಕ್ರಮಣ ಆರಂಭಿಸಿದ್ದಾರೆ.

ಮೊನ್ನೆಮೊನ್ನೆಯಷ್ಟೇ ಸುಪ್ರೀಂ ಕೋರ್ಟ್‌ನಿಂದ ವಿವಾದವಿಲ್ಲದ ಜಾಗೆಯಲ್ಲಿ ಗಣಿಗಾರಿಕೆಯನ್ನು ನಡೆಸಬಹುದು ಎಂಬ ತಾತ್ಕಾಲಿಕ ಅನುಮತಿಯನ್ನು ಪಡೆದ ರೆಡ್ಡಿ ಗ್ಯಾಂಗಿಗೆ ವಿರೋಧ ಪಕ್ಷಗಳ ಈ ಜಂಟಿ ಹೋರಾಟ ಸ್ವಲ್ಪಮಟ್ಟಿಗೆ ಕಸಿವಿಸಿಯುಂಟುಮಾಡಿದೆ. ಅದರಲ್ಲೂ ದೇವೇಗೌಡರು ರಾಜ್ಯಪಾಲರ ಜೊತೆ ಎರಡು ಗಂಟೆಗಳ ಕಾಲ ಸಮಾಲೋಚಿಸಿದ್ದಾರೆ ಎಂದರೆ ಖಂಡಿತವಾಗಿಯೂ ರೆಡ್ಡಿ ಬ್ರದರ್ಸ್‌ಗೆ ಏನೋ ಆಪತ್ತು ಕಾದಿದೆ ಎಂದೇ ಅರ್ಥ.

ರೆಡ್ಡಿ ಸಿಂಗಪೂರ್ ಕಂಪೆನಿ ಮಾಲೀಕ?


ಜನಾರ್ದನ ರೆಡ್ಡಿ ಸಿಂಗಪೂರ್‌ನ ಜಿಎಲ್‌ಎ ಎಂಬ ಕಂಪೆನಿಗೆ ಅಧ್ಯಕ್ಷರಾಗಿದ್ದಾರೆ. ರಾಜ್ಯದಲ್ಲಿ ಮಂತ್ರಿಯಾಗಿರುವ ಜನಾರ್ದನ ರೆಡ್ಡಿ ಅದೇ ಸಮಯದಲ್ಲಿ ವಿದೇಶಿ ಕಂಪೆನಿಯೊಂದರ ಅಧ್ಯಕ್ಷನಾಗಿ ಕಾರ್ಯನಿರ್ವಹಿಸುತ್ತಿರುವುದು ಸಂವಿಧಾನದ ಸೆಕ್ಷನ್ 191ರ ಪ್ರಕಾರ ಅಸಿಂಧು ಎಂಬುದನ್ನು ಈ ನಾಯಕರು ರಾಜ್ಯಪಾಲರ ಗಮನಕ್ಕೆ ತಂದಿದ್ದಾರಂತೆ.

ಅಷ್ಟೇ ಅಲ್ಲದೆ, ಈ ಕಂಪೆನಿಯಲ್ಲಿ ಜನಾರ್ದನ ರೆಡ್ಡಿ ಶೇ. 41.5 ಪಾಲು ಹೊಂದಿದ್ದರೆ, ಆತನ ಸಹೋದರ ಕರುಣಾಕರ ರೆಡ್ಡಿ ಶೇ 3.9, ಸೋಮಶೇಖರ ರೆಡ್ಡಿ ಶೇ. 8 ಮತ್ತು ರೆಡ್ಡಿ ಗ್ಯಾಂಗಿನ ಮನೆ ಕಾವಲುಗಾರ ಶ್ರೀರಾಮುಲು ಶೇ. 0.39 ಶೇರುಗಳನ್ನು ಹೊಂದಿದ್ದಾರಂತೆ. ಮಾತ್ರವಲ್ಲ ತೀರಾ ಇತ್ತೀಚೆಗಷ್ಟೇ ಇವರು 30,000 ಮೆಟ್ರಿಕ್ ಟನ್ ಅದಿರನ್ನು ಕೇವಲ 63 ಡಾಲರ್‌ನಂತೆ ಈ ಕಂಪನಿಗೆ ಮಾರಾಟ ಮಾಡಿದ್ದನ್ನು ಕೂಡಾ ವಿರೋಧ ಪಕ್ಷದವರು ರಾಜ್ಯಪಾಲರ ಗಮನಕ್ಕೆ ತಂದಿದ್ದಾರೆ.

ಇದೆಲ್ಲದರ ಅರ್ಥ ಇಷ್ಟೇ: ಬಳ್ಳಾರಿಯ ಈ ಕಬ್ಬಿಣ ಅದಿರಿನ ಲೂಟಿಕೋರರು ಇಲ್ಲಿಂದ ಮಾರಾಟ ಮಾಡುವ ಅದಿರನ್ನು ಅಲ್ಲಿ ಕಡಿಮೆ ದರಕ್ಕೆ ಖರೀದಿಸುವುದು ಕೂಡಾ ಇವರದೇ ನೇತೃತ್ವದ ಕಂಪೆನಿ ಎಂಬುದು ವಿರೋಧ ಪಕ್ಷಗಳ ಆರೋಪ!

ಇತ್ತೀಚೆಗೆ ಗಣಿ ರೆಡ್ಡಿಗಳಿಗೆ ನೋಟಿಸ್ ಜಾರಿಮಾಡಿದ್ದ ರಾಜ್ಯಪಾಲರು ಈಗ ವಿರೋಧ ಪಕ್ಷಗಳ ನಾಯಕರ ಕೊಟ್ಟಿರುವ ಮನವಿಯನ್ನು ಏನು ಮಾಡುತ್ತಾರೆ ಎಂದು ರೆಡ್ಡಿ ಪಾಳಯದಲ್ಲಿ ನಡುಕ ಆರಂಭವಾಗಿದೆ. ರಾಜ್ಯಪಾಲ ಮತ್ತು ಬಳ್ಳಾರಿ ಗಣಿಧಣಿಗಳ ನಡುವೆ ಆರಂಭವಾಗಿರುವ ಸಮರ ಈಗ ಈ ಕಾರಣದಿಂದ ಕ್ಲೈಮ್ಯಾಕ್ಸ್ ತಲುಪಿದಂತಾಗಿದೆ.

ಶಾಸಕ ಸ್ಥಾನಕ್ಕೆ ಕುತ್ತು?



ಕಾನೂನಿನಪ್ರಕಾರ ಒಬ್ಬ ಶಾಸಕ ಅಥವಾ ಮಂತ್ರಿ ಅಧಿಕಾರದಲ್ಲಿದ್ದಾಗ ಮತ್ತೊಂದು ಲಾಭದಾಯಕ ಹುದ್ದೆಯಲ್ಲಿ ಕಾರ್ಯನಿರ್ವಹಿಸುವಂತಿಲ್ಲ. ಹಿಂದೆ ವಾಟಾಳ್ ನಾಗರಾಜ್ ಗಡಿ ಅಭಿವೃದ್ಧಿಯ ಅಧ್ಯಕ್ಷರಾಗಿದ್ದಾಗ ಪರಿಷತ್ ಚುನಾವಣೆಗೆ ನಾಮಪತ್ರ ಸಲ್ಲಿಸಿದಾಗ ಇದೇ ನೆಪ ಮುಂದಿಟ್ಟು ಅವರ ನಾಮಪತ್ರವನ್ನು ತಿರಸ್ಕರಿಸಲಾಗಿತ್ತು. ಈಗ ಅದೇ ನೆಪವನ್ನು ಮುಂದಿಟ್ಟು ಚುನಾವಣಾಧಿಕಾರಿ ಜನಾರ್ದನ ರೆಡ್ಡಿಯ ಆಯ್ಕೆಯನ್ನೇ ಅನೂರ್ಜಿತಗೊಳಿಸಬಹುದು.

ಹಾಗೆಯೇ ವಿರೋಧ ಪಕ್ಷಗಳು ನೀಡಿರುವ ದಾಖಲೆಯನ್ನು ರಾಜ್ಯಪಾಲರು ಮುಖ್ಯ ಚುನಾವಣಾಧಿಕಾರಿಗೆ ರವಾನಿಸಿ ಅದನ್ನು ಪರಿಶೀಲಿಸಿ ಸಂವಿಧಾನದ ಪ್ರಕಾರ ಕ್ರಮಕೈಗೊಳ್ಳಬೇಕೆಂದು ತಾಕೀತು ಮಾಡಬಹುದು.

ಚುನಾವಣಾ ಸಂದರ್ಭದಲ್ಲಿ ಶ್ರೀರಾಮುಲು, ಸೋಮಶೇಖರ ರೆಡ್ಡಿ ಮತ್ತು ಕರುಣಾಕರ ರೆಡ್ಡಿ ಸಲ್ಲಿಸಿದ್ದ ಅಫಿಡವಿಟ್‌ನಲ್ಲಿ ವಿದೇಶಿ ಕಂಪೆನಿಯ ಪ್ರಸ್ತಾಪ ಇಲ್ಲದೇ ಹೋದಲ್ಲಿ ಮುಖ್ಯ ಚುನಾವಣಾಧಿಕಾರಿ ಇವರೆಲ್ಲರ ಆಯ್ಕೆಯನ್ನು ಅನೂರ್ಜಿತ ಗೊಳಿಸುವ ಹಕ್ಕನ್ನು ಹೊಂದಿದ್ದಾರೆ.

ಈ ಎಲ್ಲ ಕಾರಣಗಳಿಂದಾಗಿಯೇ ರಾಜ್ಯಪಾಲರನ್ನು ಭೇಟಿಯಾದ ನಂತರ ಉಭಯಪಕ್ಷದ ನಾಯಕರು ಉಲ್ಲಾಸಿತರಾಗಿದ್ದಾರೆ. ಇದರರ್ಥ ಮುಂಬರುವ ದಿನಗಳಲ್ಲಿ ಜನಾರ್ದನ ರೆಡ್ಡಿ ಮತ್ತು ಗ್ಯಾಂಗಿಗೆ ರಾಜ್ಯಪಾಲರು ಸಖತ್ತಾದ 'ಪೂಜೆ' ಮಾಡುತ್ತಾರೆಂದೇ ರಾಜಕೀಯ ವಲಯದಲ್ಲಿ ಅರ್ಥೈಸಲಾಗಿದೆ.

ಕೊಂಡಯ್ಯ-ಟಪಾಲ್ ಗಣೇಶ್ ಸ್ಕೆಚ್

ಈ ಎಲ್ಲಾ ದಾಖಲೆಗಳನ್ನು ಕಾಂಗ್ರೆಸ್ ಮತ್ತು ದಳಕ್ಕೆ ಟನ್‌ಗಟ್ಟಲೇ ಒದಗಿಸಿಕೊಟ್ಟಿರುವವರು ಕಾಂಗ್ರೆಸ್ ವಕ್ತಾರ ಕೆ.ಸಿ.ಕೊಂಡಯ್ಯ ಮತ್ತು ಬಳ್ಳಾರಿಯ ಮತ್ತೊಬ್ಬ ಗಣಿಧಣಿ ಟಪ್ಪಾಲ್ ಗಣೇಶ್. ಈ ಕಾರಣಕ್ಕೆ ಇತ್ತೀಚೆಗೆ ಟಪ್ಪಾಲ್ ಗಣೇಶ್ ಮೇಲೆ ಬಳ್ಳಾರಿಯಲ್ಲಿ ಹಲ್ಲೆಯಾಗಿತ್ತು.

ಇನ್ನೊಂದೆರಡು ದಿನಗಳಲ್ಲಿ ದೇವೇಗೌಡರು ಈ ದಾಖಲೆಗಳ ಮೂಟೆಗಳನ್ನು ಹೊತ್ತುಕೊಂಡು ದೆಹಲಿಗೆ ಹೋಗಲಿದ್ದಾರೆಂಬುದು ಮತ್ತೊಂದು ಸುದ್ದಿ. ದೆಹಲಿ ಕಾಂಗ್ರೆಸ್ ನಾಯಕರ ಜೊತೆ ಒಳ್ಳೆಯ ಸಂಬಂಧವಿರುವ ದೇವೇಗೌಡರು ಅಲ್ಲಿಂದಲೂ ರೆಡ್ಡಿ ಸಹೋದರರ ಮೇಲೆ ಅಟ್ಯಾಕ್ ಮಾಡುವುದು ಶತಸಿದ್ಧ. ಹಲವರ ಪ್ರಕಾರ ರೆಡ್ಡಿ ಸಹೋದರರು ಕೇಂದ್ರ ಸರ್ಕಾರದ FERA & FEMA ಕಾಯ್ದೆಯನ್ನೂ ಉಲ್ಲಂಘಿಸಿರುವುದನ್ನು ಈ ದಾಖಲೆಗಳು ಸ್ಪಷ್ಟಪಡಿಸಿತ್ತು. ಹೀಗಾಗಿ ಕೇಂದ್ರ ಸರ್ಕಾರದ ಹಣಕಾಸು ಸಚಿವಾಲಯದ ಮುಖಾಂತರ ರೆಡ್ಡಿ ಗ್ಯಾಂಗಿನ ಸದ್ಯದಲ್ಲೇ ಬಿಸಿಬಿಸಿ ನೋಟೀಸ್ ಜಾರಿಯಾಗುವ ಸಾಧ್ಯತೆಯೂ ಇದೆ.

ದೆಹಲಿಯಿಂದ ಗೌಡರ ಬಾಂಬ್!

ಇದೆಲ್ಲವನ್ನೂ ಗಮನಿಸಿದರೆ ಮೊದಲ ಬಾರಿಗೆ ಬಳ್ಳಾರಿ ಗಣಿಧಣಿಗಳ ಪರಿಸ್ಥಿತಿ ಗಂಭೀರ ಮಟ್ಟ ತಲುಪಿರುವುದು ಕಾಣಿಸುತ್ತದೆ. ವಿರೋಧಪಕ್ಷಗಳು ರಾಜ್ಯಪಾಲರಿಗೆ ಸಲ್ಲಿಸಿದ್ದ ದಾಖಲೆಗಳ ಪ್ರಕಾರ ಈ ಗಣಿಧಣಿಗಳು ತೆರೆಮರೆಯಲ್ಲಿ ವ್ಯವಹಾರವನ್ನು ಮಾಡಿದ್ದು ನಿಜವೇ ಆದಲ್ಲಿ ಈ ಬಾರಿ ಇವರನ್ನು ರಕ್ಷಿಸಲು ಯಡಿಯೂರಪ್ಪನಿಂದಾಗಲಿ, ಈಶ್ವರಪ್ಪನಿಂದಾಗಲಿ ಸಾಧ್ಯವೇ ಇಲ್ಲ. ಹೀಗಾಗಿ ಪ್ರತಿಯೊಂದು ಸಂದಿಗ್ಧ ಸ್ಥಿತಿಯನ್ನು ತಮ್ಮ ರಾಜಕೀಯ ಚತುರತೆ ಮತ್ತು ಹಣಬಲದಿಂದ ನಿಭಾಯಿಸುತ್ತಿದ್ದ ಬಳ್ಳಾರಿ ದೊರೆಗಳು ಈ ಬಾರಿ ಹೇಗೆ ಪರಿಸ್ಥಿತಿಯನ್ನು ಎದುರಿಸುತ್ತಾರೋ ನೋಡಬೇಕು.

ವಿರೋಧ ಪಕ್ಷದ ನಾಯಕರು ಈ ಬಾರಿ ಅತ್ಯಂತ ಸಂತೋಷ ಮತ್ತು ಸಂಭ್ರಮದಿಂದ ರಾಜ್ಯಭವನದಿಂದ ಹೊರಬರಲು ಕಾರಣಗಳು ಅನೇಕ ಇವೆ. ಮುಖ್ಯವಾಗಿ ಒಂದು ವೇಳೆ ಮುಖ್ಯ ಚುನಾವಣಾಧಿಕಾರಿ ತಮ್ಮ ಹಕ್ಕನ್ನು ಉಪಯೋಗಿಸಿ ಈ ಶಾಸಕರ ಆಯ್ಕೆಯನ್ನು ಅನೂರ್ಜಿತ ಗೊಳಿಸಿದ್ದೇ ಆದಲ್ಲಿ ನಾಲ್ಕೂ ಜನ ತಮ್ಮ ಶಾಸಕ ಸ್ಥಾನವನ್ನು ತ್ಯಾಗ ಮಾಡಬೇಕಾಗುತ್ತದೆ. ಅಲ್ಲಿಗೆ ಬಳ್ಳಾರಿ ಗಣಿಧಣಿಗಳ ದರ್ಬಾರು ಮುಗಿದುಹೋದಂತೆ. ಅದರ ಜೊತೆಜೊತೆಗೆ ರಾಜ್ಯ ರಾಜಕೀಯದಲ್ಲಿ ಬಿಜೆಪಿ ಯುಗದ ಡೌನ್ ಫಾಲ್ ಕೂಡಾ ಪ್ರಾರಂಭವಾದಂತೆ. ಯಾಕೆಂದರೆ ತಾವು ಅಧಿಕಾರದಲ್ಲಿ ಇಲ್ಲವೆಂದ ಮೇಲೆ ಬೇರಾರೂ ಅಧಿಕಾರದವನ್ನು ಅನುಭವಿಸಲು ಈ ರೆಡ್ಡಿಗಳು ಬಿಡುವುದಿಲ್ಲ ಎಂಬುದು ಎಲ್ಲರಿಗೂ ಗೊತ್ತಿರುವ ವಿಚಾರ.

ಇದೀಗ ಬಂದ ಸುದ್ದಿ ಏನೆಂದರೆ, ಇಂದು (ಗುರುವಾರ) ಸಂಜೆ ರಾಜ್ಯಪಾಲರು ರೆಡ್ಡಿ ಗ್ಯಾಂಗಿನ ವಿರುದ್ಧದ ಎಲ್ಲಾ ದಾಖಲೆಗಳನ್ನು ತೆಗೆದುಕೊಂಡು ದೆಹಲಿಗೆ ಹಾರಲಿದ್ದಾರೆ. ನಾಳೆ (ಶುಕ್ರವಾರ) ಅವರು ಪ್ರಧಾನಿ ಮನಮೋಹನ್ ಸಿಂಗ್ ಅವರನ್ನು ಮತ್ತು ರಾಷ್ಟ್ರಪತಿ ಪ್ರತಿಭಾ ಪಾಟೀಲರನ್ನು ಭೇಟಿ ಆಗಲಿದ್ದಾರೆ. ರಾಜ್ಯಪಾಲ ಭಾರದ್ವಾಜ್ ಅವರು ದೆಹಲಿಗೆ ತೆರಳುವ ಮುನ್ನ ಮುಖ್ಯಮಂತ್ರಿ ಯಡಿಯೂರಪ್ಪ ಅವರನ್ನು ಭೇಟಿ ಆಗಬೇಕಿತ್ತು. ಆದರೆ ಪ್ರಕೃತಿಯ ವೈಪರೀತ್ಯ ಕಾರಣದಿಂದ ಶಿವಮೊಗ್ಗೆಯಿಂದ ಬೆಂಗಳೂರಿಗೆ ಹೆಲಿಕಾಪ್ಟರ್ ಮೂಲಕ ಯಡ್ಡಿಗೆ ಬರಲಾಗಲಿಲ್ಲ. ಅವರು ಕಾರ್‌ನಲ್ಲಿ ಬೆಂಗಳೂರು ತಲುಪುವ ಹೊತ್ತಿಗೆ ರಾಜ್ಯಪಾಲ ದೆಹಲಿ ವಿಮಾನವನ್ನು ಏರಿರುತ್ತಾರೆ.


ಅಂದರೆ, ರೆಡ್ಡಿ ಗ್ಯಾಂಗಿನ ವಿರುದ್ಧದ ಕಾರ್ಯಾಚರಣೆ ಈಗ ದೆಹಲಿಗೆ ಹಾರಿಹೋಗಿದೆ. ಅಲ್ಲಿಂದ ಈ ಗಣಿ ಲೂಟಿಕೋರರಿಗೆ ಅದೆಂತಹ ಶಿಕ್ಷೆ ಪ್ರಕಟಗೊಳ್ಳಲಿದೆಯೋ, ಕಾಂಗ್ರೆಸ್‌ನ ಅಧಿನಾಯಕಿ ಸೋನಿಯಾ ಅಮ್ಮನಿಗೆ ಮಾತ್ರ ಗೊತ್ತು!

• ಸದಾಶಿವ ಶೆಣೈ
shenoylankesh@gmail.com

ಶ್ರೀರಾಮ ಸೇನೆ: ವಸಂತ್ ಭವಾನಿಯ ಕ್ರಿಮಿನಲ್ ಜಾತಕ


ಹೆಸರು ಹೇಳಿಕೊಳ್ಳಲಿಕ್ಕೆ ರಾಮಸೇನೆ, ಅದರ ಕಾರ್ಯಕರ್ತರೆಲ್ಲ ರಾಮಭಕ್ತರು, ಹಿಂದೂ ವೀರರು. ಆದರೆ ಮಾಡುವುದೆಲ್ಲಾ ಹಲ್ಕಾ ಕೆಲಸಗಳೇ.

ಕಳೆದ ವಾರ ತೆಹಲ್ಕಾದವರ ರಹಸ್ಯ ಕಾರ್ಯಾಚರಣೆಯಲ್ಲಿ ರೆಡ್‌ಹ್ಯಾಂಡ್ ಆಗಿ ಸಿಕ್ಕಿಬಿದ್ದ ಶ್ರೀರಾಮಸೇನೆಯ ಎಂಜಲು ನಾಯಕ ಪ್ರಮೋದ್ ಮುತಾಲಿಕ್‌ನ ಬಗ್ಗೆ ಈಗ್ಗೆ ಸಾಕಷ್ಟು ಬರೆಯಲಾಗಿದೆ. ಮುತಾಲಿಕ್‌ನಷ್ಟೇ ನಟೋರಿಟಿಯಿರುವ ಇನ್ನೊಬ್ಬ ಲಂಚಕೋರ ಎಂಜಲು ಕಾಸಿನ ಲೀಡರ್ ಭವಾನಿಕುಮಾರ್ ವಸಂತನ ಕ್ರಿಮಿನಲ್ ಜಾತಕ ಇಲ್ಲಿದೆ.



ಊರ ತುಂಬಾ ಸೆಕ್ಸ್ ಸಿಡಿಗಳು, ಹಿಡನ್ ಕ್ಯಾಮರಾ ಕಾರ್ಯಾಚರಣೆಗಳು ತುಂಬಿತುಳುಕುತ್ತಿದ್ದರೂ ಈ ಶ್ರೀರಾಮಸೇನೆಯ ಧಡವಗಳಿಗೆ ಅಂಥದ್ದೊಂದು ಅನುಮಾನವೂ ಬರಬಾರದಾ? ತೆಹಲ್ಕಾ ಪತ್ರಕರ್ತ 'ತಾನೊಬ್ಬ ಆರ್ಟಿಸ್ಟ್' ಎಂದೇಳಿ 'ಗಲಭೆ ಎಬ್ಬಿಸಲು ಹಣ ಕೊಡುತ್ತೇನೆ' ಎಂದ ತಕ್ಷಣ ಡೀಲ್ ಕುದುರಿಸಲು ಕುಳಿತೇಬಿಟ್ಟರು ರಾಮಸೇವಕರು. ಆ ಕಲಾ ಪ್ರದರ್ಶನವು 'ಲವ್ ಜಿಹಾದ್' ಕುರಿತಂತೆ ಇತ್ತಾದ್ದರಿಂದ ಅತ್ತ ಮುಸ್ಲಿಂರನ್ನೂ ವಿರೋಧಿಸಿದಂತೆಯೂ, ಹಿಂದೂ ಧರ್ಮವನ್ನು ಕಾಪಾಡಿದಂತೆಯೂ ಆಯಿತು. ಮತ್ತೊಂದೆಡೆ ತಮಗೆ ಲಾಭಾಯ ಲವಣಾಯ ಆಯಿತೆಂದು ಮುತಾಲಿಕ್ ಲೆಕ್ಕ ಹಾಕಿದ್ದ. ನಂತರ ಈ ಡೀಲಿನ ಫೈನಲ್ ಮಾತುಕತೆಗೆ ಕುಳಿತವನೇ ಭವಾನಿಕುಮಾರ್ ವಸಂತ.

- ಬೆಂಗಳೂರಿನ ಲಾಲ್‌ಭಾಗ್ ಸಿದ್ದಾಪುರ ಪೊಲೀಸ್ ಲಿಮಿಟ್ಸ್‌ಗೆ ಬರುವ ಸೋಮೇಶ್ವರನಗರದ ಎರಡನೇ ಕ್ರಾಸಿನಲ್ಲಿ ಇವನ ಮನೆಯಿದೆ. ಮರಾಠ ಸಮುದಾಯದ ಭವಾನಿಯ ತಂದೆ ಮೊದಲಿನಿಂದಲೂ ಅನುಕೂಲವಂತ. ಜೆ.ಸಿ.ರೋಡಿನಲ್ಲಿ ಇವರದೊಂದು ಆಟೋಮೊಬೈಲ್ ಬಿಡಿಭಾಗಗಳ ವ್ಯಾಪಾರ ಇದೆ. ಬಹಳ ವರ್ಷಗಳಿಂದ ಭವಾನಿಯ ತಂದೆ ಕಾಂಗ್ರೆಸ್‌ನಲ್ಲಿ ಓಡಾಡಿಕೊಂಡಿದ್ದ. ಆಮೇಲೆ ಈ ಭವಾನಿಯೂ ರಾಮಲಿಂಗಾ ರೆಡ್ಡಿಯ ಹಿಂದೆ ಸುತ್ತುತ್ತಿದ್ದ. ಆದರೆ ಈಗ್ಗೆ ಹತ್ತು ವರ್ಷಗಳ ಹಿಂದೆ ಭವಾನಿಗೆ ಇದ್ದಕ್ಕಿದ್ದಂತೆ ತಾನು ಹಿಂದೂ ಧರ್ಮವನ್ನು ರಕ್ಷಿಸಿ ಮೇಲೆತ್ತಬೇಕೆನಿಸಿತು. ಅವನು ಮೊದಲಿನಿಂದಲೂ ಆರೆಸ್ಸೆಸ್ ಚಡ್ಡಿ ಹಾಕಿ ಲಾಠಿ ತಿರುಗಿಸಿ ಒಂಥರಾ ಮಾನಸಿಕ ರೋಗಿಯಂತೆಯೇ ಇದ್ದ. ಹಾಗಾಗಿ ಭವಾನಿಗೆ ಮುತಾಲಿಕ್‌ನೊಂದಿಗೆ ಲಿಂಕ್ ಸಿಗುವುದೇನು ತಡವಾಗಲಿಲ್ಲ. ಆಗ ಮುತಾಲಿಕ್ ಶಿವಸೇನೆಯ ಹೆಸರಲ್ಲಿ ದಂಧೆ ನಡೆಸುತ್ತಿದ್ದ.



ಆದರೆ ಶಿವಸೇನೆ ಕರ್ನಾಟಕದಲ್ಲಿ ಬರ್ಕತ್ತಾಗಲಿಲ್ಲ. ಅದು ನೀರಿನಲ್ಲಿ ಬೂದಿ ಕಲಸಿದಂತೆ ಕರಗೇಹೋಯಿತು. ಆರೆಸ್ಸೆಸ್‌ನವರ ಕಂಟ್ರೋಲಿಗೆ ಸಿಗದೆ ದೊಂಬಿ ನಡೆಸುತ್ತಿದ್ದ ಮುತಾಲಿಕ್‌ನ ಬಗ್ಗೆ ಸಂಘಪರಿವಾರಿಗಳಿಗೆ ಕಿರಿಕಿರಿ ಶುರುವಾಗಿತ್ತು. ಆಮೇಲೆ ಮುತಾಲಿಕ್ ಭಜರಂಗದಳ ಸೇರಿ ರೋಲ್‌ಕಾಲ್ ಶುರುವಮಾಡಿದ. 2003ರಿಂದ 2008ರವರೆಗಿನ ಭಜರಂಗಿಗಳ ಜಾತಕ ತೆಗೆದು ನೋಡಿದರೂ ಅದೇ ಬಾಳಿ!

ಕರಾವಳಿಯಲ್ಲಿ ಹಫ್ತಾ ವಸೂಲಿ, ಮಲೆನಾಡಿನಲ್ಲಿ ಟಿಂಬರ್ ಸ್ಮಗ್ಲಿಂಗ್, ಉತ್ತರ ಕರ್ನಾಟಕದಲ್ಲಿ ಕೊಲೆ, ದರೋಡೆಗಳೇ ಭಜರಂಗಿಗಳ ಕಾಯಕವಾಗಿತ್ತು. ಕೊನೆಗೆ ಭಜರಂಗ ದಳದಿಂದ ಮುತಾಲಿಕ್ ಆಚೆ ಬಂದು ಶ್ರೀರಾಮಸೇನೆ ಹುಟ್ಟು ಹಾಕಿದ.

ಆಗ ಮುತಾಲಿಕ್‌ನ ಜೊತೆ ಕೈ ಜೋಡಿಸಿದವನೇ ಈ ಕ್ರಿಮಿನಲ್ ಭವಾನಿ.

ಬೆಂಗಳೂರಿನ ಮಾಫಿಯಾ ಕ್ರಿಮಿಗಳೊಂದಿಗೂ ನಂಟಿರುವ ಭವಾನಿಯ ಮೇಲೆ ಅನೇಕ ಕೇಸುಗಳಿವೆ. ಈಗ್ಗೆ 2 ವರ್ಷಗಳ ಹಿಂದೆ ಪೆದ್ದು ಸಿನಿಮಾ ನಿರ್ದೇಶಕ ಪ್ರೇಮ್‌ನ 'ಪ್ರೀತಿ ಯಾಕೆ ಭೂಮಿ ಮೇಲಿದೆ' ಸಿನಿಮಾ ವಿರುದ್ಧ ಇದೇ ಭವಾನಿಯ ಗ್ಯಾಂಗ್ ದಾಳಿ ಮಾಡಿತ್ತು (ಬಾಕ್ಸ್ ನೋಡಿ). ಈ ಭವಾನಿಯ ಹೆಂಡತಿ ಹಲ್ಲಿನ ವೈದ್ಯೆ ಮೈಸೂರಿನವಳು. ಕೆಲ ತಿಂಗಳ ಹಿಂದೆ ಜೆ.ಪಿ.ನಗರದಲ್ಲಿ ನಡೆದ ನವೀನ ಎಂಬುವವನ ಕೊಲೆಯಲ್ಲಿ ಭವಾನಿಯ ಭಂಟರ ಕೈವಾಡವಿತ್ತೆಂದು ಪೊಲೀಸರಿಗೆ ಅನುಮಾನವಿದೆ.

ಇಂತಹ ಹೀನ ಚರಿತ್ರೆಯವನು ಈಗ ತೆಹಲ್ಕಾ ವಿರುದ್ಧವೇ ಸಿದ್ದಾಪುರ ಪೊಲೀಸರಿಗೆ ವಂಚನೆಯ ದೂರು ಕೊಟ್ಟಿದ್ದಾನೆ.

ನೀಚತನ, ಭಂಡತನದ ಪರಮಾವಧಿ ಅಂದರೆ ಇದೇ ಅಲ್ಲವಾ? •

ನಿರ್ದೇಶಕ ಪ್ರೇಮ್ ಡೀಲ್ ಕೊಟ್ಟಿದ್ದನಾ?

2008ರ ಜನವರಿಯಲ್ಲಿ ರಿಲೀಸಾಗಿ ತಕ್ಷಣ ಮಾಯವಾದ 'ಪ್ರೀತಿ ಯಾಕೆ ಭೂಮಿ ಮೇಲಿದೆ' ಸಿನಿಮಾ ಹೆಸರು ನಿಮಗೆ ನೆನಪಿರಬಹುದು.




ನಿರ್ದೇಶಕ ಕಂ ನಾಯಕ ನಟ ಪ್ರೇಮ್‌ನ ಸಿನಿಮಾ ಅದು.

ಶ್ರೀರಾಮಸೇನೆಯ ಭವಾನಿಗೂ ಪ್ರೇಮ್‌ಗೂ ಲಿಂಕ್ ಇರುವ ಒಂದು ಪ್ರಕರಣವಿದು. ಈಗ ತೆಹಲ್ಕಾ ಕಾರ್ಯಾಚರಣೆಯಲ್ಲಿ ತಾನೇ ಹಣ ಕೊಟ್ಟು ನಕಲಿ ದಾಳಿ ಮಾಡಿಸಿಕೊಳ್ಳುವ ಸ್ಕೀಂನಂತೆಯೇ ಪ್ರೇಮ್ ಕೂಡಾ ಮಾಡಿದ್ದ.

'ಪ್ರೀತಿ ಯಾಕೆ....' ಸಿನಿಮಾದಲ್ಲಿ 'ಎಲ್ಲಾ ಸುಳ್ಳು, ರಾಮ ಸುಳ್ಳು, ಸೀತೆ ಸುಳ್ಳು...' ಎನ್ನುವ ಅಸಂಬದ್ಧ ಹಾಡೊಂದನ್ನು ಪ್ರೇಮ್ ಸೇರಿಸಿದ್ದ. ಜೊತೆಗೆ ಶ್ರೀರಾಮಸೇನೆಯ ಭವಾನಿ ಜೊತೆಗೆ ಡೀಲ್ ಕುದುರಿಸಿ ಈ ಹಾಡು ಹಿಂದೂ ಧರ್ಮ ವಿರೋಧಿಯೆಂಬಂತೆ ಅಶ್ವಿನಿ ಸ್ಟುಡಿಯೋ ಮೇಲೆ ಭವಾನಿ ದಾಳಿ ಮಾಡುವಂತೆಯೂ, ಆ ಮೂಲಕ ಪುಗಸಟ್ಟೆ ಪ್ರಚಾರ ಗಿಟ್ಟಿಸುವ ಪ್ಲಾನ್ ಆದಾಗಿತ್ತು.

ಕೊನೆಗೆ ದಾಳಿ ನಡೆದು, ಪ್ರಚಾರ ಸಿಕ್ಕಿದರೂ ಸಿನಿಮಾ ಬದುಕಲಿಲ್ಲ. ಪ್ರೇಮ್ ಮಾತ್ರ ಭವಾನಿ ವಿರುದ್ಧ ಪೊಲೀಸ್ ಕಂಪ್ಲೇಂಟ್ ಕೊಡಲೇ ಇಲ್ಲ. ಯಾಕೆಂದರೆ ಇದೀ ವಿವಾದವೇ ಪ್ರೇಮ್ ಸೃಷ್ಟಿಸಿದ್ದ ನಾಟಕವಾಗಿತ್ತು. ಇಂತಹ ಡೀಲ್‌ಗಳಲ್ಲಿ ಪಳಗಿದ್ದ ಭವಾನಿಗೆ ತೆಹಲ್ಕಾ ಡೀಲ್ ಬಂದಾಗ ಅನುಮಾನ ಬರದೆ ಸಿಕ್ಕಿ ಹಾಕಿಕೊಂಡ ಅಷ್ಟೇ.



3 ಈಡಿಯೆಟ್ಸ್ ಸೆಕ್ಸ್ ಸಿಡಿ?

ನಿಸ್ಸಂಶಯವಾಗಿ ಇದು ಸಿಡಿ ಸಿಂಡ್ರೋಮ್. ಅಧಿಕಾರಸ್ಥ ಬಿಜೆಪಿಯ ಪ್ರಭಾವಿ ಮಂತ್ರಿ ಹಾಲಪ್ಪನಂಥವರೇ ಸಿಡಿಯ ಸುಳಿಯಲ್ಲಿ ಸಿಕ್ಕಿಬಿದ್ದು ರೇಪ್ ಕೇಸ್ ಹೊತ್ತು ಜೈಲು ಪಾಲಾದ ಮೇಲೆ ಈ ಥರದ ಸನ್ನಿಯೊಂದು ದಿನೇದಿನೇ ವ್ಯಾಪಿಸುತ್ತಿದೆ. ಎಂತೆಂಥವರಿಗೋ ಟಿಕೆಟ್ ಕೊಟ್ಟು ಎಂತೆಂಥವರನ್ನೋ ಮಂತ್ರಿ ಮಾಡಿದರೆ ಸೆಕ್ಸ್ ಸಿಡಿಯೂ ಬರುತ್ತದೆ, ಮಂತ್ರಿಗಳೇ ಜೈಲಿಗೆ ಹೋಗುತ್ತಾರೆ. ಸದ್ಯ ಯಡ್ಡಿ ಸರ್ಕಾರ ಸಿಡಿ ಸನ್ನಿಗೆ ಸಿಲುಕಿ ಇನ್ನೇನು ಅನಾಹುತಕ್ಕೀಡಾಗುತ್ತೋ ಅಥವಾ ಯಾವ ವಿಕೆಟ್ ಉರುಳುತ್ತೋ ಬಲ್ಲವರ್ಯಾರು?

• ರಾ. ಸೋಮನಾಥ್
ra.somanath2010@gmail.com

* ಭಾರೀ ಕೈಗಾರಿಕಾ ಮಂತ್ರಿ ಮುರುಗೇಶ್ ನಿರಾಣಿಯ ರಸಿಕ ಚೇಷ್ಟೆಗಳ ಬಿಸಿಬಿಸಿ ದೃಶ್ಯಾವಳಿಗಳ ಸಿಡಿಯೊಂದು ಯಾವುದೋ ಹುತ್ತದಲ್ಲಿ ಅಡಗಿದೆಯೇ?
* ಇನ್ನೊಬ್ಬ ಆರೆಸ್ಸೆಸ್ ಹಿನ್ನೆಲೆಯ ಸಚಿವ ಸಾಹೇಬರು ತಮ್ಮದೇ ಇಲಾಖೆಯ ಅಧಿಕಾರಿಣಿಯೊಬ್ಬಳ ಜೊತೆ 'ಗುಪ್ತ ಸಮಾಲೋಚನೆ' ನಡೆಸುತ್ತಿರುವುದನ್ನು ಸಾಕ್ಷಾತ್ ಅವರ ಶ್ರೀಮತಿಯವರೇ ಗೂಢಚಾರಿಕೆ ಮಾಡಿ ರಹಸ್ಯ ಕ್ಯಾಮೆರಾದಲ್ಲಿ ಸೆರೆಹಿಡಿದಿದ್ದಾರಾ? ಅಂಥದೊಂದು ಸಿಡಿ ಬಿಜೆಪಿಯ ಕೋರ್ ಕಮಿಟಿಯ ಸಭೆಯಲ್ಲಿ ವಿತ್‌ಔಟ್ ಸೆನ್ಸಾರ್ ಪ್ರದರ್ಶನ ಕಂಡಿದ್ದು ನಿಜವಾ?
* ಪೌರಾಡಳಿತ ಮಂತ್ರಿ ಬಾಲಚಂದ್ರ ಜಾರಕಿಹೊಳಿಗೂ ಸುಶೀಲಾ ಶರ್ಮಾ ಎಂಬ ಮುಂಬಯಿ ಮೂಲದ ಹೆಂಗಸಿಗೂ ಯಾವ ಥರದ ನೆಂಟಸ್ತಿಕೆ? ಆಕೆಯ ಬಳಿಯಿರುವ ಸಿಡಿಯಲ್ಲಿ ಜಾರಕಿಹೊಳಿ ಮಹಾತ್ಮರ ಬೆಡ್‌ರೂಮ್ ಪೌರುಷದ ಎಂಥಾ ಸೀನರಿಗಳಿರಬಹುದು?
* ಹಿಂದೆ ಎಮ್ಮೆಲ್ಲೆಯಾಗಿದ್ದಾಗ ಮಾಡಿದ ತಪ್ಪಿಗೆ ಜಲಸಂಪನ್ಮೂಲ ಸಚಿವ ಬಸವರಾಜ ಬೊಮ್ಮಾಯಿ ಈಗ ದಂಡ ಕಟ್ಟುತ್ತಿದ್ದಾರಾ? ಆಗ ಚಿತ್ರೀಕರಿಸಿದ ಸಿಡಿಯನ್ನಿಟ್ಟುಕೊಂಡು ಈಗ ಯಾರೋ ತೇಲ್ ಮಾಲಿಷ್ ಪಾರ್ಟಿಯೊಬ್ಬ ಬೊಮ್ಮಾಯಿಯವರನ್ನು ಬ್ಲ್ಯಾಕ್‌ಮೇಲ್ ಮಾಡುತ್ತಿದ್ದಾನಾ?
* ಹಾವೇರಿಯ ಬಿಜೆಪಿ ಸಂಸದ ಮತ್ತು ಲೋಕೋಪಯೋಗಿ ಮಂತ್ರಿ ಉದಾಸಿಯವರ ಸುಪುತ್ರ ಶಿವಕುಮಾರ್ ಉದಾಸಿಯವರು ವಿರ್‌ಹೋಸ್ಟೆಸ್ ಕಾಲೇಜಿನ ಯಾವುದೋ ವಿದ್ಯಾರ್ಥಿನಿಯೊಬ್ಬಳಿಗೆ ಇನ್ನೆಂಥದೋ ಟ್ರೈನಿಂಗ್ ಕೊಡುತ್ತಿರುವ ಹಸಿಬಿಸಿ ಸೀನುಗಳಿರುವ ಸಿಡಿಯನ್ನು ಮೊನ್ನೆಯಷ್ಟೇ ಪಕ್ಷಾಧ್ಯಕ್ಷ ಈಶ್ವರಪ್ಪನವರಿಗೆ ಯಾರೋ ಕಿಲಾಡಿಯೊಬ್ಬ ಕಾಣಿಕೆಯೋಪಾದಿ ತಂದೊಪ್ಪಿಸಿದನೆಂಬುದು ಎಷ್ಟು ಸತ್ಯ?

ನಿಸ್ಸಂಶಯವಾಗಿ ಇದು ಸಿಡಿ ಸಿಂಡ್ರೋಮ್. ಅಧಿಕಾರಸ್ಥ ಬಿಜೆಪಿಯ ಪ್ರಭಾವಿ ಮಂತ್ರಿ ಹಾಲಪ್ಪನಂಥವರೇ ಸಿಡಿಯ ಸುಳಿಯಲ್ಲಿ ಸಿಕ್ಕಿಬಿದ್ದು ರೇಪ್ ಕೇಸ್ ಹೊತ್ತು ಜೈಲು ಪಾಲಾದ ಮೇಲೆ ಈ ಥರದ ಸನ್ನಿಯೊಂದು ದಿನೇದಿನೇ ವ್ಯಾಪಿಸುತ್ತಿದೆ. ಬೆಂಗಳೂರಿನ ಪ್ರಭಾವೀ ಮಂತ್ರಿಯೊಬ್ಬರ ಪತ್ನಿಯೇ ನೇರವಾಗಿ ಪಕ್ಷಾಧ್ಯಕ್ಷ ಈಶ್ವರಪ್ಪನವರಿಗೆ ಫೋನ್ ಮಾಡಿ: "ಏನೇ ಆಗ್ಲೀ.... ಆ ಹಾಲಪ್ಪನಿಗೆ ಥ್ಯಾಂಕ್ಸ್ ಹೇಳಲೇಬೇಕಲ್ವಾ ಸಾರ್? ಯಾಕೆ ಗೊತ್ತಾ? ಆತನ ಸಿಡಿ ಬಂದ ಮೇಲೆ ಯಾವತ್ತೂ ರಾತ್ರಿ ಹೊತ್ತು ಮನೆಗೆ ಬಾರದೇ ಇರುತ್ತಿದ್ದ ನಮ್ಮೆಜಮಾನ್ರು ಕನಿಷ್ಠ ಈಗಲಾದರೂ ರಾತ್ರಿ ಒಂಭತ್ತಕ್ಕೇ ಮನೆಗೆ ಬರ್‍ತಿದ್ದಾರಲ್ಲ.....?" ಎಂದರಂತೆ!

ಪಕ್ಷಾಧ್ಯಕ್ಷ ಈಶ್ವರಪ್ಪನವರೇ ಹೊರಗೆಡುಹಿದ ವಿಕಟವಿದು. ಕಪಟ ವೇದಾಂತಿ ನಿತ್ಯಾನಂದನ ಸಿಡಿ ಬಹಿರಂಗಗೊಂಡಾಗಲೇ ಬೆನ್ನುಮುಟ್ಟ ನೋಡಿಕೊಳ್ಳುತ್ತಿದ್ದ ಯಡ್ಡಿ ಸರ್ಕಾರದ ಮಂತ್ರಿಗಳಿಗೆ ಸಾಕ್ಷಾತ್ ಹಾಲಪ್ಪನೇ ಸಿಡಿಯ ಸುಳಿಗೆ ಸಿಲುಕಿ ಜೈಲು ಪಾಲಾದರೆ ಹೇಗಾಗಿರಬೇಡ?

ಇದೊಂಥರದ ಸನ್ನಿಯೂ ಹೌದು, ಕಳ್ಳನ ಮನಸ್ಸು ಹುಳ್ಳಗೆ ಎಂಬಂಥ ಮನಸ್ಥಿತಿ ಕೂಡ ಹೌದು. ಹಿಂದೆ ಶಾಸಕರಾಗಿದ್ದಾಗ, ಅದಕ್ಕೂ ಮುನ್ನ ಅಥವಾ ಮಂತ್ರಿಯಾದ ಮೇಲೆ ಚಪಲಕ್ಕೆ ಬಿದ್ದು ಯಾರೆಲ್ಲ 'ಪರಸ್ತ್ರೀ ಸಂಗಕ್ಕೆ' ಮೈಯೊಡ್ಡಿದ್ದರೋ ಅಂಥವರೆಲ್ಲರಿಗೂ ಇಂಥದ್ದೊಂದು ವ್ಯಾಧಿ ಶುರುವಾಗಿದೆ. ಆವತ್ತು ತಾವು ಮಾಡಿದ ಪಾಪವನ್ನು ಯಾರಾದರೂ ತಮ್ಮ ಮೊಬೈಲಿನಲ್ಲಿ ಚಿತ್ರೀಕರಿಸಿಕೊಂಡಿರಬಹುದಾ? ತಮ್ಮ ಜೊತೆಗೇ ಇದ್ದ ಡ್ರೈವರೋ, ಪೀವನ್ನೋ ಅಥವಾ ಮಂಚ ಹಂಚಿಕೊಂಡಿದ್ದ ಹೆಂಗಸೋ ತಲೆಓಡಿಸಿ ವೀಡಿಯೋ ಮಾಡಿಕೊಂಡಿರಬಹುದಾ? ಅದನ್ನು ಬಳಸಿಕೊಂಡು ಯಾರಾದರೂ ತನ್ನನ್ನು "ಬ್ಲ್ಯಾಕ್‌ಮೇಲ್ ಮಾಡಬಹುದಾ? ಆ ಕಾರಣಕ್ಕೇ ತನ್ನ ಮಂತ್ರಿಗಿರಿ ಹೋದೀತಾ?

ಇದು ಒಂಥರದ ಕಾಯಿಲೆಯಾದರೆ ಮತ್ತೊಂದು ಈಗಾಗಲೇ ಯಡವಟ್ಟು ಮಾಡಿಕೊಂಡು ಅದಕ್ಕೆ ದಂಡ ತೆರುತ್ತಿರುವವರದ್ದು. ಸದ್ಯ ಇಂಟಲಿಜೆನ್ಸ್ ಮೂಲಗಳೇ ಹೇಳುವಂತೆ ಯಡ್ಡಿ ಸಂಪುಟದ ನಾಲ್ವರು ಪ್ರಮುಖ ಮಂತ್ರಿಗಳು ಈ ಥರದ ಸಿಡಿ ಸಿಂಡ್ರೋಮ್ ಅಥವಾ ಹಾಲಪ್ಪ ಎಫೆಕ್ಟ್‌ಗೆ ಸಿಲುಕಿ ನರಳುತ್ತಿದ್ದಾರೆ!

ಈ ಪೈಕಿ ಮೊದಲು ಕೇಳಿಬಂದದ್ದು ಈ ಆರೆಸ್ಸೆಸ್ ಹಿನ್ನೆಲೆಯ ಮಂತ್ರಿ ಸಾಹೇಬರ ಹೆಸರು. ಬಹುಶಃ ಅವರ ಶ್ರೀಮತಿ ಸಲ್ಲದ ಗುಮಾನಿಗೆ ಬಿದ್ದು ಈ ಥರದ ವದಂತಿಯ ಹುಟ್ಟಿಗೆ ಕಾರಣರಾಗಿರಬಹುದೆ? ಅಥವಾ ತಮ್ಮದೇ ಇಲಾಖೆಯ ಐಎಎಸ್ ಅಧಿಕಾರಣಿಯೊಬ್ಬರನ್ನು ಸಾಹೇಬರು ವಿಪರೀತ ನೆಚ್ಚಿಕೊಂಡಿದ್ದೇ ಇಂಥಾದ್ದೊಂದು ಗಾಸಿಪ್‌ನ ಮೂಲವಾಗಿರಬಹುದೆ?

ಸದ್ಯ ಬಿಜೆಪಿ ವಲಯದಲ್ಲಿ ಗುಲ್ಲೆದ್ದಿರುವಂತೆ ಈ ಸಚಿವ ಸಾಹೇಬರು 'ಸರ್ಕಸ್' (!) ಸಿಡಿಯೊಂದು ಮುಖ್ಯಮಂತ್ರಿಗಳ ಕೈಸೇರಿದೆ. ಅಷ್ಟೇ ಅಲ್ಲ, ಮೊನ್ನೆ ಅಂದರೆ ಕಳೆದ ಶುಕ್ರವಾರ ನಡೆದ ಕೋರ್ ಕಮಿಟಿಯ ಸಭೆಯಲ್ಲಿ ಕೇಂದ್ರ ಬಿಜೆಪಿ ವಕ್ತಾರ ಸತೀಶ್ ಈ ಬಗ್ಗೆ ಗರುಮ್ಮಾಗಿಯೇ ಯಡ್ಡಿಯನ್ನು ಝಾಡಿಸಿದ್ದಾರೆ. ಕರ್ನಾಟಕ ಮೂಲದ, ಈಗಾಗಲೇ ಲೋಕಾಯುಕ್ತಕ್ಕೆ ಸಿಲುಕಿ ಬಿದ್ದಿರುವ ಮತ್ತು ಹುಂಬ ಐಪಿಎಸ್ ಅಧಿಕಾರಿಯೊಬ್ಬರ ಪತ್ನಿಯೂ ಆಗಿರುವ ಸದರಿ ಬನ್ನಾಣಗಿತ್ತಿ ಐಎಎಸ್ ಅಧಿಕಾರಿಣಿ ಈ ಹಿಂದೆ ಕೆಲವು ಹಗರಣಗಳನ್ನೂ ಮಾಡಿಕೊಂಡಿದ್ದಳು.

ಅದ್ಯಾವ ಗಳಿಗೆಯಲ್ಲಿ ಸಚಿವ ಖಾತೆ ದಕ್ಕಿತೋ ಅಥವಾ ಅವರ ದೆಸೆಗೆ ತಕ್ಕಂತೆಯೇ ಈ ಐಎಎಸ್ ಗಂಟುಬಿದ್ದಳೋ ಗೊತ್ತಿಲ್ಲ, ಅಂತೂ ಸಾಹೇಬರ ಶ್ರೀಮತಿಗೆ ಇದರ ವಾಸನೆಯಂತೂ ಬಡಿದಿದೆ. ಸಾಹೇಬರೆ ಡ್ರೈವರನೇ ಕೈಚಳಕ ತೋರಿದನೋ, ಸಚಿವರ ಪತ್ನಿ ಆ ಮಟ್ಟದ ಹೈಟೆಕ್ ಪತ್ತೆದಾರಿಕೆಗೆ ತಲೆಕೆಡಿಸಿಕೊಂಡರೋ; ಅಂತೂ ಅಧಿಕಾರಿಣಿ ಮತ್ತು ಮಂತ್ರಿ ಜೊತೆಗಿದ್ದ ಏನೋ ಒಂಥರದ ಸಿಡಿಯಂತೂ 'ಇದೆ' ಎಂಬ ಗಾಸಿಪ್ ಹಬ್ಬಿದೆ.

ಈ ಥರದ ಗಾಸಿಪ್‌ನ ಮುಂದುವರಿಕೆಯೇ ಹತ್ತು ಕೋಟಿ ತೆತ್ತು ಅದನ್ನು ಮುಖ್ಯಮಂತ್ರಿ ಯಡ್ಡಿಯ ಮೂಲಕವೇ ರಸಿಕ ಸಚಿವರು ಮುಚ್ಚಿ ಹಾಕಿದ್ದಾರೆಂಬುದು. ಸದರಿ ಡೀಲಿಗೂ ಹಿಂದೊಮ್ಮೆ ಬೆಂಗಳೂರು ನಗರ ಬಿಜೆಪಿ ಅಧ್ಯಕ್ಷನಾಗಿದ್ದ ಗೋಪಿನಾಥ ಎಂಬಾತನಿಗೂ ಏನು ಸಂಬಂಧವೋ ಗೊತ್ತಿಲ್ಲ, ಸಚಿವರ ಪತ್ನಿ ಈ ಸಿಡಿ ಸೃಷ್ಟಿಸಲೆಂದು ಈ ಗೋಪಿನಾಥನ ನೆರವು ಪಡೆದಿದ್ದರೆ? ಅಥವಾ ಸಿಡಿಯ ಸೃಷ್ಟಿಕರ್ತನ ಪರವಾಗಿ ಗೋಪಿನಾಥ ಡೀಲಿಗೆ ನಿಂತಿದ್ದನೆ?

ಮುಖ್ಯಮಂತ್ರಿ ಯಡ್ಡಿಯೇ ಮೇಲೆ ಬಿದ್ದು ಸಚಿವನ ಸದರಿ ಪ್ರಾರಬ್ಧ ಕರ್ಮಕ್ಕೆ ತೇಪೆ ಹಾಕಿದರೆಂದೂ, ತಮ್ಮ ಸರ್ಕಾರದ ಮಾನ ಉಳಿಸಿಕೊಳ್ಳಲು ಈ ಸಚಿವ ಮತ್ತವನ ಬ್ಯುಸಿನೆಸ್ ಪಾಲುದಾರ ಪ್ರದೀಪನ ಮೂಲಕ ಹತ್ತು ಕೋಟಿ ತರಿಸಿಕೊಂಡು ಗೋಪಿನಾಥನಿಗೆ ಕೊಟ್ಟು ಕೈತೊಳೆದುಕೊಂಡರೆಂದೂ ಪುಕಾರೆದ್ದಿದೆ. ಇದರ ಪರಿಣಾಮವೆಂಬಂತೆ ಮುಂಬರುವ ಸಚಿವ ಸಂಪುಟದ ಪುನರ್‌ರಚನೆಯಲ್ಲಿ ಈ ಸಚಿವನನ್ನು ಕೈಬಿಡುವಂತೆ ಕೇಂದ್ರ ಬಿಜೆಪಿ ವಕ್ತಾರ ಸತೀಶ್ ಯಡ್ಡಿಗೆ ತಾಕೀತು ಮಾಡಿದ್ದಾನಂತೆ!

ಇದು ಕುಚೋದ್ಯವೋ ಅಥವಾ ವಿರೋಧಿಗಳ ಕುತಂತ್ರವೋ ಗೊತ್ತಿಲ್ಲ, ಸದ್ಯ ಹಾಲಪ್ಪ ಎಫೆಕ್ಟ್‌ನ ಹಿನ್ನೆಲೆಯಲ್ಲಿ ಸಿಡಿಯ ಸುಳಿಗೆ ಸಿಲುಕಿದವರ ಪೈಕಿ ಈ ಸಚಿವನ ವೃತ್ತಾಂತದ ಕತೆಯಂತೂ ಮುಂಚೂಣಿಯಲ್ಲಿದೆ.

ಇದಕ್ಕಿಂತಲೂ ಭಿನ್ನವಾದದ್ದು ಭಾರೀ ಕೈಗಾರಿಕಾ ಮಂತ್ರಿ ಮುರುಗೇಶ್ ನಿರಾಣಿಯ ಕತೆ. ಈ ಹಿಂದೆ ಉದಯ ಟೀವಿಯಲ್ಲಿದ್ದ ಯಾರೋ ಓರ್ವ ಕ್ಯಾಮೆರಾ ಅಸಿಸ್ಟೆಂಟ್‌ನನ್ನು ಜೊತೆ ಹಾಕಿಕೊಂಡಿದ್ದೇ ನಿರಾಣಿಗೆ ಮುಳುವಾಯಿತೆಂಬುದು ಒಂದು ಸುದ್ದಿ. ಬಿಜೆಪಿಯ ವಯೋವೃದ್ಧ ನಾಯಕರೊಬ್ಬರ ಸೊಸೆಯೇ ನಿರಾಣಿಯವರ ಸಿಡಿಯ ಸೃಷ್ಟಿಕರ್ತಳೆಂಬುದು ಮತ್ತೊಂದು ಸುದ್ದಿ. ಈ ಕಾಂತಾ (ಹೆಸರು ಬದಲಿಸಿದೆ) ಎಂಬಾಕೆ ನಿರಾಣಿ ಮಂತ್ರಿಯಾದಾಗಿನಿಂದಲೂ ಅವರ ಛೇಂಬರಿಗೆ ಹೊತ್ತಲ್ಲದ ಹೊತ್ತಲ್ಲಿ ನುಗ್ಗುತ್ತಿದ್ದದ್ದು ರಹಸ್ಯವೇನಲ್ಲ. ಈಕೆ ಮಾಜಿ ಶಾಸಕರೊಬ್ಬರ ಮಗಳು. ಕರಂದ್ಲಾಜೆ ಮತ್ತು ಭಾರತಿ ಶೆಟ್ಟಿಗೆ ಪರಮಾಪ್ತೆ ಕೂಡ. ಈಕೆಯ ಚೆಂಗಲು ಬುದ್ಧಿ ಕಂಡೇ ಈಕೆಯ ಗಂಡ ಡ್ರಗ್ ಅಡಿಕ್ಟ್ ಆದನೆಂದೂ, ಆತನಿಂದ ಡೈವೋರ್ಸ್ ಗಿಟ್ಟಿಸಿದ ನಂತರ ಈ ಕಾಂತಾ ಹಾಸನದ ರೊಕ್ಕಸ್ಥನ ಮಗನೊಂದಿಗೆ ರಿಚಮಂಡ್ ವೃತ್ತದ ಅಪಾರ್ಟ್‌ಮೆಂಟ್ ಒಂದರಲ್ಲಿ 'ಲಿವಿಂಗ್ ಟುಗೆದರ್' ಮಾಡಿಕೊಂಡಿದ್ದಳೆಂದೂ, ಹಾಗೇ ಇದ್ದುಕೊಂಡೇ ನಿರಾಣಿ ಸಾಹೇಬರ ಜೊತೆ ಬಿದ್ದಳೆಂಬುದು ಬಿಜೆಪಿಯ ಪ್ರತೀತಿ.

ಆದರೆ ನಿರಾಣಿ ಸಾಹೇಬರ ಸಿಡಿಯಲ್ಲಿರುವುದು ಈಕೆ ಅಲ್ಲವಂತೆ. ಈಕೆಯ ಗೆಳತಿ ಮತ್ತು ನಿರಾಣಿಯವರ ಹಾಲಿ 'ಸಖಿ' ಮಧುರಾ ಎಂಬಾಕೆಯ ಜೊತೆ ಮಂತ್ರಿಗಳು 'ಆದಮ್ ಅಂಡ್ ಈವ್' ಪಾತ್ರದಲ್ಲಿ ನಟಿಸಿದ ದೃಶ್ಯಾವಳಿಗಳು ಸಿಡಿಯಲ್ಲಿವೆಯಂತೆ. ಇಂಥದ್ದೊಂದು ಸಿಡಿ ನಿಜಕ್ಕೂ ಇದೆಯಾ? ಅಥವಾ ಅದು ಇದೆ ಎಂದು ಯಾರಾದರೂ ನಿರಾಣಿಯನ್ನು ಬ್ಲ್ಯಾಕ್‌ಮೇಲೆ ಮಾಡುತ್ತಿದ್ದಾರಾ?

ಒಂದಂತೂ ಸತ್ಯ. ಸದ್ಯ ನಿರಾಣಿ ಸಾಹೇಬರ ಕೃಪೆಯಿಂದಲೇ ಮಧುರಾ ಎಂಬಾಕೆಗೆ ಸದಾಶಿವನಗರದಲ್ಲೊಂದು ಸುಸಜ್ಜಿತ ಬಂಗಲೆ ಬಂದಿದೆ. ಅದು ಸಾಲದೆಂಬಂತೆ ವಿಂಡ್ಸರ್ ಮ್ಯಾನರ್ ಹಿಂಭಾಗದ ವಿನಾಯಕ ಅಪಾರ್ಟ್‌ಮೆಂಟ್‌ನಲ್ಲೊಂದು ಫ್ಲಾಟನ್ನೂ ಹೆಚ್ಚುವರಿಯಾಗಿ ನಿರಾಣಿ ಸಾಹೇಬರು ಕರುಣಿಸಿದ್ದಾರೆ. ಮೂಲತಃ ಬಿಜಾಪುರದವಳುಸಿದಿ ಈ ಮಧುರಾ. ಸದ್ಯ ಕೆಐಎಡಿಬಿಗೆ ಸಂಬಂಧಪಟ್ಟಂತೆ ಯಾವುದೇ ಅಧಿಕಾರಿಯ ವರ್ಗಾವರ್ಗಿ, ಡೀನೋಟಿಫಿಕೇಷನ್, ಪ್ರಾಜೆಕ್ಟುಗಳಿಗೆ ಸೈಟು, ಪರಿಹಾರದ ಬಿಲ್ಲು ವಸೂಲಿ ಇತ್ಯಾದಿ ಪ್ರತಿಯೊಂದಕ್ಕೂ ಈ ಮಾಧುರಾ ಮತ್ತು ಕಾಂತಾ ಕೈಹಾಕುತ್ತಾರೆ. ಹೊತ್ತಿಲ್ಲದ ಹೊತ್ತಲ್ಲಿ ನಿರಾಣಿ ಸಾಹೇಬರ ಛೇಂಬರಿಗೇ ನುಗ್ಗುತ್ತಾರೆ. ಇಬ್ಬರೂ ಸೇರಿಕೊಂಡೇ ನಿರಾಣಿಯನ್ನು ಬ್ಲ್ಯಾಕ್‌ಮೇಲ್ ಮಾಡುತ್ತಿದ್ದಾರಾ? ಅಥವಾ ಮಧುರಾಳಿಗೆ ಗೊತ್ತಿಲ್ಲದ ಹಾಗೆ ಕಾಂತಾ ತನ್ನ ಗೆಳೆಯನ ಮೂಲಕ ಕ್ಯಾಮೆರಾ ಫಿಕ್ಸ್ ಮಾಡಿದ್ದಳಾ? ಸಿಡಿಯನ್ನು ಬಯಲುಗೊಳಿಸಿದಂತೆ ನಿರಾಣಿ ಸಾಹೇಬರು ಕಾಂತಾ ಬಾಡಿಗೆಗಿದ್ದ ರಿಚ್‌ಮಂಡ್ ಸರ್ಕಲ್ಲಿನ ಫ್ಲಾಟನ್ನೇ ಖರೀದಿಸಿ ಆಕೆಗೆ ಗಿಫ್ಟಾಗಿ ಕೊಟ್ಟಿದ್ದಾರಾ?

ಏಕೆ ನಿರಾಣಿ ಈ ಕಾಂತಾ ಎಂಬಾಕೆಗೆ ಅಷ್ಟು ಹೆದರುತ್ತಾರೆ? ತಮ್ಮ ಮನೆ, ಮಡದಿ, ಮಕ್ಕಳು, ಮಂತ್ರಿ ನಿವಾಸ ಎಲ್ಲವನ್ನೂ ಬಿಟ್ಟು ಏಕೆ ಮಾಧುರಾ ಎಂಬಾಕೆಯ ಜೊತೆ ಸದಾಶಿವನಗರದ ಬಂಗಲೆಯಲ್ಲಿ ಸಂಸಾರ ಹೂಡಿದ್ದಾರೆ? ನಿರಾಣಿಯವರ ಇಂಥ ರಸಿಕ ಸಾಹಸಗಳನ್ನು ಕಂಡೇ ಈ ಥರದ ಕುಚೋದ್ಯ ಹುಟ್ಟು ಹಾಕಿದ್ದಾರಾ?

ನಾಣಗಿಂತಲೂ ಅಪಾಯಕಾರಿ
ಳ್ಳಿರುವ ಬಿಜೆಪಿಯ ಮಂತ್ರಿಯೆಂದರೆ ಅದು
ವಳಿತ ಮಂತ್ರಿ ಬಾಲಚಂದ್ರ ಜಾರಕಿಹೊಳಿ.
ವರ್ಷದ ಹಿಂದೆ ಸುಶೀಲಾ ಶರ್ಮಾ
ವಂಚಕಿಯೊಬ್ಬಳು ಮಾಡಿಕೊಂಡ
ಡಿಯಲ್ಲಿ ಮೊದಲ ಬಾರಿಗೆ ಕೇಳಿಬಂದದ್ದು
ಜಾರಕಿಹೊಳಿಯ ಹೆಸರು. ತನ್ನ ಮಗಳು
ತಾ ಎಂಬಾಕೆಯನ್ನು ಯಾರೋ ರಿಯಲ್
ಟ್ ಆಸಾಮಿಯೊಬ್ಬ
ವೆಯಾಗುತ್ತೇನೆಂದು ವಂಚಿಸಿದನೆಂದು
ಕ್ಯಾಮೆರಾಗಳ ಸಮೇತ ತಿರುಪತಿಗೆ
ಗಿ ರಾದ್ಧಾಂತವೆಬ್ಬಿಸಿದ್ದಳು. ಆಗ ಈಕೆಯ
ನ್ನು ವಂಚಿಸಿದನೆಂದು ಯಾರ ಮೇಲೆ
ಲಾ ಶರ್ಮ ದೂರು ಕೊಟ್ಟಿದ್ದಳೋ ಆತನೇ
ವಿ ಸಂದರ್ಶನದಲ್ಲಿ ಮಂತ್ರಿ
ಹೊಳಿಗೂ ಸುಶೀಲಾಳ ಮಗಳು ಸುನೀತಾ
ಎಂಬಾಕೆಗೂ ಇರುವ ವ್ಯಾವಹಾರಿಕ
ದ ಬಗ್ಗೆ ಬಾಯಿಬಿಟ್ಟಿದ್ದ!

ವತ್ತು ಮಂತ್ರಿ ಜಾರಕಿಹೊಳಿಯನ್ನು
ಸಿದ ಟೀವಿ ಚಾನೆಲ್ಲೊಂದು ಸುಶೀಲಾ
ಮತ್ತು ಮಗಳು ಸುನೀತಾ ಶರ್ಮಾರ
ಥ ಇತಿಹಾಸವನ್ನು ಕೆದಕಿ ವಿಶೇಷ ವರದಿ
ಸಿತ್ತು. ಲ್ಯಾವೆಲ್ಲಿ ರಸ್ತೆಯ ಹೋಟೆಲ್
ಪಕ್ಕದಲ್ಲೇ ಗೋಲ್ಡನ್ ಆರ್ಕಿಡ್ ಎಂಬ
ರ್ಟ್‌ಮೆಂಟಿದೆ. ಅದರ ಜಿ-2, ಜಿ-13
ಜಿ-11 ನಂಬರಿನ ಮೂರು ಫ್ಲಾಟನ್ನು
ಲಾ ಶರ್ಮಾ ಬಾಡಿಗೆಗೆ ಹಿಡಿದಿದ್ದಾಳೆ.
ಹೊಳಿ ಸಾಹೇಬರ ಗೂಟದ ಕಾರು ಇಲ್ಲಿಗೆ
ದ ಹಿಂದೆ ಪ್ರತಿನಿತ್ಯ ಈ ಅಪಾರ್ಟ್‌ಮೆಂಟಿನ
ದು ಬಂದು ನಿಲ್ಲುತ್ತಿದ್ದದ್ದನ್ನು ಕಂಡವರುಂಟು.
ಜಾರಕಿಹೊಳಿ ಮತ್ತು ಸುಶೀಲಾ ಶರ್ಮಾಳ
ಬಂಧದ ಬಗ್ಗೆ ಆವತ್ತೇ ಪತ್ರಿಕೆ ವಿಶೇಷ
ಯೊಂದನ್ನು ಪ್ರಕಟಿಸಿತ್ತು. ಇದಾಗಿದ್ದೇ ತಡ,
ಲಾ ಶರ್ಮಾ ಸದಾಶಿವನಗರದಲ್ಲಿ ಮಾಜಿ
ತ್ರಿ ದಿವಂಗತ ಡಿ.ಟಿ. ಜಯಕುಮಾರ್
ದ್ದ ಬಂಗಲೆಯೊಂದನ್ನು ಎರಡೂವರೆ
ಟಿಗೆ ಖರೀದಿಸಿದಳು. ಅದಕ್ಕೂ
ಕಿಹೊಳಿಯವರೇ ಆರ್ಥಿಕ ನೆರವು
ದ್ದರಂತೆ. ಒಂದಷ್ಟು ದಿನಗಳ ಕಾಲ
ಕಿಹೊಳಿಯವರ ಗೂಟದ ಕಾರು ಪ್ರತಿನಿತ್ಯ
ಬಂಗಲೆಯೆದುರು ನಿಂತಿರುತ್ತಿತ್ತು. ಅಷ್ಟಕ್ಕೂ
ಲಾ ಶರ್ಮಾ ಬಳಿ ಜಾರಕಿಹೊಳಿ ತನ್ನನ್ನು
ಶ್ ಎಂದು ಪರಿಚಯಿಸಿಕೊಂಡಿದ್ದರಂತೆ.
ಸಾ ಅಂಥಾದೊಂದು ಗುಪ್ತ ಹೆಸರಿನಿಂದ
ಲಾ ಶರ್ಮಾ ಕರೆಯುತ್ತಿದ್ದಳೇನೊ.
ಂಬಯಿಯಲ್ಲಿ ಮೈಕಾಯಕದ ಕೇಸು ಹೊತ್ತೇ
ದ್ದು ಜೈಲು ಕಂಡಿದ್ದ ಸುಶೀಲಾಳನ್ನು
ಂದೆ ಬಿಟ್ಟೇ ಜಾರಕಿಹೊಳಿ ದೇವನಹಳ್ಳಿ ಪಕ್ಕ
ಎಕರೆಗಳಷ್ಟು ಜಮೀನು ಖರೀದಿಸಿದ್ದರೆಂದೂ
ಹಬ್ಬಿತ್ತು. ಮಗಳು ಸುನೀತಾ ಮತ್ತು
ಶ್ ಹೆಸರಲ್ಲಿ ಜಾರಕಿಹೊಳಿ ಮುಂಬಯಿಯ
ತಾ ಪ್ಯಾಲೇಸ್ ಹೋಟೆಲಿನಲ್ಲಿ ತಂಗಿದ್ದರೆಂದೂ
ಲೆ ಸಮೇತ ಆ ರಿಯಲ್ ಎಸ್ಟೇಟ್ ವ್ಯಕ್ತಿ
ೋಪಿಸಿದ್ದ.

ಬಹುಶಃ ಈಕೆಯಿಂದ ಬಚಾವಾಗಲು
ೀಗಿ ಜಾರಕಿಹೋಳಿ ಸಿಡಿಯ ಸುಳಿಗೆ
ುಕಿದ್ದಾರಾ? ಏಕೆಂದರೆ ಖತರ್‌ನಾಕ್ ಹೆಂಗಸು
ೀಲಾ ಶರ್ಮಾ ಈಗಾಗಲೇ ಒಂದಿಬ್ಬರ ಬಗ್ಗೆ
ಥರದ ಸಿಡಿ ಸೃಷ್ಟಿಸಿ ರಂಪ ಮಾಡಿದ್ದಾಳೆ.
ಂಬಯಿ ಅಂಡರ್‌ವರ್ಲ್ಡ್ ಸಂಪರ್ಕವೂ
ೇಗಿದೆಯಂತೆ. ತನ್ನ ಮಗಳನ್ನು ಛೂಬಿಟ್ಟು
ರಕಿಹೊಳಿಗೆ 'ಮಂತ್ರಗಾಳಿ' ಹಾಕಿ ಅದನ್ನೇ
ಮಾಡಿಟ್ಟುಕೊಂಡು ಬ್ಲಾಕ್‌ಮೇಲ್
ಡುತ್ತಿದ್ದಾಳೆಂಬುದು ಸದ್ಯ ಹಬ್ಬಿರುವ ಸುದ್ದಿ.
ಹೊಲಸು ತಿನ್ನುವ ಬುದ್ಧಿ ಮಂತ್ರಿಯಾದ
ಾತ್ರಕ್ಕೇ ಹೋಗುತ್ತಾ? ಅಂಥ ಚಟಕ್ಕೆ ಬಿದ್ದ
ೆ ಮಂತ್ರಿಯನ್ನು ಬ್ಲಾಕ್‌ಮೇಲ್ ಮಾಡಿ
ೋಚುವವರು ಹುಟ್ಟಿಕೊಳ್ಳದೇ ಇರುತ್ತಾರಾ?
ತೆಂಥವರಿಗೋ ಟಿಕೆಟ್ ಕೊಟ್ಟು
ತೆಂಥವರನ್ನೋ ಮಂತ್ರಿ ಮಾಡಿದರೆ ಸೆಕ್ಸ್
ಯೂ ಬರುತ್ತದೆ, ಮಂತ್ರಿಗಳೇ ಜೈಲಿಗೆ
ೋಗುತ್ತಾರೆ. ಸದ್ಯ ಯಡ್ಡಿ ಸರ್ಕಾರ ಸಿಡಿ ಸನ್ನಿಗೆ
ಏನೇನು ಅನಾಹುತಕ್ಕೀಡಾಗುತ್ತೋ
ಯಾವ ವಿಕೆಟ್ ಉರುಳುತ್ತೋ
ಬಲ್ಲವರಾರು?

ಭಟ್ಟಂಗಿಯ ಕೈಯಲ್ಲಿ ಬೊಮ್ಮಾಯಿಯ ಜುಟ್ಟು

ಜಲಸಂಪನ್ಮೂಲ ಮಂತ್ರಿ ಬಸವರಾಜ ಬೊಮ್ಮಾಯಿಯವರು ತಮ್ಮ ಪರಮಾಪ್ತ ಭಟ್ಟಂಗಿ ಎಂ.ಎಸ್. ಶಶಿಧರ ನಿಲ್ಲು ಎಂದರೆ ಬೊಮ್ಮಾಯಿ ಎದ್ದು ನಿಂತು ಸೆಲ್ಯೂಟ್ ಹಾಕುತ್ತಾರೆ. ಯಕಶ್ಚಿತ್ ಛೇಲಾ ಒಬ್ಬನನ್ನು ನಿಯಂತ್ರಿಸಲಾಗದಷ್ಟು, ಆತನನ್ನು ಹೊರದಬ್ಬಲಾಗದಷ್ಟು, ಆತನ ಕಪಿಮುಷ್ಠಿಯಿಂದ ತನ್ನ ಇಲಾಖೆಯನ್ನೂ ರಕ್ಷಿಸಲಾಗದಷ್ಟು ನಿಸ್ಸಹಾಯಕತೆಗೆ ಕಾರಣವೇನು? ಅದು ಸೀಡಿಯ ಮಹಿಮೆಯಾ? ಮಂತ್ರಿ ಬೊಮ್ಮಾಯಿಯನ್ನೇ ತನ್ನ ಅಡಿಯಾಳನ್ನಾಗಿ ಮಾಡಿಕೊಳ್ಳಬಲ್ಲ ಯಾವ ಅಸ್ತ್ರ ಛೇಲಾ ಶಶಿಧರನ ಬಳಿಯಿದೆ?


ಬೊಮ್ಮಾಯಿ

ಜಲಸಂಪನ್ಮೂಲ ಮಂತ್ರಿ ಬಸವರಾಜ ಬೊಮ್ಮಾಯಿಯವರು ಇತ್ತೀಚೆಗೆ ಮಾಡಿಕೊಂಡ ಫಜೀತಿ, ಮನೆಮಂದಿಯ ಜೊತೆಗಿನ ಅವರ ವರ್ತನೆ ಮತ್ತು ಇಡೀ ನೀರಾವರಿ ಇಲಾಖೆಯಲ್ಲಿನ ಗೋಲ್‌ಮಾಲ್‌ಗಳನ್ನೆಲ್ಲ ಲೆಕ್ಕಹಾಕಿ ಹೇಳುವುದಾದರೆ ಒಂದೋ ಅವರನ್ನು ಯಾರೋ ಬ್ಲಾಕ್‌ಮೇಲ್ ಮಾಡುತ್ತಿದ್ದಾರೆ ಅಥವಾ ಯಾವುದೋ ಕಾಲಕ್ಕೆ ಚಿತ್ರಿಸಿದ ಸಿಡಿಯೊಂದು ಅವರನ್ನು ಸೂತ್ರದ ಗೊಂಬೆಯಂತೆ ಕುಣಿಸುತ್ತಿದೆ!



ಸದ್ಯ ಜಲಸಂಪನ್ಮೂಲ ಸಚಿವಾಲಯದ ಸಿಬ್ಬಂದಿಗಳೇ ಗುಲ್ಲೆಬ್ಬಿಸಿದಂತೆ ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯ ಲೇಡಿ ಕೌನ್ಸಿಲರ್ ಒಬ್ಬಳು ಇಡೀ ಸಿಡಿ ಪ್ರಕರಣದ ಹೀರೋಯಿನ್ನು!

ಆಕೆಯ ಜೊತೆ ಬೊಮ್ಮಾಯಿ ಮಹಾತ್ಮರು ಏಗಾಡುತ್ತಿರುವ ವಿವಿಧ ದೃಶ್ಯಾವಳಿಗಳನ್ನು ಚಿತ್ರಿಸಿದವನು ಅವರ ಪರಮಾಪ್ತ ಭಟ್ಟಂಗಿ ಎಂ.ಎಸ್. ಶಶಿಧರ!

ಈ ಶಶಿಧರ ಅಧಿಕೃತವಾಗಿ ಬಿಜೆಪಿಯ ಪದಾಧಿಕಾರಿಯಾಗಲಿ, ಸಚಿವ ಬೊಮ್ಮಾಯಿಗೆ ಆಪ್ತ ಸಹಾಯಕನಾಗಲಿ, ಸೆಕ್ರೆಟರಿಯಾಗಲಿ ಅಥವಾ ನೀರಾವರಿ ಇಲಾಖೆಯ ನೌಕರನಾಗಲಿ; ಏನೂ ಅಲ್ಲ, ಇವತ್ತು ಇಡೀ ನೀರಾವರಿ ಇಲಾಖೆ, ಇಂಜನಿಯರ್‌ಗಳ ವರ್ಗಾವರ್ಗಿ ಮತ್ತು ಅಷ್ಟೂ ಕಾಮಗಾರಿ ಟೆಂಡರ್‌ಗಳ ಗೋಲ್‌ಮಾಲ್ ವ್ಯವಹಾರಗಳಷ್ಟೇ ಏಕೆ; ಅಕ್ಷರಶಃ ಮಂತ್ರಿ ಬೊಮ್ಮಾಯಿಯವರನ್ನು ಈತನೇ ನಿಯಂತ್ರಿಸುತ್ತಿದ್ದಾನೆ.

ಈತ ನಿಲ್ಲು ಎಂದರೆ ಬೊಮ್ಮಾಯಿ ಎದ್ದು ನಿಂತು ಸೆಲ್ಯೂಟ್ ಹಾಕುತ್ತಾರೆ. ಕುಳ್ಳು ಎಂದರೆ ಕುಕ್ಕರಬಡಿದು ಗೋಣು ಬಗ್ಗಿಸುತ್ತಾರೆ. ಬೊಮ್ಮಾಯಿ ಎಲ್ಲೇ ಹೋದರೂ ಈತ ಕಡ್ಡಾಯವಾಗಿ ಜೊತೆಗಿರಲೇಬೇಕು. ಈತನಿಗೆ ಹೇಳದೇ ಬೊಮ್ಮಾಯಿ ಎಲ್ಲಿಗೂ ಹೋಗುವಂತಿಲ್ಲ, ಸಚಿವರ ಆಪ್ತ ಕಾರ್ಯದರ್ಶಿ ಬೊಮ್ಮನಹಳ್ಳಿ ಹೇಳಿಕೇಳಿ ಹಿರಿಯ ಕೆಎಎಸ್ ಅಧಿಕಾರಿ. ಈ ಶಶಿಧರ ಅವರನ್ನು ಅದೆಷ್ಟು ಹೀನಾಯವಾಗಿ ಏಕವಚನದಲ್ಲಿ ತೆಗಳುತ್ತಾನೆಂದರೆ, ಫೈಲೊಂದನ್ನು ತಂದಿದ್ದೆ ಟೇಬಲ್ಲಿನ ಮೇಲೆ ಕುಕ್ಕಿ.... 'ಏಯ್, ನಿಮ್ಮಪ್ಪನ ಮನೇದೇನು ಹೋಗಲ್ಲಾ.... ಅದುಮಿಕೊಂಡು ಸಹಿ ಹಾಕು....!' ಎನ್ನುತ್ತಾನೆ.

ಅದೇನು ದೌರ್ಬಲ್ಯವೋ ಗೊತ್ತಿಲ್ಲ ಈತನನ್ನು ಕಂಡಿದ್ದೇ ಹಸನ್ಮುಖಿಯಾಗಿದ್ದ ಬೊಮ್ಮಾಯಿ ಇದ್ದಕ್ಕಿದ್ದಂತೆ ಥರಗುಡುತ್ತಾರೆ. ಶಿಗ್ಗಾಂವಿ ಕ್ಷೇತ್ರದ ಬಿಜೆಪಿ ಅಧ್ಯಕ್ಷ ಅಕ್ಕಿ ವಕೀಲನಂತೂ 'ಆಲ್ರಪ್ಪಾ' ಗೆಲ್ಲಿಸಿ ಕಳಿಸಿದ ನಾವೇ ಸಚಿವರ ಹಿಂದೆ ಆಟೋ ಹತ್ತಿ ಬರಬೇಕು. ಈತ ಮಾತ್ರ ಮಂತ್ರಿಗಳ ಪಕ್ಕಕ್ಕೇ ಕೂತು ಗೂಟದ ಕಾರಲ್ಲಿ ಸುತ್ತಾಡುತ್ತಾನೆ ಅಂದ್ರ ಏನೋ ಹಕೀಕತ್ತು ಇರಲೇಬೇಕಲ್ಲ....?' ಎಂದು ಗೊಣಗುಟ್ಟುತ್ತಾನೆ. ಮುಖ್ಯಮಂತ್ರಿ ಕಚೇರಿಯಿಂದ ಹಿಡಿದು ಬೊಮ್ಮಾಯಿ ಧರ್ಮಪತ್ನಿ ಚೆನ್ನಮ್ಮನವರು ಕೂಡ ನೇರವಾಗಿ ಸಚಿವರನ್ನು ಮಾತಾಡಿಸುವಂತಿಲ್ಲ. ಏಕೆಂದರೆ ಶಶಿಧರ ಮೊದಲು ಮಾತಾಡಿ ಏನು ವಿಷಯ? ಯಾರು ಮಾತಾಡುತ್ತಿರುವುದು ಎಂದು ತಪಾಸಿಸಿದ ನಂತರವೇ ಬೊಮ್ಮಾಯಿ ತಮ್ಮ ಅಧಿಕೃತ ಮೊಬೈಲಿನಲ್ಲಿ ಮಾತಾಡುವುದು!

ಮಂತ್ರಿ ಬೊಮ್ಮಾಯಿಯ ಹೆಗಲಿಗೇ ನೇರವಾಗಿ ಕೈಹಾಕಿ 'ಅಣ್ಣಾ ಈ ಟೀಶರ್ಟು ಯಾಕೋ ನಿನಗೆ ಸೆಟ್ ಆಗಂಗಿಲ್ಲ...' ಎಂದರೆ ಮಂತ್ರಿಗಳು ತಕ್ಷಣವೇ ಬೇರೆ ಶರ್ಟ್ ತೊಟ್ಟು ಬರುತ್ತಾರೆ.

ಜಲಸಂಪನ್ಮೂಲ ಸಚಿವರ ಇಂಥ ಫಜೀತಿಗಳು ಒತ್ತಟ್ಟಿಗಿರಲಿ, ಮಂತ್ರಿಯೊಬ್ಬನ ಜುಟ್ಟು ಯಾರೋ ತಲೆಹಿಡುಕನೊಬ್ಬನ ಕೈಗೆ ಸಿಕ್ಕರೆ ಏನೆಲ್ಲಾ ಅನಾಹುತಗಳಾಗುತ್ತವೆ ಎಂಬುದಕ್ಕೆ ನೀರಾವರಿ ಟೆಂಡರ್‌ನ ಅವಾಂತರಗಳೇ ನಿದರ್ಶನದಂತಿವೆ.


ಶ್ರೀಮತಿ ಬೊಮ್ಮಾಯಿ

ಸಿಂಗಟಾಲೂರು ಏತ ನೀರಾವರಿ ಯೋಜನೆಯ ಟೆಂಡರ್ ಮೊತ್ತವೇ 60 ಕೋಟಿ. ಲಕ್ಷ ರೂಪಾಯಿಯ ಮೇಲೆ ಏನೇ ಟೆಂಡರ್ ಆಗಬೇಕೆಂದರೂ ಕಾಯ್ದೆಯಂತೆ ಅದು `E' procurment ಮೂಲಕವೇ ನಡೆಯಬೇಕು. ಹಾಗೇ ಇ ಟೆಂಡರ್ ಮೂಲಕ ನಡೆಯಬೇಕಿದ್ದ ಸಿಂಗಟಾಲೂರು ಏತ ನೀರಾವರಿ ಯೋಜನೆಯ ಟೆಂಡರ್‌ನ್ನು ಲೂಟಿಯ ಉದ್ದೇಶದಿಂದಲೇ ರಹಸ್ಯ ಟೆಂಡರ್ ಮೂಲಕ ಆಖೈರುಗೊಳಿಸುವಂತೆ ಮಾಡಿದವನು ಭಟ್ಟಂಗಿ ಶಶಿಧರ.

ಈ ರೀತಿ ಮಾಡಿಬಿಟ್ಟರೆ ತಮಗೆ ಯಾರು ಬೇಕೋ ಅಂಥವರಿಗೆ ಟೆಂಡರ್ ಕೊಡಬಹುದು ಮತ್ತು ಬೇಕಾಬಿಟ್ಟಿ ಕಮಿಷನ್ ದೋಚಬಹುದು. ಹೀಗೆ ಮ್ಯಾನುವಲ್ ಟೆಂಡರಾಗಿ ಮಾರ್ಪಡಿಸಿದ್ದಕ್ಕೆ ಇನ್ನೂ ಒಂದು ಕಾರಣವಿತ್ತು, ಅದು ಕೇಂದ್ರ ಬಿಜೆಪಿ ನಾಯಕ ವೆಂಕಯ್ಯ ನಾಯ್ಡು ತನ್ನ ಬೇನಾಮಿಯೊಬ್ಬನಿಗೆ ಕೊಡಿಸಬೇಕೆಂದಿದ್ದ ಟೆಂಡರಾಗಿತ್ತು. ಪ್ರತಿಷ್ಠಿತ ವಿಕ್ರಂ ಕಿರ್ಲೋಸ್ಕರ್ ಸೇರಿದಂತೆ ಒಟ್ಟು ಆರು ಮಂದಿ ಬಿಡ್ಡುದಾರರ ಪೈಕಿ ವೆಂಕಯ್ಯನ ಬೇನಾಮಿ ಶ್ರೀನಿವಾಸ ರೆಡ್ಡಿ ಕೂಡ ಓರ್ವ. ಈತ ಆಂಧ್ರದ ಪುಢಾರಿ ಮತ್ತು ಕಂಟ್ರಾಕ್ಟರ್. ಈತನಿಗೇ ಕಾಂಟ್ರಾಕ್ಟ್ ಕೊಡುವಂತೆ ವೆಂಕಯ್ಯ ನಾಯ್ಡು ಕೇಂದ್ರದ ಬಿಜೆಪಿ ನಾಯಕರಿಂದಲೂ ಹೇಳಿಸಿದ್ದ.

ಮೊನ್ನೆ ಅಂದರೆ ಕಳೆದ ಮಾರ್ಚ್‌ನಲ್ಲಿ ಟೆಂಡರ್ ವಿಲೇವಾರಿ ಆಖೈರಾಗಬೇಕಿತ್ತು. ವೆಂಕಯ್ಯ ನಾಯ್ಡು ಮಾತಿಗೆ ಮಣಿದು ಶ್ರೀನಿವಾಸ ರೆಡ್ಡಿಗೆ 61 ಕೋಟಿ ಕಾಂಟ್ರಾಕ್ಟ್ ಕೊಟ್ಟರೆ ದಕ್ಕುವುದು ಪುಡಿಗಾಸಿನ ಕಮಿಷನ್ ಮಾತ್ರ. ಅದೇ ವಿಕ್ರಂ ಕಿರ್ಲೋಸ್ಕರ್ ಪತ್ನಿಯ ಕಂಪೆನಿಗೆ ಕೊಟ್ಟರೆ ಒಟ್ಟೂ 19 ಪರ್ಸೆಂಟ್ ಕಮಿಷನ್ ಹುಟ್ಟುತ್ತದೆ. ವೆಂಕಯ್ಯ ನಾಯ್ಡುವನ್ನೇ ಧಿಕ್ಕರಿಸಿ ಇಂಥದೊಂದು ಡೀಲು ಕುದುರಿಸಿದ್ದೇ ಭಟ್ಟಂಗಿ ಶಶಿಧರ. ಇನ್ನು ಆತನ ಮಾತನ್ನು ಮೀರುವುದುಂಟೆ?

ಟೆಂಡರ್ ಆಖೈರುಗೊಳಿಸುವ ಹಿಂದಿನ ದಿನದಿಂದ ತಮ್ಮ ಖಾಸಗಿ ಮೊಬೈಲನ್ನು ಸ್ವಿಚ್ ಆಫ್ ಮಾಡಿಕೊಂಡರು ಬೊಮ್ಮಾಯಿ. ಭಟ್ಟಂಗಿ ಶಶಿಧರ ತಾನೇ ಜಲಸಂಪನ್ಮೂಲ ಇಲಾಖಾಧಿಕಾರಿಗಳನ್ನು ಕರೆಸಿದ್ದೇ ಕಿರ್ಲೋಸ್ಕರ್ ಕಂಪೆನಿಗೆ ಟೆಂಡರ್ ನೀಡಿಬಿಟ್ಟ. 61 ಕೋಟಿಯ ಸಿಂಗಟಾಲೂರು ಏತನೀರಾವರಿ ಕಾಮಗಾರಿ ಟೆಂಡರ್ 19 ಪರ್ಸೆಂಟ್ ಕಮಿಷನ್ನಿಗೆ ಕಿರ್ಲೋಸ್ಕರ್ ಕಂಪೆನಿಯ ಪಾಲಾಗಿತ್ತು. ಶುರುವಿನಿಂದಲೂ ಇದನ್ನೇ ಗುರಿಯಾಗಿಟ್ಟುಕೊಂಡು ತನ್ನ ಛೇಲಾ ಶ್ರೀನಿವಾಸ ರೆಡ್ಡಿಗಾಗಿ ಉಳಿದ ನಾಲ್ವರೂ ಬಿಡ್ಡುದಾರರನ್ನು ಕರೆದು ಮಸ್ಕಾ ಹೊಡೆದು ಅವರೆಲ್ಲರ ಟೆಂಡರನ್ನು ವಾಪಸ್ಸು ಪಡೆಯುವಂತೆ ಮಾಡಿ ಹೆಣಗಾಡಿದ್ದ ವೆಂಕಯ್ಯನಾಯ್ಡುಗೆ ಏನಾಗಿರಬೇಡ?

ಟೆಂಡರ್ ಕೈತಪ್ಪಿದ್ದು ಗೊತ್ತಾಗಿದ್ದೇ ಆಗ ಪಕ್ಷಾಧ್ಯಕ್ಷರಾಗಿದ್ದ ಸದಾನಂದ ಗೌಡರಿಗೆ ಫೋನ್ ಮಾಡಿ ಬೊಮ್ಮಾಯಿ ವಿರುದ್ಧ ಕಿಡಿಕಾರಿದ್ದಾರೆ. ಮರುದಿನ ಮೌರ್ಯ ಹೋಟೆಲಿನಲ್ಲಿ ನಡೆದ ಬಿಜೆಪಿ ಶಾಸಕಾಂಗ ಪಕ್ಷದ ಸಭೆಯಲ್ಲಿ ಸದಾನಂದ ಗೌಡರು 'ಯಾಕೆ ವೆಂಕಯ್ಯ ನಾಯ್ಡುಗೆ ಈ ರೀತಿ ಮಾಡಿದ್ರಿ? ಅಷ್ಟೊಂದು ಕಮಿಷನ್ ತಗೊಂಡ್ರಲ್ಲಾ; ಹೋಗ್ಲಿ ವೆಂಕಯ್ಯ ನಾಯ್ಡು ಕೇಳಿದ್ರೆ ಕೊಡ್ತಾ ಇರಲಿಲ್ಲಾ?' ಎಂದು ಮುಖ ಕಿವಿಚಿದ್ದಕ್ಕೆ ಬೊಮ್ಮಾಯಿ ನಿಸ್ಸಹಾಯಕರಾಗಿ 'ಸ್ಸಾರೀ' ಎಂದು ಕೈಚೆಲ್ಲಿದರಂತೆ!

ಇದು ಬೊಮ್ಮಾಯಿ

▶▶ 14

ಉತ್ತರ ಕನ್ನಡ

ಕುರಿಸ್‌ಗೆ ಕಲ್ಲು ಹೊಡೆದ ಸೈತಾನರ್‍ಯಾರು?



ಕಲ್ಲೆಸೆದು ಚೂರು ಮಾಡಲಾದ ಸೇಂಟ್ ಜೋಸೆಫ್ ಮತ್ತು ಸೇಂಟ್ ಮೇರಿ ಪ್ರತಿಮೆಗಳಿದ್ದ ಗಾಜಿನ ಗೂಡು

ಉತ್ತರ ಕನ್ನಡ ಎಂಬ ಮೂಗರ್ಜಿಗಳ ಜಿಲ್ಲೆಯಲ್ಲೀಗ ಹಿಂದೂತ್ವದ ಹಿಕಮತ್ತುದಾರರು ತಾಂಡವ ನೃತ್ಯ ಶುರುಹಚ್ಚಿಕೊಂಡಿದ್ದಾರೆ! ಪಕ್ಕದ ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗೆ ಹೋಲಿಸಿದರೆ ಕರಾವಳಿಯ ಈ ಅನಾಥ ಜಿಲ್ಲೆಯಲ್ಲಿ ಮತಾಂಧ ಮೇನಿಯಾ ಕಡಿಮೆ. ಒಂದು ದಿಕ್ಕು-ದೆಸೆ, ನಿಯತ್ತಿನ ರಾಜಕೀಯ ನಾಯಕ ನಿಲ್ಲದ ಈ ನತದೃಷ್ಟ ಜಿಲ್ಲೆಯಲ್ಲಿ ಇತ್ತೀಚಿನ ದಶಕದಲ್ಲಿ ಈ ಕಮ್ಯೂನಲ್ ಕಳೆ ಮಾತ್ರ ಹುಲುಸಾಗೇ ಬೆಳೆಯುತ್ತಿದೆ!



ಅನುಪಾ



ವಿಶಾಲ್

ಕಳೆದ ದಶಕದ ಆರಂಭದಲ್ಲಿ ಪೂರ್ತಿ ಒಂದು ವರ್ಷ ಭಟ್ಕಳದಲ್ಲಿ ನಡೆದ ಕೋಮು ಕಲಹ ಮತ್ತದರ ರೂವಾರಿ-ಹಾಲಿ ಸಂಸದ ಅನಂತ್ಕುಮಾರ್ ಜಿಲ್ಲೆಯ ಅಲ್ಲಲ್ಲಿ ಹುಟ್ಟುಹಾಕಿದ ಕಮ್ಯೂನಲ್ ಕಿತಾಪತಿ ಬಿಟ್ಟರೆ ಒಟ್ಟಾರೆ ಉತ್ತರ ಕನ್ನಡ ಶಾಂತಿ-ಸೌಹಾರ್ದತೆಯ ಜಿಲ್ಲೆಯೇ. ಈ ಕಮ್ಯೂನಲೀಕರಣದ ಅಮಲಿನಲ್ಲಿ ದಿವಂಗತ ಚಿತ್ತರಂಜನ್, ಅನಂತ ಹೆಗಡೆ, ಶಿವಾನಂದನಾಯ್ಕ, ಕಾಗೇರಿ ಮಾಣಿಗಳಂತಹ ನಾಲಾಯಕ್‌ರೆಲ್ಲಾ ಎಂ.ಪಿ., ಎಮ್ಮೆಲ್ಲೆ ಮಂತ್ರಿಯಾಗಿ ಮೆರೆದರು; ಕೆಲವರ ಮತೋನ್ಮತ್ತ ಮೆರವಣಿಗೆ ನಡೆಯುತ್ತಲೂ ಇದೆ.

ಇದೇ ಧರ್ಮಕಾರಣದ ಮಾರಣಹೋಮಕ್ಕೆ ಚಿತ್ತರಂಜನ್ ಹುಸ್ಸಿನಂತಾಗಿ ಆಹುತಿಯಾಗಿಯೂ ಹೋದರು. ಅಂದು ಕೇಂದ್ರದಲ್ಲಿ, ಇಂದು ರಾಜ್ಯದಲ್ಲಿ ಬಿಜೆಪಿ ಅಧಿಕಾರದಲ್ಲಿದ್ದರೂ ಚಿತ್ತರಂಜನ್ ಕೊಂದವರ ಹಿಡಿಯಲಾಗಲಿಲ್ಲ! ಇಷ್ಟಾದರೂ ಸಂಘಪರಿವಾರದ ಸರದಾರರು ಪಿಳ್ಳೆ ನೆಪವನ್ನಿಟ್ಟುಕೊಂಡು ಜಿಲ್ಲೆಯಲ್ಲಿ ಕೋಮು ರಾಜಕಾರಣದ ಮೈಲೇಜು ಪಡೆಯಲು ಹವಣಿಸುತ್ತಲೇ ಇರುತ್ತಾರೆ. ಆದರೆ ದಕ್ಷಿಣ ಕನ್ನಡ-ಉಡುಪಿ ಜಿಲ್ಲೆಗಳಷ್ಟು ಸುಲಭಕ್ಕೆ ಸ್ತಿಮಿತ ಕಳಕೊಂಡು ಕೆರಳುವ ಜಾಯಮಾನವೂ ಉತ್ತರ ಕನ್ನಡದಲ್ಲ, ಅಂಥ ಸಹಿಷ್ಣುಗಳು ಇಲ್ಲಿಯ ಜನರು.

ಆದರೆ ಯಾಕೋ ಈಗಿತ್ತಲಾಗಿ ದಕ್ಷಿಣ ಕನ್ನಡ-ಉಡುಪಿಗಳ 'ಕಮ್ಯೂನಲ್ ಕಲ್ಚರ್' ಉತ್ತರ ಕನ್ನಡದಲ್ಲಿ ವ್ಯಾಪಿಸುತ್ತಿದೆ. ಅನುಕೂಲಕ್ಕೆ ತಕ್ಕಂತೆ ಆರೆಸ್ಸೆಸ್, ಬಿಜೆಪಿ, ಭಜರಂಗದಳ, ಶ್ರೀರಾಮಸೇನೆ, ಹಿಂಜಾವೇ ಬ್ಯಾನರ್ ಹಿಡಿದು ಲವ್ ಜಿಹಾದ್, ಗೋಹತ್ಯೆ ಎಂದು ಬೊಬ್ಬೆ ಹೊಡೆಯುತ್ತಾ ಪರಧರ್ಮೀಯರ ಪೀಡಿಸುತ್ತಾ, ಚರ್ಚ್ ಮೇಲೆ ದಾಳಿ ಮಾಡುತ್ತಾ ಬೇಳೆ ಬೇಯಿಸಿಕೊಳ್ಳುವ ಹುನ್ನಾರಕ್ಕೆ ತಯಾರಾಗುತ್ತಿದ್ದಾರೆ. ಇವರಿಗೆಲ್ಲ ಹಿಂದೂತ್ವದ ಹರಾಮಿ ವ್ಯವಹಾರದಿಂದಲೇ ಎಂ.ಪಿ., ಎಮ್ಮೆಲ್ಲೆ ಮಿನಿಸ್ಟರ್, ಪಂಚಾಯತಿ, ನಿಗಮ-ಮಂಡಳಿ ಅಧ್ಯಕ್ಷ, ಸದಸ್ಯರಾಗಿ ಐಷಾರಾಮದಲ್ಲಿರುವ ಮತಾಂಧ ಎಲಿಮೆಂಟುಗಳೇ ರೋಲ್‌ಮಾಡೆಲ್‌ಗಳು! ಹೀಗಾಗಿ ಉತ್ತರ ಕನ್ನಡ ಮೊದಲಿನಂತಲ್ಲ; ಸೌಹಾರ್ದತೆಯ-ನೆಮ್ಮದಿಯ ಜಿಲ್ಲೆ 'ಧರ್ಮಾತ್ಮ'ರಿಂದ ಡಿಸ್ಟರ್ಬ್ ಆಗುತ್ತಿದೆ...

ಪ್ರೇಮಕ್ಕೂ ಪರ್ಮಿಟ್ಟೇ?

ಕಳೆದೊಂದು ತಿಂಗಳಿಂದ ಉತ್ತರ ಕನ್ನಡದ ಕರಾವಳಿಯ 'ಮುಗ್ಧ' ತಾಲ್ಲೂಕು ಹೊನ್ನಾವರಕ್ಕೆ ಹಿಂದೂತ್ವದ ಅಮಲೇರಿಸಲು ಸಂಘಪರಿವಾರದ ಪರಾಕ್ರಮಿಗಳು ಷಡ್ಯಂತ್ರ ಮಾಡುತ್ತಲೇ ಇದ್ದಾರೆ. ಊಹುಂ, ಉದ್ವೇಗ-ಉನ್ಮಾದಕ್ಕೆ ಒಳಗಾಗುತ್ತಿಲ್ಲ ಶಾಂತ ಸ್ವಭಾವದ ಹೊನ್ನಾವರ! ಸಂಘಪರಿವಾರದ ಕರಾಮತ್ತುಗಾರರು ಸ್ಥಳೀಯ ಹಿಂದೂ ಸಂಘಟನೆಗಳ 'ಭೀಷ್ಮಜ್ಜ' ವಿ.ಕೆ.ವೀಣಾಕರ್‌ರ ಮನೆಯಲ್ಲಿ ಕುಳಿತು ಕೈ-ಕೈ ಹಿಸುಕಿಕೊಳ್ಳುತ್ತ ಹಿಂದೂತ್ವ ಹ್ಯಾಬಾಕ್ ಎಬ್ಬಿಸಲು ಸ್ಕೆಚ್ ಹೆಣೆಯುತ್ತಲೇ ಇದ್ದಾರೆ.


ಪುರೋಹಿತಶಾಹಿಗಳ ಈ ಹುನ್ನಾರಕ್ಕೆ ಬಲಿ ಬೀಳುತ್ತಿರುವವರೆಲ್ಲ ಶೂದ್ರರು ಮತ್ತು ಅರೆ ಬ್ರಾಹ್ಮಣ ಕೊಂಕಣಿಗರ ಉಂಡಾಡಿ ಗುಂಡಣ್ಣಗಳು. ದುರಂತವೆಂದರೆ, ಈ ಮೀನು ಪಳ್ದಿ ಉಣ್ಣುವ ಅರೆ ಶೂದ್ರ ಕೊಂಕಣಿ (ಗೌಡ ಸಾರಸ್ವತ ಬ್ರಾಹ್ಮಣ-ಜಿಎಸ್‌ಬಿ) ಹುಡುಗರು ಭಜರಂಗಿ, ಬಿಜೆಪಿ ಬಾವುಟ ಹಿಡಿದು ಓಡೋಡಿಹೋಗುವ ಭರದಲ್ಲಿ ಮಜ್ಜೆ, ತಂಬ್ಳಿ ಹೈಗರ ಖೆಡ್ಡಾಕ್ಕೆ ಬಿದ್ದು ಒದ್ದಾಡುತ್ತಿದ್ದಾರೆ. ಕುಮಟಾ-ಹೊನ್ನಾವರದ ಹಿಂದೂತ್ವ ರಕ್ಷಣೆಯ ಗುದುಮುರಿಗೆಯಲ್ಲಿ, ಈ ಪೆದ್ದು ಕೊಂಕಣಿ ಪೋರರೇ ಮುಂಚೂಣಿಯಲ್ಲಿ ಕಾಣಿಸುತ್ತಾರೆ.

ಕ್ರಿಶ್ಚಿಯನ್ ಹುಡುಗ ಮತ್ತು ಹಿಂದೂ ಹುಡುಗಿ ಪ್ರೇಮಿಸಿ ಮದುವೆಯಾದ 'ಕ್ಷುಲ್ಲಕ' ಘಟನೆಯನ್ನೇ ಕ್ಯಾತೆ ತೆಗೆಯಲು 'ಇಶ್ಯೂ' ಮಾಡಿಕೊಂಡಿರುವ ಕುಮಟಾ-ಹೊನ್ನಾವರದ ಹಿಂದೂತ್ವವಾದಿಗಳು ಬರೋಬ್ಬರಿ ಒಂದು ತಿಂಗಳಿಂದ ಮತಾಂಧ ಕಸರತ್ತು ಮಾಡುತ್ತಿದ್ದಾರೆ. ಹೊನ್ನಾವರ ನಗರದ ಕೆಳಗಿನ ಪಾಳ್ಯದ ವಿಶಾಲ್ ಫರ್ನಾಂಡಿಸ್ ಮತ್ತು ನಗರದಿಂದ 12 ಕಿ.ಮೀ. ದೂರದಲ್ಲಿರುವ ಮಂಕಿ-ಮಾವಿನಕಟ್ಟೆಯ ಅನುಪಾ ಶಾನಭಾಗ್ ತುಂಬ ಸಣ್ಣವರಿರುವಾಗಿನಿಂದಲೇ ಪರಸ್ಪರ ಪ್ರೀತಿಸುತ್ತಿದ್ದರು. ಸ್ಥಳೀಯ ಎಸ್‌ಡಿಎಂ ಕಾಲೇಜಿನ ಅಂತಿಮ ಡಿಗ್ರಿ ವಿದ್ಯಾರ್ಥಿಗಳಾದ ಇವರಿಬ್ಬರೂ ಜೀವನಸಂಗಾತಿಗಳಾಗುವ ನಿರ್ಧಾರ ಅದ್ಯಾವತ್ತೋ ಮಾಡಿಯೂ ಆಗಿತ್ತು.

ಈ ಅಫೇರ್ ಎರಡೂ ಮನೆಯವರಿಗೆ ಗೊತ್ತಿರಬೇಕು. ವಿಶಾಲ್ ಅನುಪಾ ಮನೆಗೆ, ಅನುಪಾ ವಿಶಾಲ್ ಮನೆಗೆ ಹೋಗಿಬರುವ ಸಲಿಗೆಯೂ ಸಲೀಸಾಗಿ ಸಿಕ್ಕಿತ್ತು. ಹಲವು ವರ್ಷಗಳಿಂದ ಇದು ನಡೆದಿತ್ತು. ಅನುಪಾಳ ತಂದೆ ಗಣೇಶ್ ಶಾನಭಾಗ್ ಸಣ್ಣ-ಪುಟ್ಟ ಬಿಸಿನೆಸ್ ಮಾಡುತ್ತಾನೆ. ವಿಶಾಲನ ತಂದೆ ಡಿ.ಸಿ.ಡಬ್ಲ್ಯೂ ಫರ್ನಾಂಡಿಸ್ ಕೆಇಬಿ ಸಹಾಯಕ ಇಂಜಿನಿಯರ್ ಆಗಿ ನಿವೃತ್ತನಾಗಿದ್ದರೆ, ತಾಯಿ ಕಸ್ಟಮ್ ಇನ್ಸ್‌ಪೆಕ್ಟರ್ ಆಗಿದ್ದರು. ವಿಶಾಲ್ ಆಗರ್ಭ ಶ್ರೀಮಂತ ಮಾರ್ಷಲ್ ನಾಯಕ್ ಫ್ಯಾಮಿಲಿಯ ಏಕೈಕ ಗಂಡು ಸಂತಾನ. ತಾಯಿತಂದೆಯರ ಪುತ್ರ ವ್ಯಾಮೋಹ, ಅಪಾರ ಹಣ ವಿಶಾಲ್‌ನನ್ನು ಸಣ್ಣಪ್ರಾಯದಲ್ಲೇ ಮದುವೆಯಾಗುವ ಮಟ್ಟಕ್ಕೆ ಮುಟ್ಟಿಸಿದೆ; ಹಿಂದೂತ್ವವಾದಿಗಳ ಚಾಲೆಂಜ್ ಎದುರಿಸುವ ದಾಡಸಿತನ ತುಂಬಿದೆ.

ಮಗಳಿಗೆ ಪೊರಕೆ ಸೇವೆ

ವಿಶಾಲ್-ಅನುಪಾ ಪ್ರೀತಿ ಸಭ್ಯತೆಯ ಚೌಕಟ್ಟು ಮೀರಿರಲಿಲ್ಲ. ಆಕೆ ವಿಜ್ಞಾನ ವಿಭಾಗದ ಡಿಸ್ಟಿಂಕ್ಷನ್ ವಿದ್ಯಾರ್ಥಿನಿಯಾದರೆ, ಆತನೂ ಜಾಣ ಹುಡುಗನೇ. ಯಾವುದೇ ಅತಿರೇಕಕ್ಕೆ ಹೋಗದೆ ಓದಿನ ಜತೆ-ಜತೆಯೇ ಪ್ರಣಯವನ್ನು ಮುಂದುವರೆಸಿದ್ದರು. ಇದೆಲ್ಲ ಹಿಂದಿನಿಂದ ಗೊತ್ತಿದ್ದರೂ ಅನುಪಾಳ ತಂದೆತಾಯಿ ಇದ್ದಕ್ಕಿದ್ದಂತೆ ವಿಶಾಲ್ ಸಹವಾಸ ಬಿಡುವಂತೆ ಮಗಳಿಗೆ ತಾಕೀತು ಮಾಡಲು ಶುರುಮಾಡಿದ್ದಾರೆ. ಮೇಲ್ವರ್ಗದ ಕೊಂಕಣಿಗರ ಹುಡುಗಿ ಕ್ರಿಶ್ಚಿಯನ್ ಹುಡುಗನ ಗಂಟುಹಾಕಿಕೊಳ್ಳುವುದು 'ಪ್ರತಿಷ್ಠೆ'ಗೆ ಕುಂದೆಂದು ಹಿಂದೂತ್ವದ ಉಪದೇಶ ಅನುಪಾಳ ತಂದೆಗಾಗಿದ್ದೇ ಆತ ತಿರುಗಿ ಬೀಳಲು ಕಾರಣ.



ವಿಶಾಲ್-ಅನುಪಾ ಮದುವೆ ನಂತರ...

ಗಣೇಶ ಶಾನಭಾಗ್ ದಂಪತಿಗಳು ಕ್ರಿಶ್ಚಿಯನ್ ಹುಡುಗ ವಿಶಾಲ್ ಫರ್ನಾಂಡಿಸ್‌ನೊಂದಿಗಿನ ಸಂಬಂಧ ಮುಂದುವರಿಸದಂತೆ ಮಗಳಿಗೆ ತಾಕೀತು ಮಾಡಿದರು. ಅದಕ್ಕವಳು ಒಪ್ಪದಿದ್ದಾಗ ಪೊರಕೆಯಿಂದ ಬಾಸುಂಡೆ ಬರುವಂತೆ ಹೊಡೆದರು. ಕಾಡಿದರು, ಪೀಡಿಸಿದ[...] ಅನುಪಾ ವಿಶಾಲನನ್ನೇ ಮದು[...] ಆಗುವುದೆಂದು ಹಠ ಹಿಡಿದಳು. [...] ಆಕೆಗೆ ಗೊತ್ತಾಗದಂತೆ ಗುಟ್ಟಾಗಿ ದೂ[...] ಪೂನಾದ 'ವರ'ನನ್ನು ಫಿಕ್ಸ್ ಮಾಡಿದ[...] ಆತ ಮೊದಲ ಹೆಂಡತಿಗೆ ಡೈವ[...] ಮಾಡಿದಂತಹ ಮಹಾನುಭಾ[...] ಘಾತುಕ-ಹಣ ಪ್ರತಿಷ್ಠೆಯ ಪಾಲ[...] ಪ್ರಯತ್ನ ಅನುಪಾಳನ್ನು ಕಂಗಾಲಾಗಿ[...] ಬಿಟ್ಟಿತು.

ಅನಿವಾರ್ಯದ ಮದುವ[...]

ಅಂತಿಮ ಪರೀಕ್ಷೆಯ ಸಿದ್ಧತೆಯಲ್ಲಿ[...] ವಿಶಾಲ್-ಅನುಪಾರಿಗೆ ದಿಕ್ಕೇ ತೋಚದಂತಾಯ್ತು. ಸ್ವ[...] ಕಾಲಿನ ಮೇಲೆ ನಿಂತ ಬಳಿಕ ಮದುವೆ ಆಗು[...] ತೀರ್ಮಾನದಲ್ಲಿದ್ದವರಿಗೆ ತಕ್ಷಣ ಮದುವೆಯಾಗುವ ಒತ್ತ[...]-ಅನಿವಾರ್ಯತೆ ಸೃಷ್ಟಿಯಾಯಿತು. ಏಪ್ರಿಲ್ 7ರಂ[...] ಕಾಲೇಜಿಗೆಂದು ಹೊನ್ನಾವರಕ್ಕೆ ಬಂದಿದ್ದ ಅನುಪಾ ಮ[...] ವಿಶಾಲ್ ನಾಪತ್ತೆಯಾಗಿಬಿಟ್ಟರು. ಅನುಪಾಳ ತಂದೆ [...] ಮಗಳನ್ನು ವಿಶಾಲ್ ಮತ್ತವನ ಗೆಳೆಯರು ಕಿಡ್ನಾಪ್ ಮಾ[...]ದ್ದಾರೆಂದು ಪೊಲೀಸ್ ಕಂಪ್ಲೇಂಟ್ ಕೊಟ್ಟ. ಆತನ ಹಿಂ[...] ಮುರುಳೀಧರ ಗಾಯಕ ತೊಂಡೆ, ವಿಜಯ್ ಕಾಮತ[...] ಜೆ.ಟಿ.ಪೈ, ನಾಯಕ್‌ನಂಥ ಕಟ್ಟರ್ ಹಿಂದೂತ್ವವಾದಿ ಗ್ಯಾಂ[...] ನಿಂತಿತ್ತು.

ವಿಶಾಲ್-ಅನುಪಾರಿಗೆ ಬೆದರಿಕೆಗಳು ನಿರಂತರವಾ[...] ಬರಲಾರಂಭಿಸಿತು. ಹಿಂದೂತ್ವವಾದಿ ಸೈತಾನರ ಸತಾಯಿಸು[...] ಜೋರಾದಾಗ ಅನುಪಾ-ವಿಶಾಲ್ ವಿಧಿಯಿಲ್ಲದೆ ಕಾಲೇ[...] ಬಳಿಯಿರುವ ಮೂಡಗಣಪತಿ ದೇವಸ್ಥಾನದಲ್ಲಿ ಮಿತ್ರಮಂ[...] ಎದುರು ಹಾರ ಬದಲಾಯಿಸಿಕೊಂಡರು. ತಾಳಿ ಹಾಕಿಕೊಂ[...] ಅನುಪಾ ಗೃಹಿಣಿಯಾಗಿ ಗಂಡನ ಜತೆ ಫೋಟೋ[...] ಪೋಸು ಕೊಟ್ಟಳು. ಪಕ್ಕದ ಕುಮಟೆಯ ಸಬ್‌ರಿಜಿಸ್ಟ್ರಾ[...] ಕಚೇರಿಯಲ್ಲಿ ಮದುವೆ ನೋಂದಣಿಯ ಮನವಿ ಸಲ್ಲಿಸಿದ[...] ರಹಸ್ಯ ಸ್ಥಳದಿಂದಲೇ ಇದೆಲ್ಲ ನಡೆಯಿತು.

ಮದುವೆ ನಿಲ್ಲಿಸುವ ಪಾತಕ

ವಿಶಾಲ್‌ನ ಪಾಲಕರ ಪ[...] ಪೊಲೀಸರು-ಹಿಂದೂತ್ವವಾದಿಗಳ ಒತ್ತ[...] ಹೆಚ್ಚಾಯ್ತು. ವಿಶಾಲ್-ಅನುಪಾರ[...] ಠಾಣೆಯಲ್ಲಿ ಹಾಜರು ಪಡಿಸದೇ ಬೇ[...] ದಾರಿಯೇ ಇಲ್ಲವಾಯ್ತು. ಠಾಣೆಯ[...] ಅನುಪಾ-ವಿಶಾಲ್ ತಾವು ಮದು[...]ಯಾಗಿರುವುದಾಗಿ ಹೇಳಿದರು. ಕೋ[...]ನಲ್ಲೂ ಹಾಗೇ ಹೇಳಿದರು. ಮೆಜಾರಿಟಿ[...] ಬಂದಿರುವ ವಿಶಾಲ್-ಅನು[...] ದಂಪತಿಗಳೆಂದು ಕೋರ್ಟು ಹೇಳಿ[...] ಇಷ್ಟಾದರೂ ಹಿಂದೂವಾದಿಗಳ ತ[...] ನಿಲ್ಲಲಿಲ್ಲ.

ಏಪ್ರಿಲ್ 17ರಂದು ಕುಮಟಾ ಉಪನೋಂದಣಾ[...]ಕಾರಿ ಕಚೇರಿಯಲ್ಲಿ ವಿಶಾಲ್ -ಅನುಪಾರ ಮದು[...] ರಿಜಿಸ್ಟರ್ ಆಗುವುದಿತ್ತು. ಅದನ್ನು ಪತ್ತೆಹಚ್ಚಿದ ಹಿಂದ[...]ಖಳರು ಮದುವೆ ನಿಲ್ಲಿಸುವ ಘೋರ ಪಾಪಕ್ಕೆ ಅಣಿಯಾ[...] ಬಿಟ್ಟರು. ಸಬ್‌ರಿಜಿಸ್ಟ್ರಾರ್ ಕಚೇರಿ ಎದುರು ಜಮೆಯಾ[...] ಹಿಂದೂ ಧರ್ಮ ರಕ್ಷಕರು ಮದುವೆಗೆ ಅವಕಾಶ ಕೊಡ[...] ಕೂಗಾಡತೊಡಗಿದರು. ಹಿಂದೂ ಪುಂಡರ ಪರವ[...] ಸಬ್‌ರಿಜಿಸ್ಟ್ರಾರ್ ಕುಂಟುನೆಪವೊಡ್ಡಿ ಮದುವೆ ನೋಂದ[...] ಮಾಡಲೇ ಇಲ್ಲ.

ವಶೀಕರಣವೆಂಬ ಹುಚ್ಚು

ಮದುವೆಗೆ ಕಲ್ಲುಹಾಕಿದ ವಿಕೃತಾನಂದದಲ್ಲಿ ಹಿಂದ[...] ಜಾಗರಣ ವೇದಿಕೆಯ ಸನಾತನಿಗಳು ಭರ್ಜರಿ ಪ್ರೆಸ್‌ಮೀ[...] ನಡೆಸಿದರು. ಹುಡುಗಿಗೆ ಕ್ರಿಶ್ಚಿಯನ್ ಕಡೆಯವರು ವಶೀಕ[...] ಮಾಡಿಟ್ಟುಕೊಂಡಿದ್ದಾರೆ. ಮದುವೆಯ ನೆಪದಲ್ಲಿ ಮತಾಂ[...] ಮಾಡಲಾಗುತ್ತಿದೆ. ಹುಡುಗ ಅನೈತಿಕ ಚಟುವಟಿಕೆಯ[...] ತೊಡಗಿದ್ದಾನೆಂದು ಬಾಯಿಗೆ ಬಂದಂತೆ ಹಿಂದೂ ಧರ್ಮ ರಕ್ಷಕರು ಆರೋಪ ಮಾಡಿ ಕೇಕೆ ಹಾಕಿದರು.


'ವಶೀಕರಣ' ಸಬೂಬು ಹೇಳಿ ಅನುಪಾಳ[...] ತವರುಮನೆಗೆ ತಂದೊಪ್ಪಿಸಿ ಬೇರೆ ಮದುವೆ ಮಾಡು[...] ಸಂಚು ಹಿಂದೂವಾದಿಗಳದು. ಈಗ ಪತಿಯ ಮನೆಯ[...]ರುವ ಅನುಪಾ ಈ ಹಿಂದೂ ಸೈತಾನರ ಭೂತ ಬಿಡಿಸಿದ[...] "ವಶೀಕರಣವೂ ಇಲ್ಲ... ಮಣ್ಣೂ ಇಲ್ಲ... ನಾನು-ವಿಶಾ[...] ಪ್ರಾಮಾಣಿಕವಾಗಿ-ಪರಿಶುದ್ಧವಾಗಿ ಪ್ರೀತಿಸುತ್ತಿದ್ದೇವೆ. ನ[...] ಪ್ರೀತಿ ಕೊಂದು ಎರಡನೇ ಸಂಬಂಧಕ್ಕೆ ನನ್ನನ್ನು ಧ[...] ಎರೆಯುವ ಹೆತ್ತವರ ಮೋಸಗಾರಿಕೆ ನಂಗೆ ಗೊತ್ತಾಗಿ[...] ಧರ್ಮ ಹೆಸರಲ್ಲಿ ನಮ್ಮನ್ನು ಕಾಡುವುದು ಬಿಟ್ಟು, ಬದುಕ[...] ಬಿಡಿ...." ಎಂದು ಈ 22ರ ಹರೆಯದ ಕೊಂ[...] ಪೋರಿ ಹಿಂದೂ ಹರಾಮಿಗಳಿಗೆ ಮುಖಕ್ಕೆ ಬಾರಿಸಿದ[...] ಹೇಳಿದಳು.

ಅಲ್ಪರ ರಾಜಕಾರಣ

ಒಂದು ಅಂದಾಜಿನಂತೆ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಚರ್ಚ್‌ಗಳ ಮೇಲಾದ ದಾಳಿಗಿಂತ ಹೆಚ್ಚು ಆಕ್ರಮಣಗಳು ಉತ್ತರ ಕನ್ನಡದಲ್ಲಾಗಿದೆ. ಆದರೆ ಅದು ಅಂಥ ದೊಡ್ಡ ಸುದ್ದಿಯಾಗಿಲ್ಲ, ಹಾಗಂತ ಜಿಲ್ಲಾಡಳಿತ, ಜಿಲ್ಲೆಯ ಇಬ್ಬರು ಮಂತ್ರಿಗಳು, ಅಷ್ಟೇ ಏಕೆ? ವಿರೋಧ ಪಕ್ಷದ ಪ್ರಭೃತಿಗಳು ಈ ಬಗ್ಗೆ ತಲೆ ಕೆಡಿಸಿಕೊಂಡಿಲ್ಲ.

ಎಂಥ ಕ್ರೂರ ವ್ಯಂಗ್ಯ ನೋಡಿ. ಹೊನ್ನಾವರದ ಇಗರ್ಜಿಗಳ ಮೇಲೆ ಹಿಂದೂ ಹರಾಮಿಗಳು ಕಲ್ಲು ಎಸೆದು ಕೋಮು ಕಿತಾಪತಿಗೆ ಹವಣಿಸಿದ್ದು ಜಿಲ್ಲೆಯ ಎದುರಾಳಿ ಮಂತ್ರಿಗಳ ಪ್ರತಿಷ್ಠೆಯ ಮೇಲಾಟಕ್ಕೆ 'ವಸ್ತು'ವಾಗಿದೆ. ಹೇತ್ಲಾಂಡಿ ಜಿಲ್ಲಾ ಉಸ್ತುವಾರಿ ಮಂತ್ರಿ ಕಾಗೇರಿ ಹೆಗಡೆ ಮತ್ತು ಕಾರವಾರದ ಭಂಡ ಮಿನಿಸ್ಟರ್ ಆನಂದ್ ಅಸ್ನೋಟಿಕರ್ ಕಟ್ಟಾ ವೈರಿಗಳು. ಆನಂದನ ಬಾಲ ಕತ್ತರಿಸಲು ಕಾಗೇರಿ ಹವಣಿಸಿದಂತೆಲ್ಲ ಆತನ ಉಸ್ತುವಾರಿಗೆ ಭಂಗ ತರಲು ಆನಂದ್ ಆಟ ಆಡುತ್ತಾನೆ. ಈ ಮೇಲಾಟದಲ್ಲಿ ಜಿಲ್ಲೆ ದಿಕ್ಕಿಲ್ಲದಂತಾಗಿದೆ. ಕಾಗೇರಿ ಘಟ್ಟದ ಕೆಳಗಿನ (ಕರಾವಳಿ ಭಾಗ) ಕಡೆಗಣಿಸಿ ಘಟ್ಟದ ಮೇಲೆ ಸ್ವಜಾತಿ ಹೈಗರ ಸಾಮ್ರಾಜ್ಯ ಕಟ್ಟಲು ಕಿತಾಪತಿ ಮಾಡುತ್ತಿದ್ದಾನೆ. ಮತ್ತೊಂದೆಡೆ ಕಾಸು ಬಾಚುತ್ತಾ ಭ್ರಷ್ಟರ ರಾಜ ಎನಿಸಿಕೊಳ್ಳುತ್ತಿದ್ದಾನೆ.





ಈ ಕಾಗೇರಿ-ಅಸ್ನೋಟಿಕರ್ ಜಿಲ್ಲೆಯಲ್ಲಿ ಏನೇ ಘಟನೆ ನಡೆದರೂ ಅಧಿಕ ಲಾಭ ಪಡೆಯಲು ನಿರ್ಲಜ್ಜ ಕಸರತ್ತು ಮಾಡುತ್ತಿರುತ್ತಾರೆ. ಮೊನ್ನೆ ಹೊನ್ನಾವರ ಚರ್ಚ್‌ಗೆ ಹಿಂದೂ ಪಾಪಿಗಳು ಕಲ್ಲು ಎಸೆದಾಗ ಆನಂದನ ಬೆಂ-ಬಾಲಕ ಅಂತೋನಿ ಡಿಸೋಜಾ ಎಂಬ ಅಲ್ಪಸಂಖ್ಯಾತರ ಆಯೋಗದ ಸದಸ್ಯ "ಇದು ಕಾಗೇರಿಯ ಹೇತ್ಲಾಂಡಿತನದಿಂದಾದ ದುರ್ಘಟನೆ. ತಕ್ಷಣ ಆತನ ಉಸ್ತುವಾರಿ ಸ್ಥಾನದಿಂದ ಉಚ್ಚಾಟಿಸಬೇಕು... ಈ ಬಗ್ಗೆ ಸಿಎಂಗೆ ದೂರು ಕೊಡ್ತೇನೆ..." ಎಂದುಬಿಟ್ಟ.

ಅಂದಹಾಗೆ ಯಡ್ಡಿ ಮಗ ಸಂಸದ ರಾಘವೇಂದ್ರನ ಕೃಪಾಕಟಾಕ್ಷದಿಂದ ಅಲ್ಪಸಂಖ್ಯಾತರ ಆಯೋಗದ ಸದಸ್ಯತ್ವ ಗಿಟ್ಟಿಸಿದ್ದ ಅಂತೋನಿ ಬಿಜೆಪಿ ಸರ್ಕಾರದ ವಿರುದ್ಧವೇ ಮಾತನಾಡಿದ್ದ. ಅದಕ್ಕೆ ಆತನನ್ನು ಯಡ್ಡಿ ಗವರ್ನ್‌ಮೆಂಟ್ ಆಯೋಗದ ಮೆಂಬರಿಕೆಯಿಂದ ಉಚ್ಚಾಟಿಸಿದೆ. ಆದರೀತ ಸ್ಟೇ ತಂದು ಕೂತಿದ್ದಾನೆ.

ಕಾಗೇರಿ ತೆಗಳಿದರೆ ಆನಂದ್ ತನ್ನ ರಕ್ಷಿಸಬಹುದೆಂಬ ಜಾತಿ ರಾಜಕೀಯ ಈತನದು. ಜಿಲ್ಲೆಯ ಅಲ್ಪಸಂಖ್ಯಾತರ ಆಯೋಗದ ಒಳಿತಿಗೇ ಏನೂ ಮಾಡದ ಅನಾಮಧೇಯ ಆಸಾಮಿ. ಆಯೋಗದ ಅಧ್ಯಕ್ಷನಾಗಿದ್ದೇ ಚಮಚಾಗಿರಿಯಿಂದ. ಜಿಲ್ಲೆಯ ಅಲ್ಪಸಂಖ್ಯಾತರ ಬದುಕಿನ ಪರಿಚಯವೇ ಇಲ್ಲದ ಈ ಉಂಡಾಡಿ ಗುಂಡಣ್ಣ ಏನೇ ಮಾತನಾಡಿದರೂ ಮೈನಾರಿಟಿಗಳಿಗೆ ಲಾಭವಾಗದು. ಬಿಜೆಪಿಯ ಒಳಗಿನ ಕೊಳಕಿಗೆ ಅಂತೋಣಿ ಮಾತು ಸಂಕೇತವಷ್ಟೇ!

ಹೋಲಿ ಕ್ರಾಸ್‌ಗೆ ಕಲ್ಲು

ನುಷಾ-ವಿಶಾಲ್ ಮದುವೆಯಿಂದ ಮುಖಭಂಗಿತ ಹಿಂದೂ ಪಡೆಯ ಪರಾಕ್ರಮಿಗಳು ಚಡಪಡಿಸ ಗಿದರು. ಮದುವೆ ನೋಂದಣಿ ನಿಲ್ಲಿಸಿದರೂ ಗಳನ್ನು ವಿಶಾಲ್‌ನಿಂದ ಬೇರ್ಪಡಿಸುವುದು ಮಾತ್ರ ನೆಮುರುಕರಿಗೆ ಸಾಧ್ಯವಾಗಲೇ ಇಲ್ಲ. "ಕೆಲ ವರೆಗಾದರೂ (ವಶೀಕರಣ ಇಳಿವತನಕ) ತವರಿಗೆ ಎಂಬ ಮೋಸಗಾರಿಕೆಯೂ ಫಲಿಸಲಿಲ್ಲ. ಹಾಗೆ ತೆ ಬಲವಂತದಿಂದ ಅವರಿಬ್ಬರನ್ನು ಬೇರೆ ಮಾಡುವ ಹಾಕಲಾಗಿತ್ತು. ಒಟ್ಟಿನಲ್ಲಿ ಅನುಷಾ-ವಿಶಾಲ್‌ರನ್ನು ನೂಡಿ ಹಿಂದೂ ಧರ್ಮ ಉದ್ಧಾರ ಮಾಡುವ ಕೆ ಮಿಂಚುವ-ಹೀರೋಗಳೆನಿಸಿಕೊಳ್ಳುವ ಯಾವ ಉದ್ದೇಶವೂ ಈಡೇರದೆ ಹಿಂದೂ ಹೀರೋ ಳು ಹತಾಶರಾಗಿ ಹೋದರು.

ಈ ಅಂತರ್‌ಧರ್ಮೀಯ ಮದುವೆಯನ್ನೇ ಆಧಾರ ಟ್ಟುಕೊಂಡು ಹಿಂದೂ ಜಾಗರಣಾ ವೇದಿಕೆಯ ಮುಗಳು ಹೊನ್ನಾವರದಲ್ಲೊಂದು ಪ್ರತಿಭಟನಾ ಣಿಗೆಯೂ ತೆಗೆದರು. ಲವ್ ಜಿಹಾದ್, ಮತಾಂತರ, ಮುಗಳಲ್ಲಿ ಮೊಬೈಲ್ ಬಳಕೆಯಿಂದ ಅನೈತಿಕ ದಂಧೆ ಲ್ಲ ಬೊಬ್ಬೆ ಹೊಡೆದು ತಹಶೀಲ್ದಾರರಿಗೆ ಮನವಿ ಜಿದರು. ಅಶ್ಲೀಲ-ಅಪದ್ಧವೆಲ್ಲ ಆ ಮನವಿಯಲ್ಲಿ ತ್ತು. ಹಿಂದೂ ಸನಾತನಿಗಳದ್ದೆಲ್ಲ ಒಂದೇ ಎಚ್ಚರಿಕೆ ! ಕ್ರಿಶ್ಚಿಯನ್ ಹುಡುಗ ಹಿಂದೂ ಹುಡುಗಿಯನ್ನು ವೆಯಾಗಿರುವ ಪ್ರಕರಣದಿಂದ ಮುಂದೇನಾದರೂ ಜಯಾದರೆ ನಾವು ಹೊಣೆಗಾರರಲ್ಲ ಎಂಬುದಾಗಿತ್ತು ನವಿಯಲ್ಲೂ ಅದನ್ನೇ ಉಲ್ಲೇಖಿಸಿದ್ದರು.

ಲ್ಲಿಗೆ ಏನೋ ಅಹಿತಕರ-ಅವಾಂತರಕಾರಿ ಮತೀಯ ಕೆರಳಿಸುವ ಕರಾಮತ್ತು ಹಿಂದೂ ಸಂಘಟನೆಯ ಗಳು ಹೆಣೆದಿದ್ದಾರೆಂಬುದು ಖಾತ್ರಿಯಾಗುತ್ತದೆ. ಆ ದು ಅರ್ಪಿಸಿದ ದಿನವೇ ದಾದಾಗಿರಿಯ-ಭಯೋ ಯ ಥ್ರೇಟ್‌ನ ಹಿಂದಿರುವ ಪುಂಡರನ್ನು ಪೊಲೀಸರು, ಡಳಿತ ಬಂಧಿಸಬೇಕಿತ್ತು. ಆದರೆ ಫ್ಯಾಸಿಸ್ಟ್ ಬಿಜೆಪಿ ರ ನಡೆಸುವ ಪಾರ್ಟಿಯ ಸೋದರ ಸಂಘಟನೆಗಳ ಬಿಗಿ ಕ್ರಮಕೈಗೊಳ್ಳುವ ದಮ್ ಪೊಲೀಸರಿಗೆ ಲ್ಲಿಂದ ಬಂದೀತು, ಪಾಪ?

ಹೇಗಾದರೂ ಮಾಡಿ ಹಿಂದೂ-ಕ್ರಿಶ್ಚಿಯನ್ ಸಂಘರ್ಷ ಮಾಡಿಸಬೇಕೆಂಬ ದುರುದ್ದೇಶ ಅನುಷಾ-ವಿಶಾಲ್ ವೆಗೆ ವಿರೋಧವಾಗಿದ್ದವರದಾಗಿತ್ತು. ರಾತ್ರಿ ಹೊತ್ತಲ್ಲಿ ಕುಳಿತು ಚರ್ಚ್ ಒಂದರ ಮೇಲೆ ಕಲ್ಲು ಎಸೆದು, -ಮೇರಿ ವಿಗ್ರಹ ಧ್ವಂಸ ಮಾಡಿದರೆ, ಶಿಲುಬೆ ಅಪಚಾರ ಡಿದರೆ ತಂತಾನೆ ಕೋಮು ಗಲಭೆ ಆಗುತ್ತದೆಂಬ ಚಾರ ಹಿಂದೂವಾದಿಗಳದಾಗಿತ್ತು. ಮಂಗಳವಾರ (ಮೇ ದು) ರಾತ್ರಿವೇಳೆಗೆ ಹೊನ್ನಾವರದ ನಡುಮಧ್ಯವಿರುವ ಲಿ ಕ್ರಾಸ್ ಚರ್ಚ್‌ಗೆ ಕಲ್ಲು ಎಸೆದು ಗಾಜು ದು ಹಾಕಿದರು ಮತಾಂಧ ಪಾಪಿಗಳು.

ಬರೋಬ್ಬರಿ ಏಳು ಕಲ್ಲು ಎಸೆದು ಸೇಂಟ್ ಜೋಸೆಫ್ ತ್ತು ಸೇಂಟ್ ಮೇರಿ ಪ್ರತಿಮೆಗಳಿದ್ದ ಗಾಜಿನ ಗೂಡು ರು ಮಾಡಲಾಗಿತ್ತು. ಇದೊಂದು ವ್ಯವಸ್ಥಿತ ಸಂಚು. ಮುಗಲಭೆ ಎಬ್ಬಿಸುವ ಪಾತಕ. ಬುಧವಾರ ಪಂ.ಚುನಾವಣೆಯಿತ್ತು. ಪೊಲೀಸರೆಲ್ಲ ಚುನಾವಣಾ ಟಿಗೆ ಹೋಗಿದ್ದರು. ಈ ವೇಳೆ ಗಲಭೆ ನಡೆದರೆ ಯಂತ್ರಿಸುವುದು ಕಷ್ಟ. ದೊಂಬಿ-ಕೋಮು ವೈಷಮ್ಯ ರಾಗುತ್ತಿದೆ. ಹಿಂದೂ-ಕ್ರಿಶ್ಚಿಯನ್ ಪ್ರೇಮಿಗಳ ಮದುವೆ ಸಲು ಹೋಗಿ ಹೈರಾಣಾಗಿ ಬಂದ ಮುಯ್ಯಿ ಸುತ್ತದೆಂಬುದು ಧರ್ಮಾತ್ಮರ ಒಳಉದ್ದೇಶವಾಗಿತ್ತು.

ಆದರೆ ಹೊನ್ನಾವರದ ಕ್ರಿಶ್ಚಿಯನ್ ಬಾಂಧವರು ದ್ವೇಗ-ಭಾವಾವೇಶಕ್ಕೆ ಒಳಗಾಗಲಿಲ್ಲ. ಪಾಪಿಗಳ ಕ್ಷಮಿಸು ದೆಯೇ ಎಂದು ಬೇಡಿಕೊಂಡರು. ಅಷ್ಟೇ ಅಲ್ಲ ಈ ಧರ್ಮದ ಪ್ರಾರ್ಥನಾ ಮಂದಿರಕ್ಕೆ ನಡೆದುಕೊಳ್ಳುವ ದೂಗಳೂ 'ಕಲ್ಲು ಎಸೆದ ಪಾಪಿಗಳಿಗೆ ಸದ್ಬುದ್ಧಿ ಕೊಡು ಮಾ...' ಎಂದು ಬೇಡಿಕೊಂಡರು. ಕೋಮು ಪಾತಕಿಗಳಿಗೆ ದಲ್ಲಿ ಹಿಡಿಶಾಪ ಹಾಕಿದರು.

ಅಲ್ಲಿಗೆ ಹಿಂದೂ ಹುಡುಗಿ-ಕ್ರಿಶ್ಚಿಯನ್ ಹುಡುಗನ ಮ ವಿವಾಹ ಮುರಿಯಲು ಮಾಡಬಾರದ್ದೆಲ್ಲ ಮಾಡಿದ ತಾಂಧ ರಕ್ಕಸರೇ ಸರ್ವಧರ್ಮ ಸಮನ್ವಯತೆ ಹಾರ್ದತೆಯ ತಾಣವಾಗಿದ್ದ ಹೋಲಿ ಕ್ರಾಸ್‌ಗೆ ಕಲ್ಲು ೂಡೆದಿದ್ದಾರೆಂಬುದು ಇಡೀ ಜಿಲ್ಲೆಗೆ ಖಾತ್ರಿಯಾಗಿ ೋಗಿದೆ. ಆದರೆ ಯಡ್ಡಿಯ ಸರ್ಕಾರಕ್ಕೆ ಆತನ ಪೊಲೀಸರಿಗೆ ತ್ರ ಪಾಪಿಗಳು ಕಾಣಿಸುತ್ತಿಲ್ಲ. ಹಿಂಸೋನ್ಮಾದಿಗಳ ಂದೂತ್ವ ಪಾತಕಕ್ಕೆ ಸರ್ಕಾರ ಸಿಂಧುತ್ವ ಕೊಡುತ್ತಿರುವುದು ಥ ಭೀಕರ ದುರಂತ ಅಲ್ಲವೇ?

ಹಿಂದೂ ರಕ್ಕಸರ ಅಟ್ಟಹಾಸಕ್ಕೆ ಅಸಹಾಯಕ ಉತ್ತರ ಡ ಕಂಗಾಲಾಗಿ ಕೂತಿದೆ. ಇದೆಂಥ ಕೇಡುಗಾಲ ಬಂತು ದು ಜನ ಚಡಪಡಿಸುತ್ತಿದ್ದಾರೆ.

• ನಹುಶ

ಕಾಂತಾ ಹೋರಾಟ ಕೋಮಾ ಸ್ಥಿತಿಯಲ್ಲಿ ಸರ್ಕಾರ



ಗುಲಬರ್ಗಾ ಪೌರಕಾರ್ಮಿಕ ಸಂಬಳದ ಸಮಸ್ಯೆ ಯಡ್ಡಿ ಸರಕಾರದ ಜಿದ್ದಿನಿಂದ ಮತ್ತಷ್ಟು ಕಗ್ಗಂಟಾಗುತ್ತಿದೆ. ಚಳವಳಿಗಾರರ ಮೇಲೆ ಇಲ್ಲಸಲ್ಲದ ಮೊಕದ್ದಮೆಗಳನ್ನು ಹೂಡಿ ಅವರನ್ನು ಜೈಲಿಗೆ ಅಟ್ಟುತ್ತಿರುವ ಜಿಲ್ಲಾಡಳಿತ ಕಾರ್ಯವೂ ಅಷ್ಟೆ ನಾಚಿಕೆಯಿಲ್ಲದೆ ನಡೆಯುತ್ತಿದೆ. 477 ಪೌರ ಕಾರ್ಮಿಕರಿಗೆ ಈ ಮೊದಲು ಗುಲಬರ್ಗಾ ಮಹಾನಗರ ಪಾಲಿಕೆ ತಾನೇ ಸಂಬಳ ವಿತರಿಸುತ್ತಿತ್ತು. ಆದರೆ ಅದೇನು ಕಾರಣವೋ ಒಮ್ಮಿಂದೊಮ್ಮೆ ಅಂದರೆ 35 ತಿಂಗಳ ಹಿಂದಿನಿಂದ ಸರಕಾರ ಅವರಿಗೆ ಸಂಬಳವೇ ನೀಡಿಲ್ಲ. ಮಾಜಿ ಮಂತ್ರಿ ಎಸ್.ಕೆ.ಕಾಂತಾ ಅವರ ನೇತೃತ್ವದಲ್ಲಿ ಧರಣಿ, ರಸ್ತೆ ರೋಖೋ, ರೈಲ್ ರೋಖೋ ಹಾಗೂ ಸತ್ಯಾಗ್ರಹ ಕೊನೆಗೆ ಆಮರಣ ಉಪವಾಸ ಎಂದು ಕುಳಿತ ಮೇಲೆಯೆ ಸರಕಾರ ಅರೆಕಣ್ಣು ತೆರೆದಿದೆ. ಆದರೂ ಅದರೊಳಗೂ ತನ್ನ ಕಪಿಚೇಷ್ಟೆಯನ್ನು ಸರಕಾರ ನಿಲ್ಲಿಸಿಲ್ಲ.

ಕಾಂತಾ ಅವರ ಆಮರಣ ಉಪವಾಸವನ್ನು ಅವರ ಆರೋಗ್ಯದ ನೆಪವೊಡ್ಡಿ (ಜಿಲ್ಲಾ ಪೋಲಿಸ್ ವರಿಷ್ಠಾಧಿಕಾರಿ ಹಾಗೂ ಡಾ.ಆರ್. ವಿಶಾಲ್ ಎಂಬ ಜಿಲ್ಲಾಧಿಕಾರಿ ಕೂಡಿಕೊಂಡು) ಒತ್ತಾಯಪೂರ್ವಕವಾಗಿ ಸತ್ಯಾಗ್ರಹದ ಸ್ಥಳದಿಂದ ಅವರನ್ನು ಎತ್ತುಕೊಂಡು ಒಯ್ದರು. ಆದರೆ ಅವರನ್ನು ಗುಲಬರ್ಗಾಕ್ಕಿಂತಲೂ ಅತ್ಯುತ್ತಮವಲ್ಲದ ರಾಯಚೂರಿನ ಓಪೆಕ್ ಆಸ್ಪತ್ರೆಯಲ್ಲಿ ದಾಖಲು ಮಾಡುವ ಮೂಲಕ ಹಲವಾರು ಅನುಮಾನಗಳಿಗೆ ಎಡೆ ಮಾಡಿಕೊಟ್ಟರು. ಕಾಂತಾ ಅವರ ದೇಹದಲ್ಲಿ ಗ್ಲುಕೋಸ್ ಪ್ರಮಾಣ 50 ರಷ್ಟು ಆಗಿತ್ತು. ಇದು ನಿಜಕ್ಕೂ ಕಳವಳದ ಸಂಗತಿ. ಆರೋಗ್ಯವಂತ ಮನುಷ್ಯನ ದೇಹದಲ್ಲಿ ಗ್ಲುಕೋಸ್ ಪ್ರಮಾಣ 100 ರಷ್ಟು ಇರಬೇಕು. ಇದು ಹೀಗೆ ಮುಂದುವರೆದುದೆ ಕಾಂತಾ ಕೋಮಾ ಸ್ಥಿತಿಗೆ ಹೋಗುವ ಸಾಧ್ಯತೆಗಳಿದ್ದವು. ಇದನ್ನು ಜಿಲ್ಲಾ ವೈದ್ಯಾಧಿಕಾರಿಗಳು ದೃಢಪಡಿಸಿದರು. ಕಾಂತಾ ಅವರ ಇಂತಹ ಅನಾರೋಗ್ಯದ ಸ್ಥಿತಿಯಲ್ಲಿಯೂ ಜಿಲ್ಲಾಡಳಿತ ಅವರನ್ನು ಅಲ್ಲಿ-ಇಲ್ಲಿ ಸುತ್ತಾಡಿಸಿ ರಾತ್ರಿ 12 ಗಂಟೆಗೆ ಆಸ್ಪತ್ರೆಯ ಮುಖ ತೋರಿಸಿದರೆಂದರೆ ಏನರ್ಥ? ಒಂದು ಕಡೆ ಕಾಂತಾ ಅವರ ಆರೋಗ್ಯದ ಸ್ಥಿತಿ ಗಂಭೀರವಾಗಿತ್ತು ಎಂದು ಹೇಳುವ ಜಿಲ್ಲಾಡಳಿತವೇ ಅವರನ್ನು ಬೇಕಂತಲೆ ಹಗಲೆಲ್ಲ ಅಲ್ಲಲ್ಲಿ ಸುತ್ತಾಡಿಸಿದ್ದು ಏತಕ್ಕೆ?!

ಇದೆಲ್ಲಕ್ಕಿಂತ ಮುಖ್ಯವಾಗಿ ಗುಲಬರ್ಗಾ ಜಿಲ್ಲಾ ಪೋಲೀಸ್ ವರಿಷ್ಠಾಧಿಕಾರಿ ಹಾಗೂ ಜಿಲ್ಲಾಧಿಕಾರಿಗಳಿಗೆ ಕಾಂತಾ ಮಗ್ಗಲು ಮುಳ್ಳಾಗಿದ್ದಾರೆ. ಕಾಂತಾ ಅವರು ಪ್ರತಿಯೊಂದನ್ನು ಸಂವಿಧಾನದ ಚೌಕಟ್ಟಿನಲ್ಲಿ ಮಾಡಬೇಕೆಂದು ಬಯಸುತ್ತಾರೆ. ಇದೆಲ್ಲ ಭ್ರಷ್ಟ ಅಧಿಕಾರಿಗಳಿಗೆ ನುಂಗಲಾರದ ತುತ್ತಾಗಿದೆ. ಜೊತೆಗೆ ಯಡ್ಡಿಯ ಸರಕಾರಕ್ಕೂ ಕಾಂತಾ ನ್ಯಾಯಯುತವಾಗಿ, ಜನಪರ ಹೋರಾಟಗಳ ಮೂಲಕ ಬೆಳೆಯುವುದು ಹೊಟ್ಟೆಕಿಚ್ಚಿಗೆ ಕಾರಣವಾಗಿದೆ.

ಹಾಗಾಗಿ ಬೇಕಿಲ್ಲದ ಗಂಡ ಮೊಸರಿನಲ್ಲಿಯೂ ಕಲ್ಲು ಹುಡುಕಿದಂತೆ ನೆವ ಮಾಡಿಕೊಂಡು ಪೌರ ಕಾರ್ಮಿಕರ ಹೋರಾಟದ ನ್ಯಾಯಯುತ ಬೇಡಿಕೆಯನ್ನು ಹಿತ್ತಲಬಾಗಿಲ ಮೂಲಕ ಪರಿಹರಿಸಬೇಕೆಂದು ಸರಕಾರ ಹೊರಟಿದೆ. ಆದರೆ ಕಾಂತಾ ಮಾತ್ರ ಸರಕಾರದ ನಿಲುವು ಏನೇ ಇದ್ದರೂ ಅದು ಪಾರದರ್ಶಕವಾಗಿ, ಸಂವಿಧಾನಿಕವಾಗಿ ಇರಲಿ ಎನ್ನುತ್ತಿದ್ದಾರೆ. ಅಂದರೆ ಈ ಹಿಂದೆ ಪಾಲಿಕೆಯೇ ತನ್ನ ಕಾರ್ಮಿಕರಿಗೆ ನೇರ ಸಂಬಳ ನೀಡುತ್ತಿತ್ತು. ಈಗಲೂ ಅದು ನೀಡಲಿ. ಅಂದಿಲ್ಲದ ಸ್ವಸಹಾಯ ಸಂಘಗಳು ಈಗ ಏಕೆ ಬಂದವು. ಒಂದು ವೇಳೆ ನೀವು ಯಾವುದೋ ಏಜೆನ್ಸಿ ಮೂಲಕ ಪೌರ ಕಾರ್ಮಿಕರಿಗೆ ಸಂಬಳ ನೀಡುತ್ತಿದ್ದರೆ ಅವರ ಹೆಸರು, ಲೈಸನ್ಸ್ ಹೆಸರು ತಿಳಿಸಿ ಎಂದು ಹೇಳಿದ್ದೇ ಸರಕಾರಕ್ಕೆ ಅಂಡಿನಲ್ಲಿ ಮೆಣಸಿನಕಾಯಿ ಇಟ್ಟಂತಾಗಿದೆ. ಜೊತೆಗೆ ಪೌರ ಕಾರ್ಮಿಕರನ್ನು ಕೆಲಸದಿಂದ ವಜಾಗೊಳಿಸಿದ್ದಾಗಿ ಬರಹದ ಮೂಲಕ ತಿಳಿಸಿ ಎಂದು ಕಾಂತಾ ಅವರು ಹೇಳಿರುವುದು ಸರಕಾರಕ್ಕೆ ಇರುಸುಮುರುಸು ಉಂಟುಮಾಡಿದೆ.

ಸಮಸ್ಯೆ ಬಗೆಹರಿಸುತ್ತೇನೆ ಎಂದು ಹೇಳಿ ಕಾಂತಾ ಅವರನ್ನು ಓಪೆಕ್ ಆಸ್ಪತ್ರೆಯಿಂದ ಕರೆಸಿಕೊಂಡ ಮುಖ್ಯ ಮಂತ್ರಿ ಯಡಿಯೂರಪ್ಪ ಮತ್ತದೆ ರಾಗ ಹಾಡಿ ವಾಪಸು ಕಳಿಸಿದ್ದಾರೆ. ಇದರಿಂದ ವ್ಯಗ್ರರಾದ ಕಾಂತಾ ಹಾಗೂ ಅವರ ಬೆಂಬಲಿಗರು ಸಂಬಳ ಕೊಡಿ ಇಲ್ಲವೆ ವಿಷ ನೀಡಿ ಎಂಬ ವಿನೂತನ ಪ್ರತಿಭಟನೆಯನ್ನು ಹಮ್ಮಿಕೊಂಡು ಪಾಲಿಕೆ ಅಧಿಕಾರಿಗಳಿಗೆ ದಿಗ್ಬಂಧನ ಚಳವಳಿ ಶುರುಮಾಡಿದ್ದಾರೆ. ಆದರೆ ಸರಕಾರ ಮಾತ್ರ ಮೊಂಡು ಹಟಕ್ಕೆ ಬಿದ್ದು ಕಾಂತಾ ಮತ್ತವರ ಬೆಂಬಲಿಗರನ್ನು ಜೈಲಿಗೆ ತಳ್ಳುವ ಮೂಲಕ ತನ್ನ ಹಠಮಾರಿತನವನ್ನು ಮುಂದುವರೆಸಿದೆ. ಇದು ಹೀಗೆ ಮುಂದುವರೆದರೆ ಸದ್ಯದಲ್ಲೇ ಗುಲಬರ್ಗಾ ಹೊತ್ತಿ ಉರಿಯುವುದರಲ್ಲಿ ಯಾವುದೆ ಅನುಮಾನವಿಲ್ಲ.

• ವಿಶ್ವಾರಾಧ್ಯ ಸತ್ಯಂಪೇಟೆ

ಕಾರ್ಟೂನ್ ಕಾರ್ನರ್



ನಿಷ್ಕಳಂಕ ಹಿಂದೂ ಪ್ರೇಮಿ ಮತ್ತವರ ಫ್ಯಾಸಿಸಮ್ಮು!

ಮಾಜಿ ಸಂಶೋಧಕರಾದ ಚಿದಾನಂದ ಮೂರ್ತಿಗಳು ಮೊನ್ನೆ ಪ್ರಜಾವಾಣಿ ಪತ್ರಿಕೆಯ ವಾಚಕರ ವಾಣಿ ಕಾಲಂಗೆ ಪತ್ರವೊಂದನ್ನು ಬರೆದು ತಮ್ಮದು ನಿಷ್ಕಳಂಕ ಹಿಂದೂ ಪ್ರೇಮವೇ ಹೊರತು ಪರಧರ್ಮ ದ್ವೇಷವಲ್ಲ ಎಂದು ನಿವೇದಿಸಿಕೊಂಡಿದ್ದಾರೆ. ಹಾಗೂ ಲೇಖನವೊಂದರಲ್ಲಿ ಚಂಪಾ ಅವರು ತಮ್ಮನ್ನು ವ್ಯಂಗ್ಯದ ಧಾಟಿಯಲ್ಲಿ ಛೇಡಿಸಿರುವುದರ ಬಗ್ಗೆ ನೊಂದುಕೊಂಡಿದ್ದಾರೆ. ಆದರೆ ಅಷ್ಟು ಸಣ್ಣ ಪತ್ರದಲ್ಲೂ ಮಾನ್ಯರ ಪರಮತ ದ್ವೇಷವನ್ನು ಮುಚ್ಚಿಡುವುದರಲ್ಲಿ ವಿಫಲರಾಗಿದ್ದಾರೆ.

ಚಿದಾನಂದಮೂರ್ತಿಗಳ ನಿಷ್ಕಳಂಕ ಹಿಂದೂ ಪ್ರೇಮವು ಸಾರಾಂಶದಲ್ಲಿ ವೈದಿಕ ಬ್ರಾಹ್ಮಣತ್ವದ ಪ್ರೇಮವೇ ವಿನಃ ಬಹುಸಂಖ್ಯಾತ ಶೂದ್ರರ ಮತ್ತು ದಲಿತರ ಪಾರಮಾರ್ಥಿಕ ಪ್ರಪಂಚದ ದರ್ಶನಗಳಲ್ಲ ಎಂದು ಸಾಕಷ್ಟು ಸಾರಿ ಸಾಬೀತಾಗಿದೆ. ಇದು ಬಾಬಾಬುಡನ್‌ಗಿರಿಯ ಬಗ್ಗೆ ಅವರು ತೆಗೆದುಕೊಂಡಿರುವ ನಿಲುವಿನಲ್ಲೇ ಇನ್ನೂ ಸ್ಪಷ್ಟವಾಗಿ ವ್ಯಕ್ತಗೊಂಡಿದೆ. ಅಲ್ಲಿ ಸಾಕಾರಗೊಂಡಿರುವ ಅವೈದಿಕ ದತ್ತ ಮತ್ತು ಅನುಭಾವಿ ಸೂಫಿ ಸಂಪ್ರದಾಯಗಳನ್ನು ಕಿತ್ತೊಗೆದು ವೈದಿಕ ಬ್ರಾಹ್ಮಣೀಯ ಪದ್ಧತಿಗಳನ್ನು ಪ್ರತಿಷ್ಠಾಪಿಸಲೆಂದೇ ಹೋರಾಡುತ್ತಿರುವ ಸಂಘಪರಿವಾರದ ಬ್ರಾಹ್ಮಣವಾದಿಗಳಿಗೆ ಬೌದ್ಧಿಕ ರಕ್ಷಣೆ ಕೊಡುತ್ತಿರುವುದೇ ಈ ಚಿಮೂಗಳು, ರಾಮಾ ಜೋಯಿಸ್‌ಗಳು. ಬ್ರಾಹ್ಮಣೀಯ ಆಚರಣೆಗಳಿಲ್ಲದ ಶೂದ್ರ ಮತ್ತು ದಲಿತ ಶ್ರದ್ಧಾ ಕೇಂದ್ರಗಳಲ್ಲಿ ಮಾಂಸಾಹಾರ ಭಕ್ಷಣೆ ಎಂದೂ ವರ್ಜ್ಯವಲ್ಲ. ಆದರೆ ಸಂಘಪರಿವಾರ ಇಲ್ಲಿ ಹೋರಾಟ ಪ್ರಾರಂಭಿಸಿದ ತಕ್ಷಣ ಇಲ್ಲಿ ನಿಷೇಧಕ್ಕೊಳಗಾದದ್ದು ದಲಿತ ಅಡುಗೆ ಭಟ್ಟ ಮತ್ತು ಮಾಂಸಾಹಾರ ಭಕ್ಷಣೆ. ಹೀಗಾಗಿ ಇವರ ಹಿಂದೂ ಪ್ರೇಮವು ಸಾರಾಂಶದಲ್ಲಿ ಬ್ರಾಹ್ಮಣ್ಯದ ಪ್ರೇಮವೇ ವಿನಃ ಸಕಲ ಹಿಂದೂಗಳ ಬಗೆಗಿನ ಪ್ರೇಮವೇನೂ ಅಲ್ಲ.



ತಾವು ಹಿಂದೂ ಧರ್ಮದ ಒಳಗಿನ ಅಸ್ಪೃಶ್ಯತೆ ಮತ್ತು ಜಾತಿ ಪದ್ಧತಿಗಳ ವಿರುದ್ಧವೂ ಮಾತನಾಡಿದ್ದೇನೆ ಎಂದು ಸಮರ್ಥಿಸಿಕೊಳ್ಳುವ ಚಿದಾನಂದಮೂರ್ತಿಗಳು ಕಂಬಾಲಪಲ್ಲಿ ದಲಿತರ ನರಮೇಧದ ವಿರುದ್ಧ ಇಡೀ ಕರ್ನಾಟಕ ಮಾತನಾಡುತ್ತಿದ್ದಾಗ ಬಾಯಿಗೆ ಬೀಗ ಹಾಕಿಕೊಂಡಿದ್ದರು. "ಉದಾತ್ತ" ಇತ್ಯಾದಿ ಗುಣವಿಶೇಷಗಳಿಂದ ಇವರು ಕೊಂಡಾಡುವ ವಿಶ್ವ ಹಿಂದೂ ಪರಿಷತ್ತಿನ ಪುಂಡರು ಹರ್ಯಾಣದ ಜಜ್ಜರಾದಲ್ಲಿ ಐವರು ದಲಿತರನ್ನು ಕಲ್ಲು ದೊಣ್ಣೆಗಳಿಂದ ಚಚ್ಚಿಚಚ್ಚಿ ಕೊಂದಾಗಲೂ ಅದನ್ನು ಖಂಡಿಸದ ಈ ಸಂಶೋಧಕರು ಸಂಘಪರಿವಾರದ ಎಲ್ಲಾ ಕಾರ್ಯಕ್ರಮಗಳ ಮುಖ್ಯ ಅತಿಥಿಗಳಾಗಿ ಭಾಗವಹಿಸುತ್ತಿದ್ದರು. ಇದೇ ಚಿಮೂಗಳೇ ಈಗ ಆ ಸಂಘಟನೆಗಳ "ಉದಾತ್ತತೆ"ಯ ಬಗ್ಗೆ ವಕಾಲತ್ತು ವಹಿಸಿದ್ದಾರೆ. ಇದರಿಂದಲೇ ಇವರ ಹಿಂದೂ ಪ್ರೇಮ ಎಷ್ಟು ಅಮಾನವೀಯವಾದದ್ದು ಮತ್ತು ಕಳಂಕಿತವಾದದ್ದು ಎಂದು ಅರ್ಥವಾಗುತ್ತದೆ.

"ಇಸ್ ದೇಶ್ ಮೆ ರಹನಾ ಹೈತೋ ಜೈ ಶ್ರೀರಾಂ ಕಹನಾ ಹೋಗಾ" (ಈ ದೇಶದಲ್ಲಿ ಬದುಕಬೇಕೆಂದರೆ ಜೈ ಶ್ರೀರಾಂ ಹೇಳಬೇಕು) ಎನ್ನುವ ಅತ್ಯಂತ ಅಪ್ರಜಾತಾಂತ್ರಿಕ ಮತ್ತು ಪರಧರ್ಮ ದ್ವೇಷವೇ ಸಂಘ ಪರಿವಾರದ ಒಟ್ಟಾರೆ ರಾಜಕೀಯದ ಹೂರಣ. ಇದಕ್ಕಾಗಿಯೇ ಈ ದೇಶದಲ್ಲಿ 90ರ ನಂತರ ಸಾಕಷ್ಟು ಅಮಾಯಕ ಮುಸ್ಲಿಂ ಮತ್ತು ಹಿಂದೂಗಳ ರಕ್ತ ಹರಿದಿದೆ. ಹರಿಸಲಾಗಿದೆ. ಗುಜರಾತ್‌ನಲ್ಲಿ ನರಮೇಧವೇ ನಡೆದಿದೆ. ಪ್ರಜಾತಂತ್ರವಿರಲಿ ಕನಿಷ್ಠ ಮಾನವೀಯತೆಯ ಆಧಾರದಲ್ಲೂ ಅದನ್ನು ಎಂದಿಗೂ ಖಂಡಿಸದ ಈ ಚಿಂತಕರು ಅವರ ಗುಣಗಳು ಅನುಸರಣೀಯ ಮತ್ತು ಅನುಕರಣೀಯ ಎಂದು ಕನ್ನಡಿಗರಿಗೆ ಶಿಫಾರಸ್ಸು ಮಾಡುತ್ತಿದ್ದಾರೆ. ಇದು ಕರ್ನಾಟಕವನ್ನು ಮತ್ತೊಂದು ಗುಜರಾತ್ ಮಾಡುವ ಸನ್ನಾಹವೇ ಹೌದು.

ಕ್ರಿಶ್ಚಿಯನ್ ಎಂದರೆ ಮತಾಂತರಿಗಳು ಮತ್ತು ಮುಸ್ಲಿಮರೆಂದರೆ ಭಯೋತ್ಪಾದಕರು ಎಂದು ಭಾವಿಸು "ನಿಷ್ಕಳಂಕ ಹಿಂದೂ ಪ್ರೇಮಿಗಳ" ಕಣ್ಣಿಗೆ ಅವರ ದಾರುಣ ಬಡತನ ಎಂದೂ ಕಣ್ಣಿಗೆ ಬಿದ್ದಿಲ್ಲ. ಮತ್ತೊಂದು ಕಡೆ ಸನಾತನ ಸಂಸ್ಥೆ ಮತ್ತು ಅಭಿನವ್ ಭಾರತ್‌ನಂತಹ ಹಿಂದೂತ್ವ ಭಯೋತ್ಪಾದಕರನ್ನು ಉದ್ದಕ್ಕೂ ಬೆಂಬಲಿಸಿಕೊಂಡೇ ಬಂದವರು ಪ್ರಗ್ಯಾ ಸಿಂಗ್ ಮತ್ತು ಕರ್ನಲ್ ಪುರೋಹಿತ್‌ರಂಥ ದೇಶದ್ರೋಹಿಗಳನ್ನು ಮಹಾನ್ ದೇಶಭಕ್ತರಂತೆ ಪ್ರಚಾರ ಮಾಡುತ್ತಾ ಬಂದವರು. ಮಾಲೆಗಾಂವ್‌ನಿಂದ ಹಿಡಿದು ಗೋವಾತನಕ ಇವರ ಸ್ನೇಹಿತರ ಉದಾತ್ತ ಬಾಂಬುಗಳು ಬಲಿತೆಗೆದುಕೊಂಡ ಅಮಾಯಕ ಜೀವಗಳಿಗೆ ಈ ಹಿಂದೂ ಪ್ರೇಮಿಯ ಕಣ್ಣಲ್ಲಿ ನೀರು ಬರದಂತೆ ಮಾಡಿರುವ ಹಿಂದೂತ್ವ ಎಷ್ಟು ಮಾನವ ದ್ವೇಷಿ ಇರಬೇಕು?

ಗಂಭೀರ ಚಿಂತಕರ ಭಾಷೆಯ ಶೈಲಿ ಯಾವುದೇ ಇದ್ದರೂ ಮೊದಲು ಅವರು ಗಂಭೀರ ಚಿಂತನೆಯನ್ನು ಮಾಡಬೇಕಾಗುತ್ತದೆ. ದ್ವೇಷದ ರಾಜಕಾರಣಕ್ಕೆ ವಿದ್ವತ್ತಿನ ಮುಖವಾಡ ಒದಗಿಸುವ ಬುದ್ಧಿಜೀವಿ ಅತ್ಯಂತ ಅಪಾಯಕಾರಿ. ವಾಸ್ತವವಾಗಿ ಅದನ್ನು ವಿರೋಧಿಸಲು ಕೇವಲ ವ್ಯಂಗ್ಯದ ಭಾಷೆಯೂ ಸಾಲದು.

● ಶಿವಸುಂದರ್

11

ಬೊಮ್ಮಾಯಿಯ ಜುಟ್ಟು...

ಸಾಹೇಬರ ದೌರ್ಬಲ್ಯ. ಸಾಕ್ಷಾತ್ ವೆಂಕಯ್ಯ ನಾಯ್ಡುವೇ ಆಸಕ್ತಿ ವಹಿಸಿ ಡೀಲು ಕುದುರಿಸಿದರೂ ಅದನ್ನು ಪೂರೈಸುವಷ್ಟು ಅಧಿಕಾರ, ಸ್ವಾತಂತ್ರ್ಯ ಬೊಮ್ಮಾಯಿಗಿಲ್ಲ. ಅಷ್ಟಕ್ಕೂ ಈ ಭಟ್ಟಂಗಿ ಶಶಿಧರ ಯಾರು? ಹೇಗೆ ಬೊಮ್ಮಾಯಿಗೆ ತಗುಲಿಕೊಂಡ ಎಂದು ಕೆದಕಿದರೆ ಅದು ರಾಜಕೀಯವಾಗಿ ನಿರಾಶ್ರಿತವಾಗಿದ್ದು ಶಾಸಕರ ಭವನದಲ್ಲಿ ಬೊಮ್ಮಾಯಿ ಅಂಡಲೆಯುತ್ತಿದ್ದ ಕಾಲಕ್ಕೆ ಕರೆದೊಯ್ಯುತ್ತದೆ. ಮೂಲತಃ ಗೌರಿಬಿದನೂರಿನ ಈ ಶಶಿಧರ ಇಲ್ಲಿಗೆ ಐದು ವರ್ಷದ ಹಿಂದೆ ಶಾಸಕರ ಭವನದಲ್ಲಿ ಅರ್ಧ ಕಾಫಿಗೂ ಇಟ್ಟಾಡಿಕೊಂಡಿದ್ದ. ಈ ರೀತಿ ಶಾಸಕರ ಭವನಕ್ಕೆ ವಕ್ಕರಿಸಿ ಶೋಕಿಲಾಲ ಶಾಸಕರಿಗೆ ಗುಂಡು ತುಂಡು ಮತ್ತೊಂದು ಸರಬರಾಜು ಮಾಡಿಕೊಂಡೇ ಬದುಕುವ ಪರೋಪಜೀವಿಗಳದ್ದೇ ಪ್ರತ್ಯೇಕ ಹಿಂಡಿದೆ. ಈ ಪೈಕಿ ಶಶಿಧರ ಶುರುವಿನಲ್ಲಿ ಹರಿಹರದ ಮಾಜಿ ಶಾಸಕ ಶಿವಶಂಕರ್‌ಗೆ ಛೇಲಾನಂತಿದ್ದ. ಯಾರೋ ಹೆಂಗಸೊಬ್ಬಳನ್ನು ಶಿವಶಂಕರ್‌ಗೆ ತಗುಲಿಸಿ ಆಕೆಯ ಜೊತೆಗಿದ್ದ ಫೋಟೋ ಒಂದನ್ನು ಉಪಾಯವಾಗಿ ತನ್ನ ಮೊಬೈಲಿನಲ್ಲಿ ಚಿತ್ರೀಕರಿಸಿ ಅದನ್ನು ಇಟ್ಟುಕೊಂಡು ಬ್ಲಾಕ್‌ಮೇಲ್ ಮಾಡಲು ಶಶಿಧರ್ ಹವಣಿಸಿದ್ದ. ಯಾವತ್ತು ಶಿವಶಂಕರ್ ಜಗ್ಗಲಿಲ್ಲವೋ ಅದೇ ಫೋಟೋಗಳನ್ನು ಪತ್ರಿಕೆಗಳಿಗೆ ಕೊಟ್ಟು ರಂಪ ಮಾಡಿದ್ದು ಈಗ ಇದೇ ಶಶಿಧರನೇ!

ಹೀಗೆ ಸೆಕ್ಸ್ ಸಿಡಿ ಸೃಷ್ಟಿಸಲು ಹೋಗಿ ಶಿವಶಂಕರ್ ಕೈಯಿಂದ ಒದೆ ತಿಂದು ಹೊರದಬ್ಬಿಸಿಕೊಂಡ ಶಶಿಧರ್ ಅದ್ಯಾವ ಗಳಿಗೆಯಲ್ಲಿ ಬೊಮ್ಮಾಯಿ ತಮ್ಮ ಮಲ್ಲಿಕಾರ್ಜುನನಿಗೆ ತಗುಲಿಕೊಂಡನೋ. ತಮ್ಮನ ಮೂಲಕ ಅಣ್ಣ ಬಸವರಾಜ ಬೊಮ್ಮಾಯಿಗೆ ಗಂಟುಬಿದ್ದ ಶಶಿಧರ್ ಆಗ ಜೆಡಿಯು ಅಧ್ಯಕ್ಷರಾಗಿದ್ದ ಸೋಮಶೇಖರ್ ಮತ್ತು ಬೊಮ್ಮಾಯಿ ನಡುವಿದ್ದ ಕಚ್ಚಾಟದ ಲಾಭ ಪಡೆದ. ಸಂಜೆಯಾದರೆ ಸಾಕು ಬೊಮ್ಮಾಯಿಯವರನ್ನು ಬ್ರಿಗೇಡ್ ರಸ್ತೆಯ ಪಬ್ಬು-ಡಿಸ್ಕೋ ಅಡ್ಡೆಗಳಿಗೆ ಕರೆದೊಯ್ಯುತ್ತಿದ್ದ. ಕೆಲವೊಮ್ಮೆ ಶಾಸಕರ ಭವನಕ್ಕೇ ಸಂಧ್ಯಾಪರಿಕರಗಳನ್ನು ಒದಗಿಸುತ್ತಿದ್ದ. ನಂಬಿದ ಬೊಮ್ಮಾಯಿ ತಮ್ಮೆಲ್ಲಾ ತೀಟೆ ತೆವಲುಗಳಿಗೂ ಈತನನ್ನು ಬಳಸಿಕೊಂಡರು. ಆ ಹೊತ್ತಿಗೆ ಬೊಮ್ಮಾಯಿಯವರ ಶಾಸಕರ ಭವನದ ಕೋಣೆಗೆ ಪದೇಪದೇ ಬರುತ್ತಿದ್ದಾಕೆ ಹುಬ್ಬಳ್ಳಿಯ ಮಾಜಿ ಕೌನ್ಸಿಲರ್ ಗಾಯತ್ರಿ (ಹೆಸರು ಬದಲಿಸಿದೆ). ಅದ್ಯಾವತ್ತು ಶಶಿಧರ್ ಈಕೆಯ ಜೊತೆ ಬೊಮ್ಮಾಯಿ ಸಾಹೇಬರು ಪಾಲಿಟಿಕ್ಸ್ (!) ಮಾಡುತ್ತಿದ್ದನ್ನು ತನ್ನ ಮೊಬೈಲ್ ಕ್ಯಾಮೆರಾ ಮೂಲಕ ಚಿತ್ರೀಕರಿಸಿದನೋ!

ಬೊಮ್ಮಾಯಿ ಬಿಜೆಪಿಗೆ ನೆಗೆದು ಮಂತ್ರಿಯಾಗುವುದಕ್ಕೂ, ಶಶಿಧರನ ಭಾಗ್ಯದ ಬಾಗಿಲು ತೆಗೆಯುವುದಕ್ಕೂ ಒಂದೇ ಆಗಿತ್ತು. ತೋಟಗಾರಿಕೆ ಇಲಾಖೆಯ ಡೆಪ್ಯೂಟಿ ಡೈರೆಕ್ಟರ್ ಡಾ. ಮಹಾದೇವಮ್ಮ ಎಂಬಾಕೆಯನ್ನು ತನ್ನ ನಲವತ್ತನೇ ವರ್ಷಕ್ಕೆ ಮದುವೆಯಾದ ಶಶಿಧರ್ ಬೊಮ್ಮಾಯಿ ಮಂತ್ರಿಯಾದ ಎರಡೇ ವರ್ಷಕ್ಕೆ ಹತ್ತು ಕೋಟಿಯ ಆಸ್ತಿವಂತ. ಸಹಕಾರ ನಗರದ ಪಿರಾಮಿಡ್ ಅಪಾರ್ಟ್‌ಮೆಂಟ್‌ನಲ್ಲಿ 50 ಲಕ್ಷದ ಫ್ಲಾಟು, ಬ್ಯಾಟರಾಯನಪುರದಲ್ಲಿ 75 ಲಕ್ಷದ ಮೂರು ಬೆಡ್‌ರೂಮುಗಳ ಮತ್ತೊಂದು ಫ್ಲಾಟು, ಕೆಂಗೇರಿ ಬಳಿ ಎರಡು ಭರ್ಜರಿ ಸೈಟು, ಜೊತೆಗೆ ಪತ್ನಿ ಹೆಸರಿಗೆ ಹೌಸಿಂಗ್ ಬೋರ್ಡ್ ಕ್ವಾಟ್ರಸ್ಸು!

ಆಸ್ಪೆಂಟ್ ಕಾರಿನಲ್ಲೇ ಓಡಾಡುತ್ತಾನೆ. ಅದಕ್ಕೊಬ್ಬ ಡ್ರೈವರ್ ಬೇರೆ. ನೀರಾವರಿ ಇಲಾಖೆಯ ಅಷ್ಟೂ ಕಾಂಟ್ರಾಕ್ಟರುಗಳನ್ನು ತಾನೇ ನಿರ್ಧರಿಸುತ್ತಾನೆ: 'ಇ' ಟೆಂಡರಿಂಗ್ ಇಲ್ಲವೇ ಇಲ್ಲ, ಒಂಭತ್ತು ಪರ್ಸೆಂಟ್ ಕಮಿಷನ್ ಹೊಡೆದು ಅದರಲ್ಲಿ ಒಂದು ಭಾಗವನ್ನಷ್ಟೇ ಮಂತ್ರಿಗೆ ತಲುಪಿಸಿ ಮಿಕ್ಕಿದ್ದನ್ನು ತಾನಿಟ್ಟುಕೊಳ್ಳುತ್ತಾನೆ. ತನ್ನ ಪತ್ನಿಯನ್ನು ತೋಟಗಾರಿಕೆಯಿಂದ ಮಂತ್ರಿ ಉಮೇಶ್ ಕತ್ತಿಯವರ ಸಚಿವಾಲಯಕ್ಕೆ ಹಾಕಿಸಿದ್ದ. ಅಲ್ಲಿ ಪತ್ನಿಯ ಮೂಲಕ ಇನ್ನೇನೋ ಡೀಲಿಗೆ ಕೈ ಹಾಕಿದ್ದರಿಂದ ರೊಚ್ಚಿಗೆದ್ದ ಉಮೇಶ್ ಕತ್ತಿ ಈತನ ಪತ್ನಿಯನ್ನೇ ಹೊರದಬ್ಬಿ ನಿಟ್ಟುಸಿರಿಟ್ಟರು.

ಹೀಗೆ ನೀರಾವರಿ ಇಲಾಖೆಯ ಟೆಂಡರ್ ದುಡ್ಡು ದೋಚಿಯೇ ಕೊಬ್ಬಿದ ಶಶಿಧರ್ ಅದನ್ನು ಬೊಮ್ಮಾಯಿ ಹೆಸರಲ್ಲಿ ಪಾರ್ಟಿ ಫಂಡು ಎಂದು ಖಜಾಂಚಿ ಲೆಹರ್ ಸಿಂಗ್ ಕೈಗೆ ತಲುಪಿಸುತ್ತಿದ್ದ. ವಿಕಟವೆಂದರೆ ಈ ರೀತಿ ಚೀಲದ ತುಂಬ ದುಡ್ಡು ತುಂಬಿಸಿಕೊಂಡು ಪಕ್ಷದ ಖಜಾಂಚಿ ಲೆಹರ್ ಸಿಂಗ್‌ಗೆ ಕೊಡುತ್ತಿದ್ದ ಪರಿಚಯವನ್ನೇ ಬಳಸಿಕೊಂಡು ತನ್ನನ್ನು ಬಿಜೆಪಿ ಪಕ್ಷದ ರಾಜ್ಯ ಕಾರ್ಯದರ್ಶಿಯನ್ನಾಗಿ ನೇಮಿಸುವಂತೆ ಗಂಟುಬಿದ್ದಿದ್ದ!

ಹಳೇ ಕಳ್ಳ ಲೆಹರ್ ಸಿಂಗ್ ಉಗಿದು ಓಡಿಸಿದ. ಇವತ್ತು ಬೊಮ್ಮಾಯಿಯನ್ನು ಗೆಲ್ಲಿಸಿ ಕಳಿಸಿದ ಶಿಗ್ಗಾಂವಿಯ ಬಿಜೆಪಿ ನಾಯಕರಷ್ಟೇ ಅಲ್ಲ, ನವಲಗುಂದದ ಶಾಸಕ ಶಂಕರ ಪಾಟೀಲ್ ಮುನೇನಕೊಪ್ಪ, ನರಗುಂದ ಎಮ್ಮೆಲ್ಲೇ ಸಿ.ಸಿ. ಪಾಟೀಲ್, ಎಮ್ಮೆಲ್ಸಿ ಶಿವರಾಜ್ ಸಜ್ಜನರ್, ಕಾಡಾ ಅಧ್ಯಕ್ಷ ಸೋಮಣ್ಣ ಬೇವಿನ ಮರದ, ಕುಂದಗೋಳದ ಮಾಜಿ ಶಾಸಕ ಮಹಾಂತೇಶ್ ಅಕ್ಕಿ, ಮತ್ತೊಬ್ಬ ಮಾಜಿ ಶಾಸಕ ಗುಳಗಣ್ಣವರ್ ಥರದ ಪಕ್ಕಾ ಬೊಮ್ಮಾಯಿ ಬೆಂಬಲಿಗರೇ ಈ ಶಶಿಧರನ ವಿರುದ್ಧ ಕಿಡಿಕಾರುತ್ತಿದ್ದಾರೆ. ಬೆನ್ನಿಗೆ ನಾಲ್ಕು ಜನವಿಲ್ಲ, ಬಿಜೆಪಿಯ ಎರಡಾಣೆಯ ಸದಸ್ಯನೂ ಅಲ್ಲ. ಆ ಕಾಲದಿಂದಲೂ ಬೆಂಬಲಿಸಿಕೊಂಡೇ ಬಂದ ತಮ್ಮನ್ನೇ ಬದಿಗೊತ್ತಿ ಇಂಥ ನೆರಿಗೆ ದಲ್ಲಾಳಿಗೆ ತನ್ನ ಇಲಾಖೆಯನ್ನೇ ಅಡವಿಟ್ಟು ಬೊಮ್ಮಾಯಿಯ ಫಜೀತಿಗೆ ಅವರ ಅನುಯಾಯಿಗಳೇ ರೋಸತ್ತಿದ್ದಾರೆ.

ಬಹುಶಃ ಶಶಿಧರನ ಕೈಕಸುಬು ಗೊತ್ತಿದ್ದೇ ಇರಬೇಕು ಬೊಮ್ಮಾಯಿ ಪತ್ನಿ ಚನ್ನಮ್ಮ ಆತನನ್ನು ಮನೆಗೆ ಕರೆತರಕೂಡದು ಎಂದು ಹಠಕ್ಕೆ ಬಿದ್ದಿದ್ದಾರೆ. ತಮ್ಮ ಮಲ್ಲಿಕಾರ್ಜುನ ಮತ್ತು ಭಾವ ಎನ್.ಎಂ. ಪಾಟೀಲ್ ಥರದವರೆಲ್ಲ ಪದೇಪದೇ ಶಶಿಧರನನ್ನು ಹೊರಹಾಕುವಂತೆ ಪೀಡಿಸಿದರೂ ಬೊಮ್ಮಾಯಿಗೆ ಆತನನ್ನು ಓಡಿಸುವಷ್ಟು ಶಕ್ತಿಯಿಲ್ಲ. ಅಷ್ಟೇ ಏಕೆ ಬೆಳಗಾವಿಯ ಅಭಯ್ ಪಾಟೀಲ್, ಸಂಜಯ್ ಪಾಟೀಲ್, ಮಹಾಂತೇಶ್ ಕವತಗಿ ಮಠ್ ಥರದವರೇ ಬೊಮ್ಮಾಯಿಯಿಂದ ಕೆಲಸ ಮಾಡಿಸಿಕೊಳ್ಳಬೇಕೆಂದರೆ ಅದಕ್ಕೆ ಶಶಿಧರನನ್ನು ಕಾಡಿಬೇಡಬೇಕು?

ಏನಿದರ ಮರ್ಮ? ಯಕಶ್ಚಿತ್ ಛೇಲಾ ಒಬ್ಬನನ್ನು ನಿಯಂತ್ರಿಸಲಾಗದಷ್ಟು, ಆತನನ್ನು ಹೊರದಬ್ಬಲಾಗದಷ್ಟು, ಆತನ ಕಪಿಮುಷ್ಟಿಯಿಂದ ತನ್ನ ಇಲಾಖೆಯನ್ನೂ ರಕ್ಷಿಸಲಾಗದಷ್ಟು ನಿಸ್ಸಹಾಯಕತೆಗೆ ಕಾರಣವೇನು? ಅದು ಸಿಡಿಯ ಮಹಿಮೆಯಾ? ಮಂತ್ರಿ ಬೊಮ್ಮಾಯಿಯನ್ನೇ ತನ್ನ ಅಡಿಯಾಳನ್ನಾಗಿ ಮಾಡಿಕೊಳ್ಳಬಲ್ಲ ಯಾವ ಅಸ್ತ್ರ ಛೇಲಾ ಶಶಿಧರನ ಬಳಿಯಿದೆ?

● ರಾ. ಸೋಮನಾಥ

ತ್ನಮ್ಮಳ ಜೊತೆಗೆ ತನ್ನ ಮಗಳನ್ನು ಕಳಿಸಲು ಒಪ್ಪಿಗೆ ತನ್ನ ಸಮ್ಮತಿ ಕೊಟ್ಟ ನಂತರ ತನ್ನ ಮಗಳಿಗೆ ಏನು ಕೆಂದೇ ಸಂಗಪ್ಪನಿಗೆ ತೋಚಲಿಲ್ಲ. ಅವತ್ತು ರತ್ನಮ್ಮ ತ್ನತಿಯೊಂದು ಮಾತೂ ಸುಳ್ಳು ಎಂಬುದು ಆತನಿಗೆ ರಿಂದ ಅವನ ಹೃದಯ ಹಿಂಡುತ್ತಿತ್ತು. ಆದರೆ ಏನನ್ನೂ ಮಾಡುವಂತಿರಲಿಲ್ಲ. ಅವನ ಪರಿಸ್ಥಿತಿ ದರೆ ತನ್ನ ಮಗಳನ್ನು ರತ್ನಮ್ಮಳೊಂದಿಗೆ ಕಳುಹಿಸದೆ ಬೇರೆ ದಾರಿ ಇರಲಿಲ್ಲ. ಹಾಗಾಗಿ ರತ್ನಮ್ಮ ಮುವ ಮಾತುಗಳು ಸುಳ್ಳೆಂದು ಆಕೆಯಿಂದ ಸತ್ಯವನ್ನು ಪ್ರಯತ್ನವಾಗಲಿ ಆತನಿಂದ ಸಾಧ್ಯವಾಗಲಿಲ್ಲ ಪ್ರದಾಗಲಿ ಹಾಗೊಮ್ಮೆ ರತ್ನಮ್ಮಳಿಂದ ಸತ್ಯವನ್ನೇ ದ್ದರೆ ತಾನು ತನ್ನ ಮಗಳನ್ನೇ ಮಾರಾಟ ಳ್ಳುವಷ್ಟು ದಾರಿದ್ರ್ಯಕ್ಕೆ ಬಿದ್ದಿದ್ದೇನೆ ಎಂದು ಎಲ್ಲರಿಗೂ ತನಗೇ ಅವಮಾನವಾಗುತ್ತಿತ್ತು. ಅದಕ್ಕಿಂತ ರತ್ನಮ್ಮಳ ದ ಮಾತುಗಳನ್ನು ನಂಬಿದಂತೆ ನಟಿಸುವುದೇ ವಾಸಿ. ಷ್ಟೇ ತಪ್ಪು ಮಾಡಿದ್ದರೂ ರತ್ನಮ್ಮ ತನಗೆ ಮೋಸ ಳು ಎಂದು ಎಲ್ಲರಿಗೆ ಹೇಳಬಹುದು. ಏಕೆಂದರೆ ಗಳನ್ನೇ ವೇಶ್ಯಾವಾಟಿಕೆಗೆ ಮಾರಿಕೊಂಡ ತಂದೆಗಿಂತ, ಗೊಳಗಾದ ತಂದೆಯನ್ನು ಜನ ಅಷ್ಟು ವುದಿಲ್ಲ.

ಮ್ಮಳ ವಾಗ್ಝರಿ ಯಾರಲ್ಲಾದರೂ ವಿಶ್ವಾಸ ಹುಟ್ಟಿಸು ಆಕೆಯ ಮಾತುಗಳನ್ನು ಕೇಳಿದವರು ಆಕೆಯನ್ನು ವಾಗಿಯೂ ನಂಬುತ್ತಿದ್ದರು. ಇವತ್ತಿನ ಮಕ್ಕಳು, ಲ್ಲೂ ನಗರಗಳಲ್ಲಿರುವ ಮಕ್ಕಳು, ವಿಶೇಷವಾಗಿ ಯಲ್ಲಿನ ಮಕ್ಕಳು ಹೇಗೆ ದಾರಿತಪ್ಪುತ್ತಿದ್ದಾರೆ ಎಂದು ವರವಾಗಿ ಬಣ್ಣಿಸಿದ್ದಳು. ಇವತ್ತಿನ ಕಾಲದಲ್ಲಿ ತಂದೆ ತಾಯಿ ಇಬ್ಬರೂ ಹೊರಗಡೆ ಕೆಲಸ ಮಾಡುತ್ತಿದ್ದು ಪೋಟಿಯ ಜಗತ್ತಿನಲ್ಲಿ ಅವರು ಸ್ಪರ್ಧಿಸುತ್ತಿದ್ದು ತ್ತ ಅವರಿಗೆ ಗಮನ ಕೊಡುವುದಕ್ಕೆ ಆಗುತ್ತಿಲ್ಲ. ನಿರ್ಲಕ್ಷ್ಯಕ್ಕೊಳಗಾದ ಮಕ್ಕಳು ತಪ್ಪು ದಾರಿ ಮುತ್ತಿದ್ದಾರೆ. ಮಕ್ಕಳನ್ನು ನೋಡಿಕೊಳ್ಳಲು ಕೆಲಸಗಾರರು ದೇ ಕಷ್ಟವಾಗಿದೆ. ಅವರಲ್ಲಿ ಕೆಲವರಂತೂ ಮನೆ ಕರ ಗಮನ ಬೇರೆಲ್ಲೋ ಇದ್ದಾಗ ಇಡೀ ಮನೆಯನ್ನೇ ಪರಾರಿಯಾಗುತ್ತಾರೆ. ಇನ್ನು ಬೇರೆ ಕೆಲಸಗಾರರೂ ಂದಿಷ್ಟು ಇಲ್ಲೊಂದಿಷ್ಟು ಕಳ್ಳತನ ಮಾಡುತ್ತಾರೆ. ಅತ ದೊಡ್ಡ ಸಮಸ್ಯೆ ಕೆಲಸಗಾರರ ಮೇಲೆ ಭರವಸೆಯೇ ಂತಾಗಿರುವುದು. ಒಂದಿಷ್ಟು ಸುಸ್ತಾದರೆ ಸಾಕು, ಷ್ಟು ಬೈದರೆ ಸಾಕು ಕೆಲಸ ಬಿಟ್ಟು ಹಳ್ಳಿಗೆ ವಾಪಸ್ ರುತ್ತಾರೆ. ಇದೆಲ್ಲದರಿಂದಾಗಿ ಮುಂಬೈನ ಹಲವಾರು ತ ಸಂಸಾರಗಳು ನಂಬಿಕಸ್ತ ಕೆಲಸದ ಹುಡುಗಿಯರನ್ನು ಮನೆಗಳಿಗೆ ಕರೆದುಕೊಂಡು ಬರಲು ರತ್ನಮ್ಮಳಲ್ಲಿ ಸಿಕೊಂಡಿದ್ದಾರೆ. ಅವರೆಲ್ಲ ಒಳ್ಳೆ ಸಂಬಳ ಕೊಡುತ್ತಾರೆ ವಲ್ಲ ಮುಂಗಡ ಹಣವನ್ನೂ ಕೊಡುತ್ತಾರೆ. ರತ್ನಮ್ಮ ಜನ ಹುಡುಗಿಯರನ್ನು ಕರೆದುಕೊಂಡು ಬಂದರೂ ಗೆಲ್ಲ ಕೆಲಸ ಸಿಕ್ಕೇಸಿಗುತ್ತದೆ.

ತ್ನಮ್ಮ ಆತನ ಹಳ್ಳಿಯವಳಾಗಿರದಿದ್ದರೂ ಪ್ಪನಿಗೆ ಆಕೆ ಚಿಕ್ಕವಳಾಗಿದ್ದಾಗಿನಿಂದಲೂ ಯ. ಆಗಿನ ಕಾಲದಲ್ಲೇ ಇಡೀ ತಾಲ್ಲೂಕಿನ ಅವಳ ಸೌಂದರ್ಯದ ಬಗ್ಗೆ ನಾಡುತ್ತಿದ್ದರು. ಆದರೆ ಸ್ಥಳೀಯ ಯುವಕರು ನ್ನು ಒಲೈಸಿಕೊಳ್ಳುವ ಪ್ರಯತ್ನಗಳನ್ನು ಭಿಸುವ ಮುನ್ನವೇ ಆಕೆ ಹಳ್ಳಿಗೆ ಬಂದಿದ್ದ ನನೊಂದಿಗೋ ಮುಂಬೈಗೆ ಓಡಿಹೋಗಿದ್ದಳು. ವರ್ಷಗಳ ನಂತರ ಆಕೆ ಹಳ್ಳಿಗೆ ವಾಪಸ್ಸು ಾಗ ಆಕೆ ಬದಲಾಗಿದ್ದಾಳೆಂದೂ, ಮುಂಬೈನ ್ಯ ಮತ್ತು ಬರವನ್ನು ೂಡಿಸಿಕೊಂಡಿದ್ದಾಳೆಂದೂ ಮಾತನಾಡಿದ್ದರು. ಷ್ಟು ಹಣ ಗಳಿಸಿದ್ದ ಆಕೆ ಬೈಗೆ ಗಿಬರುವುದನ್ನು ದುವರೆಸಿದ್ದಳು. ಆದರೆ ೊಂದಿಗೆ ಮುಂಬೈಗೆ ದ ಹುಡುಗಿಯರಲ್ಲಿ ರು ಇನ್ನಷ್ಟು ಬಡವರಾಗಿ ಹಳ್ಳಿಗೆ ರುಗಿದ್ದರೆ ಬಹಳಷ್ಟು ಹುಡುಗಿಯರು ರ್ಣವಾಗಿ ಕಣ್ಮರೆಯಾಗಿದ್ದರು.

ತ್ನಮ್ಮಳೊಂದಿಗೆ ಮುಂಬೈಗೆ ಹೋದ ಹುಡುಗಿಯರು ಎಂತಹ ಕೆಲಸಗಳಲ್ಲಿ ತೊಡಗಿದ್ದಾರೆ ಎಂಬುದು ಪ್ಪನಿಗೆ ಗೊತ್ತಿತ್ತು. ಒಮ್ಮೆ ಆತ ಔಷಧ ಪಡೆಯಲು ಆರೋಗ್ಯ ಕೇಂದ್ರಕ್ಕೆ ಹೋಗಿದ್ದಾಗ ಅಲ್ಲಿನ ೊಬ್ಬರು ರತ್ನಮ್ಮಳೊಂದಿಗೆ ಮುಂಬೈಗೆ ಹೋಗಿದ್ದ ್ಯಾಲ್ಕು ಯುವತಿಯರು ಲೈಂಗಿಕ ರೋಗಗಳನ್ನು ಸಿಕೊಂಡು ಬಂದಿದ್ದರೆಂದೂ, ಅವರ ರೋಗ ಎಷ್ಟು ಾಗಿತ್ತೆಂದರೆ ಅವರೆಲ್ಲ ನಗರದ ಆಸ್ಪತ್ರೆಯಲ್ಲೇ ಚಿಕಿತ್ಸೆ ಬೇಕೆಂದು ಅವರಿಗೆ ಹೇಳಿದ್ದಾಗಿಯೂ ಹೇಳಿದ್ದರು.



ಮಾರಾಟವಾದ ಮಗಳು

ಕತೆ

ಥೈ ಮೂಲ: ಸಮರುವಾಮ್ ಸಿಂಗ್
ಕನ್ನಡಕ್ಕೆ: ಗೌರಿ ಲಂಕೇಶ್

ತನ್ನ ಮಗಳೂ ಸದ್ಯದಲ್ಲೇ ಆ ನತದೃಷ್ಟ ಯುವತಿಯರ ಸಾಲಿಗೆ ಸೇರುತ್ತಾಳೆ ಎಂದು ಯೋಚಿಸಿದ ಸಂಗಪ್ಪ ಸುದೀರ್ಘವಾದ ನಿಟ್ಟುಸಿರುಬಿಟ್ಟ. ನನ್ನ ಪರಿಸ್ಥಿತಿ ಅರ್ಥ ಮಾಡಿಕೋ, ನೀನೇನೂ ಯೋಚನೆ ಮಾಡಬೇಡ ಎಂದೆಲ್ಲ ಮಗಳಿಗೆ ಹೇಳಿ ಅವಳ ಆತಂಕವನ್ನು ಕಡಿಮೆ ಮಾಡಬೇಕು ಅಂದುಕೊಂಡ. ಆದರೆ ಆಕೆಗೆ ಏನು ಹೇಳಬೇಕೆಂದೇ ಆತನಿಗೆ ತೋಚಲಿಲ್ಲ.

ಸಂಗಪ್ಪನ ಜೀವನ ಸಂಗಾತಿ ಜಯಮ್ಮ ಕರುಳಿನ ರೋಗದಿಂದ ನಗರದ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಳು. ಅವಳ ಜೀವ ಉಳಿಸಿಕೊಳ್ಳಬೇಕಿದ್ದರೆ ಅವಳ ಶಸ್ತ್ರಚಿಕಿತ್ಸೆಗೆ ಹಣ ಬೇಕೇ ಬೇಕಿತ್ತು. ಅವಳ ಜೀವ ಉಳಿಸಿಕೊಂಡರೂ ಅವಳ ಬದುಕು ನೋವು ಮತ್ತು ಸಂಕಟದಿಂದಲೇ ತುಂಬಿರುತ್ತಿತ್ತು.

ಆತ ಮತ್ತ್ಯಾರಿಂದಲೂ ಸಾಲ ಪಡೆಯುವ ಸ್ಥಿತಿಯಲ್ಲಿರಲಿಲ್ಲ. ಈಗಾಗಲೇ ಸಂಗಪ್ಪನ ತಲೆ ಮೇಲೆ ಹತ್ತು ಸಾವಿರ ರೂಪಾಯಿಗಳ ಸಾಲವಿತ್ತು. ಕಳೆದ ಹತ್ತು ವರ್ಷಗಳಿಂದ ಆತ ಸಾಲಗಾರನೇ ಆಗಿದ್ದ. ಅಷ್ಟು ವರ್ಷಗಳ ಕಾಲ ಆತ ಮಾಡಿದ ಪ್ರಯತ್ನಗಳೆಲ್ಲವೂ ಆತನ ಸಾಲದ ಮೇಲಿನ ಬಡ್ಡಿಯನ್ನು ಹೆಚ್ಚಿಸುತ್ತಾ ಹೋಗಿದ್ದವು. ಒಂದು ವರ್ಷ ಈರುಳ್ಳಿಗೆ ಒಳ್ಳೆ ಬೆಲೆ ಸಿಕ್ಕಿದ್ದೇ ಅವನ ಇಂದಿನ ದುಃಸ್ಥಿತಿಗೆ ಕಾರಣವಾಗಿತ್ತು. ಆ ವರ್ಷ ವರ್ತಕರು ಹಳ್ಳಿಗೇ ಬಂದು ಒಂದು ಕೇಜಿ ಈರುಳ್ಳಿಗೆ 14, 15 ರೂಪಾಯಿಗಳನ್ನು ಕೊಟ್ಟು ಖರೀದಿಸಿದ್ದರು. ಆ ವರ್ಷ ಲಾಭ ಕಂಡ ಸಂಗಪ್ಪ ಇನ್ನು ಮುಂದಾದರೂ ಚೆನ್ನಾಗಿ ಬಾಳಬಹುದು ಎಂದು ಕನಸ್ಸು ಕಂಡಿದ್ದ. ಆಗಲೇ ಆತ ಹತ್ತು ಸಾವಿರ ರೂಪಾಯಿಗಳ ಸಾಲ ಮಾಡಿದ್ದು ಆ ಹಣದೊಂದಿಗೆ ತಾನು ಉಳಿಸಿದ ಹಣವನ್ನು ಸೇರಿಸಿ ಭತ್ತ ಬೆಳೆಯಲು ಮೂರು ಗುಂಟೆ ಹೊಲವನ್ನು ಖರೀದಿಸಿದ. ತಾನು ಪಡೆದಿದ್ದ ಸಾಲಕ್ಕೆ ಬಡ್ಡಿರೂಪದಲ್ಲಿ ಪ್ರತಿವರ್ಷ ಮೂರು ಮೂಟೆ ಭತ್ತವನ್ನೂ ಕೊಡಲು ಸಿದ್ಧನಿದ್ದ. ಹೊಸ ಭೂಮಿಯಲ್ಲಿ ಬೆಳೆದ ಭತ್ತದಿಂದ ಬಡ್ಡಿಯನ್ನೂ, ಪಿತ್ರಾರ್ಜಿತವಾಗಿ ಬಂದಿದ್ದ ಭೂಮಿಯಲ್ಲಿ ಬೆಳೆದ

ಥೈ ಭಾಷೆಯಲ್ಲಿ ಖ್ಯಾತ ಲೇಖಕರಾದ ಸಮರುವಾಮ್ ಸಿಂಗ್ ಅವರು ಆ ದೇಶದ ಗ್ರಾಮೀಣ ಜನರ ಬದುಕನ್ನು ಆಧರಿಸಿಯೇ ಕತೆಗಳನ್ನು ಬರೆಯುವ ಮೂಲಕ ಆ ಸಮಾಜದ ಜನರ ಸಂಕಟವನ್ನು ತೆರೆದಿಡುತ್ತಾರೆ. ಅಂತಹ ಒಂದು ಕತೆ ಇಲ್ಲಿದೆ. ಈ ಕತೆ ನಮ್ಮ ಸಮಾಜದಲ್ಲೂ ನಡೆಯುತ್ತಿರುವುದರಿಂದ ಇದನ್ನು ಕನ್ನಡದ ಸಂದರ್ಭಕ್ಕೆ ರೂಪಾಂತರಿಸಲಾಗಿದೆ.

ಈರುಳ್ಳಿಯಿಂದ ಸಾಲವನ್ನೂ ತೀರಿಸಬಹುದು ಎಂದು ಸಂಗಪ್ಪ ಲೆಕ್ಕ ಹಾಕಿದ್ದ. ಆದರೆ ದುರಾದೃಷ್ಟ ಅವನಿಗೆ ಎದುರಾಯಿತು. ಅದರ ಮುಂದಿನ ವರ್ಷ ಈರುಳ್ಳಿ ಬೆಲೆ ಪಾತಾಳ ಕಚ್ಚಿತು. ಆತನೇ ಈರುಳ್ಳಿಯನ್ನು ವರ್ತಕರ ಮಂಡಿಗೆ ಹೊತ್ತೊಯ್ದರೂ ಆತನಿಗೆ ಕೇಜಿ ಒಂದಕ್ಕೆ ಸಿಕ್ಕಿದ್ದು ಮೂರ್‍ನಾಲ್ಕು ರೂಪಾಯಿಗಳು ಮಾತ್ರ. ಆ ವರ್ಷವೇ ಅವನ ದುರ್ಗತಿ ಪ್ರಾರಂಭವಾಗಿದ್ದು. ಅವನು ಕಷ್ಟಪಟ್ಟು ಬೇರೆ ಬೆಳೆಗಳನ್ನು ಬೆಳೆದರೂ ಆತ ಗಳಿಸಿದ್ದೆಲ್ಲ ಜೀವನ ನಡೆಸುವುದಕ್ಕೆ ಮಾತ್ರ ಸಾಕಾಗುತ್ತಿತ್ತು. ಇನ್ನೊಂದು ವರ್ಷ ಅಕ್ಕಿ ಬೆಲೆಯೂ ಕುಸಿದು ಸಾಲಗಾರನಿಗೆ ಹೊಸದಾಗಿ ಖರೀದಿಸಿದ್ದ ಹೊಲವನ್ನೇ ಬಿಟ್ಟುಕೊಡಬೇಕಾಯಿತು. ಆದರೂ ಪಿತ್ರಾರ್ಜಿತವಾಗಿ ಪಡೆದಿದ್ದ ಭೂಮಿಯ ಮೌಲ್ಯಕ್ಕಿಂತಲೂ ಹೆಚ್ಚು ಪ್ರಮಾಣದ ಸಾಲ ಆತನ ಹೆಗಲಿಗೇರಿ ಕೂತಿತ್ತು. ಸಾಲದ ಮೇಲಿನ ಬಡ್ಡಿ ಹೆಚ್ಚಾಗುತ್ತಲೇ ಹೋಗಿತ್ತು. ಈಗ ಆತನಲ್ಲಿ ಉಳಿದಿದ್ದ ಭೂಮಿಯಲ್ಲಿ ಬೆಳೆದದ್ದೆಲ್ಲ ಬಡ್ಡಿ ಕಟ್ಟುವುದಕ್ಕೆ ಹೋಗುತ್ತಿತ್ತು. ಇದರಿಂದಾಗಿ ಮುಂದೊಂದು ದಿನ ತಾನು ಸಾಲ ಮುಕ್ತನಾಗುತ್ತೇನೆ ಎಂಬ ಆಶೆಯೂ ಕರಗಿಹೋಗಿತ್ತು.

ಹಿಂದೆ ನಡೆದದ್ದನ್ನೆಲ್ಲ ನೆನಪಿಸಿಕೊಂಡ ಸಂಗಪ್ಪನ ಕಣ್ಣುಗಳಲ್ಲಿ ನೀರುಕ್ಕಿತು. ಭವಿಷ್ಯದ ಬಗ್ಗೆ ಯೋಚಿಸಿದಾಗ ಆತನ ದುಃಖ ಇಮ್ಮಡಿ ಆಯಿತು. ಇನ್ನು ಒಂದೆರಡೇ ದಿನಗಳಲ್ಲಿ ಆತನ ಮಗಳು ಮುಂಬೈನಲ್ಲಿ ಜೀವಂತವಾಗಿರುವಾಗಲೇ ನರಕವನ್ನು ಪ್ರವೇಶಿಸಿದ್ದಾಳೆ. ಹಾಗೆಯೇ ಒಂದೆರಡೇ ವಾರಗಳಲ್ಲಿ ಬಡ್ಡಿಯನ್ನು ವಸೂಲಿ ಮಾಡಲು ಸಾಲಗಾರ ಬರಲಿದ್ದಾನೆ. ಈ ವರ್ಷ ಮಳೆ ಕೂಡ ಕೈಕೊಟ್ಟಿದ್ದರಿಂದ ಸಾಲಗಾರನಿಗೆ ನೀಡುವಷ್ಟು ಭತ್ತ ಕೂಡ ಅವನಲ್ಲಿರಲಿಲ್ಲ. ಕಳೆದ ಬಾರಿ ಸಾಲಗಾರ ಹೇಳಿದ್ದ ಮಾತುಗಳನ್ನು ನೆನಪಿಸಿಕೊಂಡಾಗ ಸಂಗಪ್ಪನ ಹೃದಯ ಹಿಂಡಿದಂತಾಗುತ್ತಿತ್ತು. ಸಾಲಗಾರ ಅವತ್ತು ಹೇಳಿದ್ದ: "ಸಂಗಪ್ಪ ನನ್ನಿಂದ ನೀನು ಪಡೆದಿರುವ ಸಾಲ ನಿನ್ನ ಭೂಮಿಯ ಬೆಲೆಗಿಂತ ಹೆಚ್ಚು. ನಾನೇನು ಮಾಡಲಿ, ನೀನೇ ಹೇಳು. ಇದು ಹೀಗೆ ಮುಂದುವರೆದರೆ ವಿಧಿ ಇಲ್ಲದೆ ನಿನ್ನ ಹೊಲ ಮತ್ತು ಮನೆಯನ್ನು ಜಪ್ತಿ ಮಾಡಿಕೊಳ್ಳಬೇಕಾಗುತ್ತದೆ. ಮುಂದಿನ ವರ್ಷ ನನ್ನ ಮಗ ವಿದೇಶಕ್ಕೆ ಹೋಗ್ತಿದಾನೆ. ನನ್ನ ಖರ್ಚುಗಳೂ ಹೆಚ್ಚಾಗುತ್ತಿದೆ. ಆದ್ದರಿಂದ ಹೇಗಾದರೂ ಮಾಡಿ ನನ್ನ ಸಾಲ ತೀರಿಸು. ಅದಾಗಲಿಲ್ಲ ಅಂದರೆ ಬಡ್ಡಿಯನ್ನಾದರೂ ಕೊಡು."

ಈಗ ಅವನ ಮಗಳು ರತ್ನಮ್ಮಳೊಂದಿಗೆ ಹೊರಟು ನಿಂತಿದ್ದಳು. ತನ್ನ ಕಣ್ಣೀರನ್ನು ತಡೆದುಕೊಂಡು "ಯಾವ ಪ್ರಶ್ನೆಯನ್ನೂ ಕೇಳದೆ ರತ್ನಮ್ಮ ಹೇಳಿದಂತೆ ಮಾಡು" ಎಂದು ತನ್ನ ಮಗಳಿಗೆ ಹೇಳಿದ. ತೊಂದರೆ ಆದರೆ ಪತ್ರ ಬರಿ ಅಂದ. ಸಾಧ್ಯವಾದರೆ ತಾನು ಮುಂಬೈಗೆ ಬಂದು ಆಕೆಯನ್ನು ಭೇಟಿ ಆಗುತ್ತೇನೆ ಅಂದ. ಆದರೆ ಆಕೆಗೆ ಆತ ನಿಜವಾಗಲೂ ಹೇಳಬೇಕೆಂದಿದ್ದ ಒಂದೇ ಒಂದು ಪದವೂ ಅವನ ಬಾಯಿಂದ ಹೊರಬರಲೇ ಇಲ್ಲ.

ರತ್ನಮ್ಮಳಿಂದ ಮುಂಗಡವಾಗಿ ಪಡೆದಿದ್ದ 2,500 ರೂಪಾಯಿಗಳನ್ನು ಆತನ ಹೆಂಡತಿಯ ಆಸ್ಪತ್ರೆ ವೆಚ್ಚಕ್ಕೆ ಭರಿಸಿದ್ದಾಯಿತು. ಆಸ್ಪತ್ರೆಯಿಂದ ಜಯಮ್ಮ ಮನೆಗೆ ಹಿಂದಿರುಗಿದಾಗ ತನ್ನ ಮಗಳು ರತ್ನಮ್ಮಳೊಂದಿಗೆ ಹೋಗಿದ್ದಾಳೆ ಎಂದು ಕೇಳಿದಕೂಡಲೇ ಮೂರ್ಛೆ ಹೋದಳು. ಪ್ರಜ್ಞೆ ಬಂದನಂತರ ಆಕೆ ಬಿಕ್ಕಿಬಿಕ್ಕಿ ಅತ್ತಳು. ಸಂಗಪ್ಪನೊಂದಿಗೆ ಮಾತನಾಡುವುದಿರಲಿ ಆತನ ಮುಖವನ್ನು ನೋಡಲೂ ನಿರಾಕರಿಸಿದ ಜಯಮ್ಮ ತನ್ನ ಇತರೆ ಐವರು ಮಕ್ಕಳನ್ನೂ ಮಾತನಾಡಿಸಲಿಲ್ಲ. ಆಕೆಗೆ ಏನು ಹೇಳಬೇಕೆಂದು ಗೊತ್ತಾಗದೆ ಸಂಗಪ್ಪ ಹಗ್ಗವನ್ನು ಮಸೆಯುತ್ತಾ ಕೂತ.

ಅವತ್ತು ರಾತ್ರಿ, ಮಕ್ಕಳೆಲ್ಲ ನಿದ್ರೆಗೆ ಜಾರಿದ ನಂತರ, ಬಿಕ್ಕಳಿಸುತ್ತಲೇ ಜಯಮ್ಮ ಕೇಳಿದಳು: "ಅಲ್ರಿ, ರತ್ನಮ್ಮ ನಮ್ಮ ಮಗಳನ್ನು ಯಾವ ಕೆಲಸಕ್ಕೆ ಕರೆದುಕೊಂಡು ಹೋದಳು ಅಂತ ನಿಮಗೆ ಗೊತ್ತಿಲ್ಲವಾ?"

"ಗೊತ್ತು. ಆದರೆ ನನಗೆ ಬೇರೆ ದಾರಿ ಇರಲಿಲ್ಲ. ನಮಗೆ ಇನ್ಯಾವ ಆಯ್ಕೆ ಉಳಿದಿದೆ ಹೇಳು?. ನೀನು ಆಸ್ಪತ್ರೆಯಲ್ಲಿದ್ದೆ. ನಿನ್ನ ಔಷಧ, ರಕ್ತ ಪರೀಕ್ಷೆ, ಶಸ್ತ್ರಚಿಕಿತ್ಸೆ ಅದೆಲ್ಲಕ್ಕೆ ಹಣ ಕೊಡದಿದ್ದರೆ ವೈದ್ಯರು ನಿನ್ನತ್ತ ನೋಡಲೂ ಸಿದ್ಧರಿರಲಿಲ್ಲ. ನನ್ನ ಮೇಲೆ ನಿನಗೆ ಕೋಪಾನ?" ಎಂದ ಸಂಗಪ್ಪ.

"ಇಲ್ಲ, ಕೋಪ ಇಲ್ಲ. ಆದರೆ ತುಂಬಾ ದುಃಖ ಆಗುತ್ತಿದೆ. ನಾನು ಹುಟ್ಟಿದಾಗಿನಿಂದಲೂ ಕಂಡಿದ್ದು ಬರೀ ಸಂಕಷ್ಟವನ್ನೇ" ಎಂದಳು ಜಯಮ್ಮ.


ಸ್ವಲ್ಪ ಹೊತ್ತಿನ ನಂತರ "ನಿಮಗೆ ರತ್ನಮ್ಮ ಚೆನ್ನಾಗಿ ಗೊತ್ತಾ?" ಎಂದು ಜಯಮ್ಮ ಕೇಳಿದಳು.

'ಮಾರ್ಕೆಟ್‌ನಲ್ಲಿರುವ ಎಲ್ಲರಿಗೂ ಅವಳ ಬಗ್ಗೆ ಚೆನ್ನಾಗಿ ಗೊತ್ತು. ಅವರ ಬಹಳಷ್ಟು ಹೆಣ್ಣುಮಕ್ಕಳನ್ನು ಅವಳು ಮುಂಬೈಗೆ ಕರೆದುಕೊಂಡು ಹೋಗಿದ್ದಾಳೆ. ಪ್ರತಿ ಹುಡುಗಿಗೆ 500 ರೂಪಾಯಿಯಿಂದ 2,500 ರೂಪಾಯಿಗಳ ತನಕ ರತ್ನಮ್ಮಳಿಗೆ ಕಮಿಷನ್ ಸಿಗುತ್ತದಂತೆ. ಚಿಕ್ಕವಳಿದ್ದಾಗಿನಿಂದ ಆಕೆ ಆ ದಂಧೆಯಲ್ಲಿ ಇದ್ದವಳೇ. ಈಗ ಆಕೆಗೆ ವಯಸ್ಸಾಗಿರುವುದರಿಂದ ತನ್ನನ್ನು ಮಾರಾಟ ಮಾಡಿಕೊಳ್ಳಲು ಆಗುತ್ತಿಲ್ಲವಲ್ಲ ಅದಕ್ಕೆ ಬೇರೆಯವರನ್ನು ಮಾರಾಟ ಮಾಡಲು ನಿಂತಿದ್ದಾಳೆ. ಅವಳ ಅಪ್ಪ-ಅಮ್ಮ ಕೂಡ ತುಂಬಾ ಸಾಲಗಳನ್ನು ಮಾಡಿಕೊಂಡಿದ್ದರು. ಈಗ ಒಂದಿಷ್ಟು ಸಾಲ ಉಳಿದಿದ್ದರೂ ಅವರ ಪರಿಸ್ಥಿತಿ ಹಿಂದಿಗಿಂತ ತುಂಬಾ ಸುಧಾರಿಸಿದೆ" ಎಂದ ಸಂಗಪ್ಪ.

"ನನ್ನ ಮಗಳ ಬಗ್ಗೆನೇ ನನಗೆ ಯೋಚನೆ ಕಣ್ರೀ. ಅವಳ ಬಗ್ಗೆ ನನಗೆ ದುಃಖ ಆಗುತ್ತೆ" ಎಂದಳು ಜಯಮ್ಮ.

"ನೋಡು, ಆಗಿದ್ದು ಆಗಿಹೋಯಿತು. ಈಗ ಏನನ್ನೂ ಮಾಡಕ್ಕಾಗಲ್ಲ. ನಾವಿಬ್ಬರೂ ನಮ್ಮ ದುಃಖವನ್ನು ಹಂಚಿಕೊಳ್ಳಬೇಕಷ್ಟೇ. ನಮ್ಮ ಮಗಳು ಮದುವೆ ಆಗಿ ಗಂಡನ ಮನೆಗೆ ಹೋಗಿದ್ದಾಳೆ ಎಂದೇ ಭಾವಿಸೋಣ. ಆದರೆ ಅವಳಿಗೆ ನಿಜವಾದ ಗಂಡನಿಲ್ಲ. ಅವಳು ಸಾಕಷ್ಟು ದುಡಿದು ನಮ್ಮ ನೆರವಿಗೆ ಬರುವಂತಾಗುವುದರೊಳಗೆ ಅವಳು ಅದೆಷ್ಟು ಗಂಡಂದಿರನ್ನು ಅನುಭವಿಸಬೇಕಿದೆಯೋ.

ಕತ್ತಲೊಳಗಣ ಬೆಳಕನ್ನು ಹಂಬಲಿಸುವ ಕವಿತೆಗಳು



ಕತ್ತಲೆಯ ಬೆಳಕು
ಜ.ನಾ.ತೇಜಶ್ರೀ; ಸೃಷ್ಟಿ ಪಬ್ಲಿಕೇಷನ್ಸ್; ಬೆಂಗಳೂರು.
ಪು: 80, ಬೆಲೆ: 50ರೂ.

ಕಾವ್ಯಲೋಕವೆಂದರೆ ಅದು ಅಂತರಂಗದ ಪಿಸುಮಾತು ವಿಸ್ತರಿಸಿ ಲೋಕದೊಂದಿಗೆ ಒಂದು ಸಂಬಂಧದ ಸೇತುವೆಯನ್ನು ಬೆಸೆಯುವುದೂ ಹೌದು ಅಥವಾ ಅದು ಕೆಲವೊಮ್ಮೆ ಲೋಕದ ಮಾತುಗಳನ್ನು ದೊಡ್ಡದನಿಯಲ್ಲಿ ಹೇಳಿ ಅಂತರಂಗದೊಳಗೆ ಪ್ರವೇಶಿಸುವ ಮಾಧ್ಯಮವೂ ಆಗಬಹುದು. ಜ.ನಾ.ತೇಜಶ್ರೀಯವರ ದಾರಿ ಮೊದಲನೆಯದು. ಅವರು ನಿರಂತರವಾದ ಹುಡುಕಾಟವೊಂದನ್ನು ನಡೆಸುತ್ತಿದ್ದಾರೆ. ಆದರೆ ಸ್ವಗತದಿಂದಲೇ ಅವರ ಪದಗತಿ ಆರಂಭವಾಗುವುದು. ಹಾಗಂತ ಅವರು ಸಮುದಾಯದೊಂದಿಗೆ ಗುರುತಿಸಿಕೊಳ್ಳಬಯಸುವುದಿಲ್ಲ ಎಂದು ಭಾವಿಸಬೇಕಿಲ್ಲ. ಅವರಿಗೆ ವಿರುದ್ಧವಿರುವುದರಲ್ಲೂ ಅಡಗಿರುವ ಪರಸ್ಪರತೆಯನ್ನು ಬೆಸೆಯುವ ಸಾಧ್ಯತೆಗಳ ಕಡೆಗೊಂದು ತುಡಿತವಿದೆ. ಹೀಗಾಗಿ. ಅವರ ಕವನ ಸಂಕಲನದ ಹೆಸರು 'ಕತ್ತಲೆಯ ಬೆಳಗು'.

'ಬೆಳಕಿಂಗೆ ಕತ್ತಲೆಯ ಕೂಟ' ಎಂಬುದು ಹರಿಹರನ ನೆಚ್ಚಿನ ಸಾಲು. ಆತ ಈ ಸಾಲನ್ನು ಬಳಸುವುದು ಹೆಣ್ಣು ತನಗೆ ಸೂಕ್ತವಲ್ಲದ ಗಂಡಿನೊಂದಿಗೆ ಮಾಡಿಕೊಳ್ಳಬೇಕಾದ ಬದುಕಿನನುಟನ್ನುಕುರಿತು ಹೇಳಬೇಕಾದಾಗ. ತೇಜಶ್ರೀಯ ಗಮನವಿರುವುದು ಕತ್ತಲೆಯಲ್ಲೂ ಇರುವ ಬೆಳಕಿನ ಕಡೆಗೆ. ಈ ಕತ್ತಲೆ ಸಂಕಲನದುದ್ದಕ್ಕೂ ಬೇರೆ ಬೇರೆ ನೆಲೆಯಲ್ಲಿ ಅನಾವರಣಗೊಳ್ಳುತ್ತದೆ. 'ಬೆಳಕಿಗೆ ಹೆದರುವ ನನ್ನಂಥವರ/ ಮಡಿಲಲ್ಲಿ ಮಾತ್ರ ಕತ್ತಲೆಯೆಂದರೆ ಬದುಕು' (ನಿಸ್ತೇಜ ಬದುಕು) ಎನ್ನುವ ಕವಿ, ಒಮ್ಮೊಮ್ಮೆ ಕತ್ತಲನ್ನೇ ಅಪಾರವಾಗಿ ಪ್ರೀತಿಸತೊಡಗುತ್ತಾರೆ. 'ಈ ಅಖಂಡ ಮೌನವನ್ನು/ ಬ್ರಹ್ಮಾಂಡ ಕತ್ತಲನ್ನು/ಯಾರೂ ಕಲಕದಿರಲಿ' (ಅಖಂಡ ಮೌನ) ಎಂದು ಆಶಿಸುತ್ತಾರೆ. 'ಈ ಕತ್ತಲಿಗೆ ಚಂದಿರನೆ ಬೆಳಕು/ ಈ ಹಗಲಿಗೆ ಸೂರ್ಯನೆ ಕತ್ತಲು' (ನಿನ್ನ ದಾಟುವ ಗೆರೆ) ಎನ್ನುವ ಕವಿ

ಹೌದು, ನಾನು ಕತ್ತಲಾಗಬೇಕಿದೆ,
ಇನ್ನೂ ಜೀವ ಪಡೆಯದ
ಮಲ್ಲಿಗೆಯ ಮೊಗ್ಗನ್ನು ಮುಟ್ಟಲು,
ಬರಿಯಲಿರುವ ಮೊಗ್ಗಿನ ಕಣ್ಣುಗಳ
ಬೆಳಕ ಹಿಡಿಯಲು (ಬೆಳಕ ಹಿಡಿಯಲು)

ಎಂಬಲ್ಲಿಗೆ, ತಮ್ಮ ಜೀವನಪ್ರೀತಿಯ ಹುಡುಕಾಟಕ್ಕೆ ಕತ್ತಲನ್ನು ರೂಪಕವಾಗಿಸಿಕೊಳ್ಳುವುದನ್ನು ಗಮನಿಸಬಹುದು.

ಇಲ್ಲಿ ಕತ್ತಲೆಂದರೆ, ಹುಟ್ಟಿನ ಆವಾಸಸ್ಥಾನ. ಇದು ಈ ಸಂಕಲನದ ವೈಶಿಷ್ಟ್ಯವೂ ಹೌದು. ಗಂಡು-ಹೆಣ್ಣಿನ ಸಂಬಂಧವೆಂದರೆ, ಅದು ಹೊಸ ಹುಟ್ಟಿನ ಸಂಭ್ರಮ. ಹೀಗಾಗಿ, ಈ ಸಂಭ್ರಮಕ್ಕೆ ನಿರಂತರ ತುಡಿಯುವ ಮನಸ್ಸೊಂದು ಈ ಸಂಕಲನದಲ್ಲಿ ಅಭಿಸಾರಿಕೆಯಂತೆ ಕೂತಿದೆ. ಈ ಕುರಿತು ಕವಿಗೆ ನಂಬಿಕೆಯೂ ಇದೆ. 'ಗರ್ಭ'ವೆನ್ನುವುದು ಅತ್ಯಂತ ಪಾಸಿಟಿವ್ ಆದ ಪ್ರತೀಕವಾಗಿ ಈ ಸಂಕಲನದುದ್ದಕ್ಕೂ ಕಂಡುಬರುತ್ತದೆ ಅಥವಾ ಇದನ್ನೇ ಇನ್ನೊಂದು ರೀತಿಯಲ್ಲಿ ಕವಿಯ ಜೀವನ ನೋಟ ಎಂದರೂ ಆದೀತು. ಜೀವ ಜೀವಗಳ ನಡುವಣ ಈ ಸೆಳೆತವೆಂಬುದು ಸೃಷ್ಟಿಲೀಲೆಯ ವಿಸ್ಮಯದೊಂದಿಗೆ, ಹೊಸ ಜಗದ ಕೂಸಿನ ಕಣ್ಣು ಮೂಗು ಬಾಯಿಗಳನ್ನು ರೂಪಿಸುವ ಸಾಧನವೂ ಆಗಬೇಕೆಂಬ ಕವಿ ಮನಸ್ಸಿನ ಆದ್ರತೆ, ಆತಂಕಗಳು ಇಲ್ಲಿವೆ.



ಗರ್ಭದ ಚೀಲದೊಳಗೆ ಗಟ್ಟಿಯಾಗಿವೆ ಕನಸುಗಳೆಲ್ಲ
ಅವಳಿಗೆ ಗೊತ್ತು; ಅವನಿಗೂ ಗೊತ್ತು
ಗರ್ಭದ ಆ ಕತ್ತಲೆಯೊಳಗೂ ಬೆಳಕುಂಟು

ಎಂಬ ಸಾಲುಗಳಲ್ಲಿ 'ಕತ್ತಲೆ'ಯು ಪಡೆದುಕೊಳ್ಳುವ 'ಪಲ್ಲಟ'ದಲ್ಲಿ ಈ ಗ್ರಹಿಕೆಗಳನ್ನು ಕಾಣಬಹುದು.

ಈ ರಾತ್ರಿ ಕಳೆದೇ ಇಲ್ಲ
ಆಗಲೆ ನಾಳೆಯಾಗಿದೆ,
ನಾಳೆಯಲ್ಲಿ ರಾತ್ರಿಯಿದೆ,
ರಾತ್ರಿಗೋ ಯಾವಾಗಲೂ ಒಂದೇ ಖಯಾಲಿ,
ತಂಪೆರೆಯುವುದು-ಬೀಜ ಮೊಳೆಯಿಸುವುದು (ನಾಳೆಯ ರಾತ್ರಿ)

ಇಷ್ಟೆಲ್ಲ ಹೊಸ ಹುಟ್ಟಿನ ಬಗ್ಗೆ ಹಾಡಿದ್ದರೂ, ಈ ಹಾಡಿನ ಸ್ಥಾಯಿ ಮಾತ್ರ ಮಂದ್ರದಲ್ಲೇ ಇದೆ. ಬಹುಶಃ ವರ್ತಮಾನದ ಹಿಂಸಾಜಗತ್ತಿನ ತಲ್ಲಣಗಳು ತಾನು ಕಟ್ಟಿಕೊಳ್ಳಬಯಸುವ ಜಗತ್ತಿಗೆ, ತಾನು ಕನಸು ಕಾಣುತ್ತಿರುವ ಜಗತ್ತಿಗೆ ತೊಡಕಾಗಿ. ಕವಿಗೆ ಕಾಣುವುದೇ ಇದಕ್ಕೆ ಕಾರಣವಿರಬೇಕು.


ಪುಸ್ತಕ ವಿಮರ್ಶೆ

ಹರಿವ ನದಿಯಲ್ಲಿ ನೀರು ನೀರಾಗಿಲ್ಲ
ರಕ್ತದ ಕೋಡಿ ದಿಕ್ಕೆಟ್ಟು ಓಡುತ್ತಿದೆ,
ಮುಖವಿಲ್ಲದವರು ಮುಖವಾಡದವರು
ಹೆಜ್ಜೆಗಳುಳಿಸಿ ಹೋದವರ ಚಹರೆ
ಭೂಮಿಯಡಿಯಲ್ಲಿ ಮುಕ್ಕಾಗಿದೆ,
ಕಾವಲು ಕೂತಿದ್ದ ಸರ್ಪದ ಹೆಡೆಯ ತುಣುಕುಗಳು
ಬ್ರಹ್ಮಾಂಡದಗಲಕ್ಕು ಹರಿದು ಹಂಚಿ
ಎದೆಎದೆಯಲ್ಲೂ ವಿಷ ಬೇರುಬಿಟ್ಟಿದೆ (ವರ್ತಮಾನ)

ಎಂಬ ದುಗುಡದ ನಡುವೆಯೂ 'ಇರಲಿ ನಿನ್ನ ದಾರಿಗುಂಟ ಪೂರ್ಣಚಂದ್ರಿಯ ಬೇರು ಬೆಳಲು' ಎಂಬ ಹಾರೈಕೆ ಭರವಸೆಗಳೆಡೆಗೇ ಕವಿ ಮುಖಮಾಡುತ್ತಾರೆ.

ಕವಿತೆ ತೇಜಶ್ರೀಗೆ ಒಲಿದಿದೆ. ನೆರೂಡಾನ ಕವಿತೆಗಳ ಅನುವಾದದಿಂದಲೂ ಅವರು ಕುತೂಹಲ ಹುಟ್ಟಿಸಿದ್ದಾರೆ. 'ಕತ್ತಲೆಯ ಬೆಳಕಿ'ಗೆ ತನ್ನದೇ ಆದ ಚಹರೆಯಿದೆ.

● ಸಬಿತಾ ಬನ್ನಾಡಿ



ಹೆಪ್ಪುಗಟ್ಟಿದ ನೋವು...

ಹೇಳಲಾಗದ ಬಾಧೆ
ಬಲದೊಳಗೆ ಬಲ
ಮಾಡಿ
ಒಳಸುಳಿಯ
ದಾರಿ ಹಿಡಿದು...
ಕೊರೆಯುತ್ತಲೇ ಇದೆ.
ಹೆಪ್ಪುಗಟ್ಟಿದ ನೋವಿಗೆ
ತಾಗುತ್ತಿದೆ ಬಿಸಿ
ಕುದಿಯುತ್ತಿದೆ
ಒಡಲಾಳ!
ಅಂತರ್ಮುಖಿ
ಎಂದು
ಗುರುತಿಸಬಹುದು ಎಲ್ಲ...

ಜ್ವಾಲಾಮುಖಿ
ಯೆಂದು
ಅರ್ಥೈಸುವವರಿಲ್ಲ!
ಉಳ್ಳವರು
ಹಳಿಸಿದ್ದೆಂದು
ಎಸೆಯಲು
ಬಂದರೆ
ಹಸಿದ ಹೊಟ್ಟೆಯಿಂದ
ಹೊರ ಹೊರಟ
ಕೈಗಳದೆಷ್ಟು
ಚಾಚಿವೆ ಮುಂದಕ್ಕೆ

ಒಂದು ದಿನ ಬರುತ್ತದೆ ನೋಡಿ!
ದೇಶದ
ತುಂಬ,
ಇರುವೆ
ಕಣವೊಂದನ್ನು
ಹೊತ್ತು
ಹೊರಟ ಹಾಗೆ
ಜನ
ತಮ್ಮ
ಪಾಲನ್ನು
ಹೊತ್ತು
ನಡೆಯುತ್ತಾರೆ.

ಇವರ
ಗುಡಾಣದಿಂದ...

ಡಾ|| ಅಮೀರುದ್ದೀನ್ ಖಾಜಿ

▶▶ 2 ದೇಹಕ್ಕೆ ಬಿದ್ದ ಪೆಟ್ಟು

1857ರಲ್ಲಿ ಇಡೀ ಭಾರತದ ಜನ ಬ್ರಿಟಿಷರ ವಿರುದ್ಧ ದಂಗೆ ಎದ್ದು ಪ್ರಥಮ ಸ್ವಾತಂತ್ರ್ಯ ಸಂಗ್ರಾಮ ನಡೆಸಿದರು. ಆಗ ಭಾರತೀಯರನ್ನು ಒಡೆದು ಆಳಲು ಅವರು ಹಿಂದೂ-ಮುಸ್ಲಿಮ್ ಕೋಮುವಾದ ಬಿತ್ತಲು ಪ್ರಾರಂಭಿಸಿದ್ದು ಸಹ ನಾವೆಲ್ಲಾ ತಿಳಿದ ಸಂಗತಿ. ಆದರೆ ಅದರಷ್ಟೇ ಮುಖ್ಯವಾದ ಮತ್ತೊಂದು ಸಂಗತಿ 1857 ಮತ್ತು 1885ರ ನಡುವೆ ಸಂಭವಿಸಿತು. ಬ್ರಿಟಿಷ್ ದಾಖಲೆಗಳ ಪ್ರಕಾರವೇ ಈ ಅವಧಿಯಲ್ಲಿ ಬ್ರಿಟಿಷರ ವಿರುದ್ಧ 1857ಕ್ಕಿಂತಲೂ ಭೀಕರವಾದ 80ಕ್ಕೂ ಹೆಚ್ಚು ಸಶಸ್ತ್ರ ದಂಗೆಗಳು ದೇಶಾದ್ಯಂತ ಸಂಭವಿಸಿದ್ದವು. ಇದರ ಬಗ್ಗೆ ಬ್ರಿಟಿಷ್ ಪಾರ್ಲಿಮೆಂಟಿಗೆ ವರದಿ ನೀಡಿದ ಲಾರ್ಡ್ ಡಫ್ರಿನ್ "ಈ ದಂಗೆಯ ಸ್ವರೂಪ 1857 ಕ್ಕಿಂತಲೂ ಹೆಚ್ಚಿನ ಪರಿಣಾಮವನ್ನು ಹೊಂದಿರುತ್ತದೆ. ಏಕೆಂದರೆ ಈ ದಂಗೆಗಳಲ್ಲಿ ಸುಶಿಕ್ಷಿತ ಮತ್ತು ವಿದ್ಯಾವಂತ ಮಧ್ಯಮ ವರ್ಗ ಸಾಮಾನ್ಯ ಜನರ ಜೊತೆ ಸೇರಿ ದಂಗೆಗಳನ್ನು ಸಂಘಟಿಸುತ್ತಿದೆ. ಈ ಎರಡು ಶಕ್ತಿಗಳು ಒಟ್ಟಾಗುವುದು ಬ್ರಿಟಿಷ್ ಚಕ್ರಾಧಿಪತ್ಯಕ್ಕೆ ಮುಪ್ಪು ತರುತ್ತದೆ. ಆದ್ದರಿಂದ ಆದಷ್ಟು ಬೇಗನೇ ಸುಶಿಕ್ಷಿತ ವರ್ಗವನ್ನು ಸಾಮಾನ್ಯ ಜನರಿಂದ ಬೇರ್ಪಡಿಸುವ ಮಾರ್ಗಗಳನ್ನು ಹುಡುಕಬೇಕು" ಎಂದು ಹೇಳಿದ್ದರು. ಅದರ ಭಾಗವಾಗಿಯೇ ಸುಶಿಕ್ಷಿತ, ವಿದ್ಯಾವಂತ ಮತ್ತು ಶ್ರೀಮಂತ ಭಾರತೀಯರನ್ನು ಒಳಗೊಂಡ "ಇಂಡಿಯನ್ ನ್ಯಾಷನಲ್ ಕಾಂಗ್ರೆಸ್" ಅನ್ನು ಬ್ರಿಟಿಷರೇ ಹುಟ್ಟುಹಾಕಿದ್ದು, ಆ ನಂತರ ಅವರಿಗೆ ಉದ್ಯೋಗದಲ್ಲಿ ಮತ್ತು ಆಡಳಿತದಲ್ಲಿ ಪಾಲು ನೀಡಿ ಅವರನ್ನು ಜನರಿಂದ ಬೇರ್ಪಡಿಸಿದ್ದು. ಆದ್ದರಿಂದಲೇ ಇಂದು ಪಡೆದಿರುವ ಅರೆಬರೆ ಸ್ವಾತಂತ್ರ್ಯವನ್ನು ಪಡೆಯಲೂ 60 ವರ್ಷಗಳ ಕಾಲ ಕಾಯಬೇಕಾದದ್ದು. ದೇಶವೆಂಬ ದೇಹಕ್ಕೆ ಬ್ರಿಟಿಷ್ ಆಡಳಿತ ಪೆಟ್ಟು ನೀಡುತ್ತಿದ್ದರೂ ದೇಶದ ಮೆದುಳಾಗಿದ್ದ ಈ ವರ್ಗ ಬ್ರಿಟಿಷರೊಡನೆ ರಾಜಿಯಾಗಿದ್ದರಿಂದಲೇ ಈ ದೇಶದ ಗುಲಾಮಗಿರಿ ಈಗಲೂ ಮುಂದುವರೆಯುತ್ತಿದೆ.

ಇಂದು ಮತ್ತೆ ನವವಸಾಹತುಶಾಹಿಯ ವಿರುದ್ಧ ಈ ದೇಶ ಬಂಡೆದ್ದಿದೆ. ಹಲವೆಡೆ ಮಧ್ಯಮ ವರ್ಗವೂ ಇದಕ್ಕೆ ಸಹಾನುಭೂತಿಯನ್ನು ತೋರಿಸುತ್ತಿದೆ. ಇದೊಂದು ಅಪಾಯಕಾರಿ ವಿದ್ಯಮಾನ ಎಂದು ಬಲ್ಲ ಈ ದೇಶದ ಬ್ರೌನ್ ಸಾಹೇಬರುಗಳು ಮತ್ತು ಅಂತರಾಷ್ಟ್ರೀಯ ಬಿಳಿ ಸಾಹೇಬರುಗಳು ಮೆದುಳನ್ನು ದೇಹದಿಂದ ಬೇರೆ ಮಾಡಲು ಹಲವು ಕುತಂತ್ರಗಳನ್ನು ಹೆಣೆಯುತ್ತಿದ್ದಾರೆ. ಅದರಲ್ಲಿ ಅತಿಮುಖ್ಯವಾದದ್ದೇ ಪ್ರತಿ ದಮನಿತ ಸಮುದಾಯಗಳಲ್ಲಿ ಒಂದು ಮೇಲ್‌ಸ್ತರವನ್ನು ಹುಟ್ಟುಹಾಕಿ ಅದನ್ನು ತನ್ನ ವಕಾಲತ್ತುದಾರರನ್ನಾಗಿಸಿಕೊಳ್ಳುವುದು. ಮಿಕ್ಕಂತೆ ದೇಶದ ಶೇ.77 ಜನ ದಿನಕ್ಕೆ 20 ರೂ. ಮಾತ್ರ ಗಳಿಸುತ್ತಾ ದಾರುಣ ಬಡತನದಲ್ಲಿದ್ದರೂ ದೇಶಾದ್ಯಂತ 8 ಲಕ್ಷ ಮಧ್ಯಮ ವರ್ಗದ ಬುದ್ಧಿಜೀವಿಗಳಿಗೆ ಪರಿಷ್ಕೃತ ಯುಜಿಸಿ ಪೇ ಸ್ಕೇಲ್ ನೀಡಿ ಲಕ್ಷಾಧೀಶರನ್ನಾಗಿಸಿ ತಮ್ಮ ಬಾಯಿಗೆ ತಾವೇ ಬೀಗ ಜಡಿದುಕೊಳ್ಳುವಂತೆ ಮಾಡಿರುವುದು.

ಈ ವರ್ಗವೇ ಜಾಗತೀಕರಣವನ್ನು ಬಿಟ್ಟರೆ ಬೇರೆ ಪರ್ಯಾಯವಿಲ್ಲವೆಂದು ವಾದಿಸುತ್ತದೆ. ಈ ವರ್ಗವೇ ಪ್ರತಿಭೆಯಿದ್ದವರಿಗೆಲ್ಲರಿಗೂ ಜಾಗತೀಕರಣವೆಂಬುದು ಉತ್ತಮ ಅವಕಾಶವೆಂದು ಸಮರ್ಥಿಸುತ್ತದೆ. ಎಲ್ಲಾ ಸಮುದಾಯಗಳಲ್ಲಿರುವ ಈ ವರ್ಗವೇ ತಾನು ಶ್ರೇಷ್ಠ ಮತ್ತು ಉಳಿದವರು ಕನಿಷ್ಠ, ಬಲವಿದ್ದವನು (ಪ್ರತಿಭೆ ಇದ್ದವನು) ಮಾತ್ರ ಬದುಕಬೇಕೆಂಬ ಸಿದ್ಧಾಂತವನ್ನೂ ಮತ್ತು ಶ್ರಮಜೀವಿಗಳ ಗುಲಾಮಗಿರಿಯನ್ನು ಪ್ರತಿಪಾದಿಸುವ ಬ್ರಾಹ್ಮಣವಾದದ ಮರುಹುಟ್ಟಿಗೂ ಕಾರಣವಾಗುತ್ತಿದೆ.

ಈ ನವಬ್ರಾಹ್ಮಣವಾದವೇ ಮೆದುಳಿಗೂ ದೇಹಕ್ಕೂ ನಂಟನ್ನು ಕತ್ತರಿಸುತ್ತಿರುವ ಆಳುವವರ್ಗದ ಹೊಸ ಆಯುಧ. ಇದು ಎಲ್ಲಾ ಜಾತಿ, ಸಮುದಾಯ ಮತ್ತು ಧರ್ಮಗಳಲ್ಲೂ ಹುಟ್ಟಿಕೊಂಡಿದೆ. ಈ ನವಬ್ರಾಹ್ಮಣವಾದವನ್ನು ಸೋಲಿಸದೆ ಜಾಗತೀಕರಣದ ಯುದ್ಧದಲ್ಲಿ ಶ್ರಮಜೀವಿಗಳು ಗೆಲ್ಲಲಾಗುವುದಿಲ್ಲ. ●

...ಂಚಾತಿ ರಿಜಲ್ಟ್ ನೋಡಿ ಯಾರೂ ಬಾಯಿ ಬುಡ್ತಯಿಲ್ಲ!

...ಮ ಪಂಚಾಯ್ತಿ ಯುದ್ಧ ಮುಗಿದಿತ್ತು. ಸೋತವರು ...ಶ ಪ್ರಕಟವಾದ ಜಾಗದಿಂದ ತಲೆ ತಪ್ಪಿಸಿಕೊಂಡು ...ಂದು ಮನೆ ಸೇರಿಕೊಂಡಿದ್ದರು. ಗೆದ್ದವರು ಸೀಮೆ ...ಂತೆ ಬೀಗುತ್ತಾ, ಪಟಾಕಿ ಸಿಡಿಸಿಕೊಳ್ಳುತ್ತಾ, ...ೋಸ್ಕರ ತಂದಿದ್ದ ಮಿಕ್ಕಿದ್ದ ಎಣ್ಣೆ ಏರಿಸಿಕೊಂಡು, ...ಗೆ ಮಾಡುತ್ತಾ, ಎದುರಾಳಿಗಳನ್ನು ಅಶ್ಲೀಲವಾಗಿ

...ಯು ಲು ಸೀ ಮ

...ಟ್ಟೆಪುರಾಣ

▶ಬಿ. ಚಂದ್ರೇಗೌಡ

...ತ್ತ, ಅದೂ ಸಾಲದೆಂಬಂತೆ ಕಾಲು ಕೆರೆಯುತ್ತ ...ನಾಗರಿಕವಾಗಿ ವರ್ತಿಸುತ್ತಿದ್ದವು. ಇದನ್ನೆಲ್ಲಾ ನೋಡಿ ...ವ ಮೌನಿಯಾಗಿದ್ದ. ಭಾರಿ ಅಂತರದಲ್ಲಿ ಗೆಲ್ಲುವ ...ದಿಂದಿದ್ದ ಜುಮ್ಮಿ, ಐದೇ ಓಟನಿಂದ ಗೆದ್ದು ...ಾದ ನಿಟ್ಟುಸಿರುಬಿಟ್ಟಿದ್ದಳು.

...ಂದು ಯಂಗಾಯ್ತು ಗೊತ್ತೇನ್ಲೆ ಜುಮ್ಮಿ?" ... ಸೀರ.

...ಯಂಗಾಯ್ತೋ?"

...ಚಾಮುಂಡೇಶ್ವರಿಲಿ ಸಿದ್ದರಾಮಯ್ಯ ...ಲ್ಲ ಅಂಗಾಯ್ತು."

...ಅಂಗೆ ಆಯ್ತು ಕಣೊ ಸೀರ ...ಿ. ಹನುಮಯ್ಯ ಈ ಸತಿ ನಿನಿಗೆ ...ಅಂತ ಸಾಸ್ತ್ರ ಹೇಳಿದ್ದ. ಅವುನ ... ಯಲ್ಲಾರು ಕೇಳಿದ್ರೆ, ಯತ್ತಿದ್ರು ...ಲ್ಲಳೆ, ಅವುಳಿಗ್ಯಾಕಾಕನ ಬುಡು ...ದ್ರೆ, ಗತಿಯೇನೊ ಮಾವ?"

..."ಯಲಕ್ಸನ್ ಟೀಮಲ್ಲಿ ಸಾಸ್ತ್ರ ಕೇಳಕ್ಕೆ ...ೇಗಬಾರ್ದು ಕಂಡ್ರೇ."

..."ಅದೇನೊ ನಿಜ."

..."ಚಿಕ್ಕಮಗಳೂರಲ್ಲಿ ಇಂದ್ರಾಗಾಂಧಿ ...ಕ್ಷನ್ನಿಗೆ ನಿಂತಿದ್ದಾಗ ಇದೇ ...ಡಿಮಠದ ಸ್ವಾಮಿ 'ನೀನು ಗೆಲ್ತಿ ...ಗಮ್ಮ' ಅಂತ ಹೇಳಿದ್ದ. ವೀರೇಂದ್ರ ...ೀಲ್ ಬಂದು ಕೇಳಿದಾಗ 'ನೀನು ಭಾರೀ ...ಲ್ಲಿ ಗೆಲ್ತಿ' ಅಂದಿದ್ದ. ಈಗ್ಲು ನೋಡು ...ರಪ್ಪ ಇನ್ನ ಆರೇ ತಿಂಗಳು ಇರದು ಅಂದಿದ್ದ. ... ಶಾಸ್ತ್ರ ಹೇಳವು ಬಾಯಿಗೆ ಬಂದಂಗೆ ...ತವೆ. ಅವುರ ಕಡೆ ತಿರುಗಿ ನೋಡಬಾರ್ದು ..." ಎಂದ ಉಗ್ರಿ.

..."ಆದ್ರು ಇಂತ ಯಲಕ್ಷನ್ನ ಇಲ್ಲಿಗಂಟ ನೋಡಿರಲಿಲ್ಲ ..., ಕೋಳಿ, ರವುಕೆ ಕಣ, ದುಡ್ಡು ಮೂಗುಬೊಟ್ಟು ...ತ್ರೂ ಸೋತರಲ್ಲ, ಅವುರ ಕತಿಯೇನೂ ಅಂತ?"

"ಅವುರದಂಗಿರ್ಲಿ ಕಣೇ, ಈಸಗಂಡೋರ ಕತೆ ಹೇಳು."

"ಜನ ಮರಿಯಾದಿ ಬುಟ್ರು ಕಂಡ್ರ" ಎಂದ ಕಾಳಮಾವ.

"ನಿಜಕಣ ಮಾವ. ಕೊಡಕ್ಕೋದ್ರೆ ಯಾರೂ ಕೈಯ ಹಿಂದಕೆ ತಗಿಲಿಲ್ಲ, ಅಯ್ಯೋ ಏನು ಬ್ಯಾಡಿ ಅಂತ್ಲೆ ಕೈ ಚಾಚೋರು."

"ಇನ್ನ ಮುಂದೆ ಜನ ಸುಮ್ಮಸುಮ್ಮನೆ ಓಟಾಕದಿಲ್ಲ ಬುಡು."

"ಇಲ್ಲ ಕಣ ಮಾವ. ಅದಕೆ ಅಲವೆ ಒಬ್ಬೊಬ್ಬ ಮೂರು ಮೂರು ಲಕ್ಷ ಸುರದವುನೆ. ಸುರುದ್ರು ಸೋತವುರಲ್ಲ, ಆ ಸಾಲ ಯಂಗೆ ತೀರಿಸ್ತರೂ ಅಂತ?"

"ಯಂಗೊ ತೀರುಸ್ತರೆ ಬುಡ್ರ" ಎಂದಳು ಜುಮ್ಮಿ.

"ನೀನ್ನೊಡವ್ವ ಎಷ್ಟು ಸರಾಗವಾಗಿ ಹೇಳ್ತಿ, ನೀನು ಮೂರು ಲಕ್ಷ ಸುರದಿದ್ರೆ ಗೊತ್ತಾಗದು."

"ನೀನೇಟು ಖರ್ಚು ಮಾಡಿದ್ಲೆ ಜುಮ್ಮಿ?" ಎಂದ ಕಾಳಮಾವ.

"ನಿಜ ಕಣೊ. ಆ ಭೂನಳ್ಳಿಲೊಬ್ಬ ಮಾತಾಡಿಸಿದ್ರೆ ಸಾಕು ಒಂದು ಸವುರುಪಾಯಿ ಕೊಡೋನು. ಡ್ರಿಂಕ್ಸು, ಮಟನ್ನು ಒಂದು ತಿಂಗಳಿಂದ ಬಿಡವೆ ಕೊಡದಂಗೆ ತಿನ್ನಿಸಿದ್ದ"

"ಅಂಗರೆ ಗೆದ್ದಿರಬೇಕು?"

"ಸೋತ ಕಣಮಾವ."

"ಜನ ಬುದ್ಧಿವಂತರು ಕಂಡ್ರ. ಈಗ ಗೆದ್ದಿರೋರ ನೋಡಿದ್ರೆ ಖರ್ಚು ಮಾಡದೆಯಿದ್ರೂ ಗೆಲ್ತಿದ್ರು ಅನ್ನಂಗೆ ಕಾಣ್ತದೆ."

"ನಿಜ ಕಣಮಾವ. ಸ್ವಲುಪ ತೋಳು ತಿಮುರಿರೋರ್‍ಯಲ್ಲ ಏಟು ಖರ್ಚು ಮಾಡಿದ್ರೂ ಸೋತವುರೆ. ಯಾರ ತಂಟಗೂ ಹೋಗದಂಗೆ ಯಣ್ಣಾ ಯಪ್ಪ ಅನ್ನಕಂಡಿದ್ದೋರು ಗೆದ್ದವುರೆ. ಇದಕೇನೇಳ್ತೀ?"

"ಎಜ್ಜಾಕ್ಟ್ರಿ ಕರಟ್ ಕಣೊ ಉಗ್ರಿ. ಎಮ್ಮೆಲ್ಲೆ, ಎಂ.ಪಿ. ಯಲಕ್ಷನ್ನಲ್ಲಿ ಕೆಟ್ಟ ಜನ ಗೆದ್ದು ಬರಬವುದು. ಆದ್ರೆ ಪಂಚಾತಿ ಲೆವೆಲ್‌ನಲ್ಲಿ ಅವುರನ್ನಲ್ಲ ಫಿಲ್ಟ್ರು ಮಾಡಿ ಬುಡ್ತರೆ" ಎನ್ನುತ್ತಾ ವಾಟಿಸ್ಸೆ ಬಂದ.

"ಅಂತೂ ಯಲಕ್ಷನ್ ಮುಗದೇಟಿಗೆ ನಿನ್ನ ಬರಗಾಲ ಸುರುವಾಯ್ತು ಅನ್ನು" ಎಂದಳು ಜುಮ್ಮಿ.

"ಆ ಮಾತ ವಾಪಸ್ ತಗಳಕ್ಕ, ನನಿಗೆ ಯಾವತ್ತೂ ಬರಗಾಲ ಕಾಡಿಲ್ಲ."

"ಆದ್ರು ಒಂದು ತಿಂಗಳಿಂದ ಚನ್ನಾಗಿ ಕುಡದೆ. ಇನ್ನು ಮುಂದೇಳು."

"ಇನ್ನ ಮುಂದು ಅಂಗೇ ನ್ಯಡಿತದೆ. ಇನ್ನೊಂದು ವಿಷಯ ಗೊತ್ತೇನಕ್ಕ ನಿನಿಗೆ?"

"ಯಾವುದ್ಲ?"

"ಜಯಲಕ್ಷ್ಮಿ ಲವರ್ ರೇಣುಕಾಚಾರಿ ಇನ್ನು ಮೇಲೆ ಅರ್ಧ ರಾತ್ರಿವರಿಗೂ ಕುಡಿಯೋ ಕಾನೂನು ತಂದನಂತೆ."

"ಇಲ್ಲಿಗಂಟ ನೀವ್ಯಲ್ಲ ಅಂಗೇ ಅಲವೆ ಕುಡುದಿದ್ದು?"



"ಯಲ್ಲ ಸೇರಿ ನನ್ನ ಕೈಯಿಂದ ಐವತ್ತು ಸಾವುರದ ಮ್ಯಾಲಾಯ್ತು ಕಣಮಾವ."

"ಅಯ್ಯೋ, ಅಯ್ಯೋ ವಸಿ ದುಡ್ಡಾಯ್ತೇನ್ಲೆ?"

"ಇವುಳ ಕೈಯಿಂದ ಹೋಗಿದ್ದು ಅಷ್ಟು ಕಣಮಾವ. ನಾನು, ಇವುಳ ಸಮಂದಿಕರು, ಇವುಳ ತಂಗಿ ಗಂಡ, ಯಲ್ಲ ಖರ್ಚು ಮಾಡಿರದ ಲ್ಯಕ್ಕ ಹಾಕಿದ್ರೆ ಲಕ್ಷದ ಮ್ಯಾಲೋಯ್ತದೆ" ಎಂದ ಉಗ್ರಿ.

"ಈ ಸೀಮಿಗ್ಯಲ್ಲ ಕಡಮೆ ಖರ್ಚು ಮಾಡಿರೋಳೆ ಇವುಳು" ಎಂದ ಸೀರ.

"ಹಳ್ಳಿ ಕಡೆ ಆ ಕಾನೂನು ಇರಲಿಲ್ಲ ಕಣಕ್ಕ, ಆದ್ರೆ ಸಿಟಿಲಿ ಹನ್ನೊಂದು ಗಂಟಗೆ ಕ್ಲೋಸಾಯ್ತಿತ್ತು, ಕುಡುದು ಗಾಡಿ ಓಡುಸಂಗಿಲ್ಲ, ಇದನ್ಯಲ್ಲ ನೋಡಿ ಪಾಪ ರೇಣುಕಾಚಾರಿ ಇಡೀ ನೈಟ್ ಕುಡಿಯೋ ಕಾನೂನು ತತ್ತಾ ಅವುನೆ."

"ಅಲ್ಲಾ, ಈ ಬಿಜೆಪಿ ಬಡ್ಡೆತ್ತವು ಭಾರೀ ನೀತಿ ಹೇಳತಿದ್ದೊ, ಅಂಥವೇ ಇಂತ ಕಾನೂನು ತತ್ತವೆ ಅಂದ್ರೆ ಅವುಕೆಲ್ಲೊ ತಲಿಕೆಟ್ಟದೆ" ಎಂದ ಉಗ್ರಿ.

"ತಲೆ ಭಾಳ ಹಿಂದೆನೆ ಕೆಟ್ಟಿತ್ತು ಕಣೊ ಉಗ್ರಿ. ಈಗ ಜಾಸ್ತಿಯಾಯ್ತು ಅಷ್ಟೆಯ. ಆ ಜನಾರ್ದನ ರೆಡ್ಡಿ ಮಾತು ಕೇಳಿದ್ರೆ ಯಾವನಾರ ಅವುನ ತಲೆ ನ್ಯಟ್ಟಗದೆ ಅನ್ನಕ್ಯಾಯ್ತದ?"

"ನಿಜ ಕಣೊ. ಅವುನಿಗೆ ಸಂವಿಧಾನ, ರಾಜ್ಯಪಾಲ, ಕೋರ್ಟು ಯಾವುದೂ ಕೇರೆ ಇಲ್ಲ, ಅಂಗೆ ಮಾತಾಡ್ತನೆ."

"ಉರುದೋಳೊಂದಿನ ತಿರಿತಳೆ ಬುಡ್ರ" ಎಂದ ಕಾಳಮಾವ.

"ಅದು ನಿನ್ನ ವ್ಯಾಪ್ತಿ ಗಾದೆ ಮಾತು ದ್ವಡಪ್ಪ, ಆದ್ರೆ ಆ ಪೊಲಿಸ್ ಫೆಲೋಗಳು ಯಾವುದ್ನೂ ದುಡ್ಡಿನಿಂದ್ಲೆ ಆಳತಿವಿ ಅನ್ನಂಗೆ ಮಾತಾಡ್ತರೆ. ಈ ಎಡೂರಪ್ಪ ಬ್ಯಾರೆ ಹಲ್ಲುಕಿತ್ತಾವಾಗ್ಯವುನೆ. ಈಗ ಯಾರು ಹೇಳೋರು ಕೇಳೋರು ಇಲ್ಲದ ಸಿಚುಯೇಷನ್ನು ದ್ವಡಪ್ಪ."

"ದ್ಯಾವೇಗೌಡ ಯಾಕೋ ಸುಮ್ಮನಾದನಲ್ಲಾ" ಎಂದ ಸೀರ.

"ಸುಮ್ಮನಾಗದೆ ಇನ್ನೇನು ಮಾಡ್ತನೆ ಚಿಗಪ್ಪ, ಅವುನಿಗೂ ಏಜಾಯ್ತು, ಇಂತ ಏಜಲ್ಲು ಅವುನು ಚಿನ್ನಮ್ಮನ ಕೈಲಿ ಬಾಯಿಗೆ ಮೈಸೂರು ಪಾಕ ತುರುಕಿಸಿಕೊಂಡು ಎತ್ತಿನಂಗೆ ಬಾಯಾಡುಸ್ತನೆ."

"ಆಹಹ, ಏನು ಸುಳ್ಳೇಳತಿಲ."

"ಸುಳ್ಳಲ್ಲ ಕಣಕ್ಕ, ಅವುನಿಗಾಗ್ಲೆ ಯಪ್ಪತ್ತೆಂಟು ವರ್ಸಾಯ್ತಂತೆ. ಅದ್ಕೆ ಚನ್ನವ್ವನ ಕೈಲಿ ಸ್ವೀಟ್ ತಿಂದು, ವಳ್ಳೆ ಕ್ಯಲಸ ಮಾಡೋರಿಗೆ ನನ್ನ ಪಾರ್ಟಿ ಸಪ್ಪೋರ್ಟು ಅಂದವುನೆ. ಇದ್ಯಾಂಗದಪ್ಪ ಅಂದ್ರೆ ನನ್ನತ್ರ ಒಂದು ಮೆಟ್ಟದೆ, ಚನ್ನಾಗಿ ನ್ಯಡಿಯೋರಿಗೆ ಕೊಡ್ತಿನಿ ಅಂದಂಗಾಯ್ತು."

"ಅದ್ಯಾಕ್ಲ ಅಂಗಂತೀ?"


"ಇನ್ನೇನಕ್ಕ ಮತ್ತೆ, ನೈಸ್ ರಸ್ತೆಲಿ ಕುತಗಂಡು ಚಳವಳಿ ಮಾಡಿದ. ಡೆಲ್ಲಿಗೆ ರೈತರ ತಗಂಡೋಗಿದ್ದ, ಒಬ್ಬ ಮಾಜಿ ಹೋರಾಟಕ್ಕೆ ಈ ಬೆಂಗಳೂರು ಬಿಬಿಎಂಪಿ ಚುನಾವಣೆಲಿ ಕೇವಲ ಹದಿನೈದು ಸೀಟು ಕೊಡದೆ? ಅದೂ ಜನಪ್ರಿಯ ಗ್ರಾಮವಾಸ್ತವ್ಯದ ಮುಖ್ಯಮಂತ್ರಿ ಲೀಡರ್‌ಸಿಪ್ಪಿಗೆ. ಅದೇ ತರ ಪಂಚಾತಿ ಚುನಾವಣೆಲ್ಲೂ ಜನ ಬಿಜೆಪಿಗೆ ಸರಿಯಾಗಿ ಬುದ್ಧಿ ಕಲಿಸ್ಯವುರೆ. ಅದ್ಕೆ ದೇವೇಗೌಡನಿಂದ ಹಿಡದು ಎಡೂರಪ್ಪನಗಂಟ ಯಾರೂ ಜಾಸ್ತಿ ಮಾತಾಡ್ತಯಿಲ್ಲ."

"!?"

...ಪರದೇಶಗಳ ಬಗ್ಗೆ ಆತಂಕ


...ಇಂಗ್ಲೆಂಡ್, ಅಮೆರಿಕಾ ಕಡೆಯೆಲ್ಲ ಹೋಗಬೇಕೆಂದು ಕಾತರವಿದ್ದಾಗ ಹೋಗಲು ಆಗಲೇ ಇಲ್ಲ; ... ಯಾರು ಕರೆದರೂ, ಒತ್ತಾಯಿಸಿದರೂ ಹೋಗಲು ಮನಸ್ಸಾಗುವುದಿಲ್ಲ, ಪ್ರಯಾಣಕ್ಕೆ ಸಾಕಷ್ಟು ...ದ್ದಿದ್ದರೂ ಆ ಕಡೆ ಯೋಚಿಸುವುದಿಲ್ಲ ಕೂಡ. ಯಾಕೆಂದರೆ ಈ ದೇಶಗಳೆಲ್ಲ ಚೆನ್ನಾಗಿವೆ. ಕಳೆದ ...ನೈದು ಶತಮಾನದಿಂದ ತಮ್ಮ ನಾಗರಿಕತೆಯನ್ನು ಸ್ಫೂರ್ತಿಯಿಂದ ಕಟ್ಟಿ ಇಡೀ ನಾಡನ್ನು ತೋಟದಂತೆ ...ಿಸಿವೆ. ಸ್ವೀಡನ್‌ನಿಂದ ಪೋರ್ಚುಗಲ್‌ವರೆಗೆ ಜನ, ರಸ್ತೆ ಪಟ್ಟಣ, ಹಳ್ಳಿಗಳೆಲ್ಲ ಒಂದೇ ಥರ ಕಾಣಿಸುತ್ತವೆ ...ದು ಐದು ವರ್ಷದ ಹಿಂದೆ ಆಸ್ಲೋದಿಂದ ಸ್ಪೇನಿನ ಮ್ಯಾಡ್ರಿಡ್‌ವರೆಗೆ ಒಬ್ಬಳೇ ಪ್ರಯಾಣ ಮಾಡಿಬಂದಿದ್ದ ... ಮಗಳು ಹೇಳಿದಳು. "ಹಾಗಾದರೆ ಸ್ಪೇನ್?" ಅಂದೆ. "ಅದು ಯುರೋಪಿನ ಬೇರೆ ದೇಶಗಳಿಗೆ ...ೋಲಿಸಿದರೆ ವೈವಿಧ್ಯಮಯವಾಗಿದೆ, ಜನ ಕೂಡ ಅಷ್ಟೆ, ಬೇರೆ ತರಹ ಇದ್ದಾರೆ" ಎಂದು ಹೇಳಿದಳು. ...ಕ್ಕೆ ನಾನು, "ಅಲ್ಲಿ ಮೊರಾಕೋ ಪ್ರಭಾವ ಜಾಸ್ತಿ, ಅಲ್ಲದೆ ಸ್ಪೇನ್ ಬೇರೆ ದೇಶಗಳಿಗಿಂತ ಆರ್ಥಿಕವಾಗಿ ...ದುಳಿದಿದೆ. ಫಿಲಿಪೆ ಗೋಂಜಾಲೆಜ್ ಮತ್ತು ಸಮಾಜವಾದಿಗಳು ಬಂದಮೇಲೆ ಚೇತರಿಸಿಕೊಳ್ಳುತ್ತಿರಬೇಕು" ...ದೆ.

... ಅಲ್ಲದೆ ಯೂರೋಪಿನ ಅತ್ಯಂತ ಸುಂದರ ದೇಶಗಳಲ್ಲಿ ರೋಗಗಳು ...ಷ್ಟು ದ್ವೇಷ ಜಾಸ್ತಿ, ಫ್ರಾನ್ಸ್‌ನಲ್ಲಿ ಸ್ವಪ್ರತಿಷ್ಠೆ, ಸ್ವಿಟ್ಸರ್‌ಲೆಂಡ್‌ನಲ್ಲಿ ಏಡ್ಸ್.... ...ಗೆಲ್ಲ ನೆಪ ಮಾಡಿಕೊಂಡು ಇಲ್ಲೇ ನನ್ನ ಕೆಲಸ ಮಾಡಿಕೊಂಡಿರುತ್ತೇನೆ. ...ಪ್ಪನೂ ಅಲ್ಲದ, ಬಿಳಿಯನೂ ಅಲ್ಲದ ನನ್ನಂಥವನಿಗೆ ಆಫ್ರಿಕಾ, ...ೂರೋಪ್‌ಗಳು ಕಷ್ಟ. ಇಂಗ್ಲೆಂಡ್, ಫ್ರಾನ್ಸ್, ಜರ್ಮನಿಗಳಲ್ಲಿ ನಾನು ...ವಾಸಿಗನಾಗಿ ಹೋದರೂ ಅಲ್ಲಿಯವರಿಗೆ ಅನುಮಾನ, ಸಿಟ್ಟು; ಏಷ್ಯಾದ ಯಾವನೋ ಒಬ್ಬ ಹೇಗಾದರೂ ಮಾಡಿ ಇಲ್ಲಿ ತಳವೂರಲು ಬಂದಿದ್ದಾನೆ ಎಂದು ರೋಷ. ಆಫ್ರಿಕಾದಲ್ಲಿ ಕಪ್ಪು ಸೋದರನಲ್ಲದ ಕಂದುಬಣ್ಣದ ಶತ್ರು. ಮೊನ್ನೆ ದಕ್ಷಿಣ ಆಫ್ರಿಕಾದಲ್ಲಿ ಆದದ್ದು ಇವತ್ತಿಗೂ ನನ್ನನ್ನು ಕೊರೆಯುತ್ತಿದೆ; ಮನುಷ್ಯನ ಸಂದೇಹಜನ್ಯ ಕೊಳಕುಬುದ್ಧಿಯ ಬಗ್ಗೆ ಭಯವಾಗುತ್ತದೆ. ಅಮೆರಿಕಾದ ಒಬ್ಬಳು ಬಿಳಿಯ ಹುಡುಗಿ ಆದರ್ಶವಾದಿ; ಆಕೆಗೆ ಕಪ್ಪು ಜನರನ್ನು ಕಂಡರೆ ಇಷ್ಟ ಮತ್ತು ಯಾವಾಗಲೂ ಆಕೆ ಅವರ ಪರ. ಅವರ ಕಪ್ಪು ಪರಂಪರೆಯ ಬಗ್ಗೆ ಅಮೆರಿಕಾದಲ್ಲಿ ಸಂಶೋಧನೆ ನಡೆಸುತ್ತಿದ್ದ. ಈಕೆ ತನ್ನ ಆಫ್ರಿಕನ್ ಕಪ್ಪು, ಬಿಳೀ ಗೆಳೆಯರಿಗೆ ಕಾಗದ ಬರೆದು 'ನಾನು ದಕ್ಷಿಣ ಆಫ್ರಿಕಾದ ಕಪ್ಪು ಜನರನ್ನು ನೋಡಬೇಕು, ಅವರೊಂದಿಗೆ ಒಂದು ದಿನವಾದರೂ ಇದ್ದು ಖುಷಿಪಡಬೇಕು' ಎಂದು ಹೇಳಿ ದಕ್ಷಿಣ ಆಫ್ರಿಕಾಕ್ಕೆ ಬಂದಳು. ಅಲ್ಲಿ ಗೆಳೆಯರೊಂದಿಗೆ ಕಪ್ಪು ಬಡಾವಣೆಯೊಂದಕ್ಕೆ ಹೋದಾಗ ಹಿಂದೆಮುಂದೆ ನೋಡದೆ ಕಪ್ಪು ಜನ ಆವಳ ಮೇಲೆ ಬಿದ್ದರು. ಇವರು ವಿವರಿಸುವುದಕ್ಕೆ ವೇಳೆಯನ್ನೇ ಕೊಡದೆ ಹೊಡೆದು ತಳ್ಳಿ, ಇರಿದು ಕೊಂದರು. "ಕೊಲ್ಲಬೇಡಿ!" ಎಂದು ಆಕೆಯ ಗೆಳೆಯ, ಗೆಳತಿಯರು ಕೂಗಿದರೆ, "ಬಿಳಿ ನಾಯಿ!" ಎಂದು ಕೂಗಿದರು. ಆಮೇಲೆ ಸತ್ಯ ಗೊತ್ತಾಗುತ್ತಿದ್ದಂತೆ ಇಡೀ ಕಪ್ಪು ಸಮುದಾಯ 'ಶಾಕ್' ಹೊಡೆದಂತೆ ನಿಂತಿತು. ಕಪ್ಪುಜನ, ಬಿಳಿಯರು ಆಕೆಯ ಆತ್ಮಶಾಂತಿಗಾಗಿ ಚರ್ಚ್‌ಗಳಲ್ಲಿ ಪ್ರಾರ್ಥನೆ ಸಲ್ಲಿಸಿದರು. ಒಬ್ಬಳು ನೀಗ್ರೋ ತಾಯಿ ಪ್ರಾರ್ಥಿಸಿದಳು, "ದೇವರೆ, ನಮ್ಮೆಲ್ಲ ತರುಣತರುಣಿಯರಿಗೆ-ನನ್ನ ಬಿಳಿ ಮಕ್ಕಳನ್ನೊಳಗೊಂಡು ಎಲ್ಲರಿಗೆ-ತಾಳ್ಮೆ, ವಿವೇಕ ಕೊಡು!"



ನಮ್ಮ ದೇಶದಲ್ಲೇ ನಾವಿದ್ದರೆ ಇಲ್ಲಿ ಬೇರೆಯವರಿಂದ ಗೌರವ ದೊರೆಯದಿದ್ದರೂ ಆತ್ಮಗೌರವವಾದರೂ ಇರುತ್ತದೆ. ಒಳ್ಳೆಯವರಾಗಿದ್ದರೆ ಕ್ರಿಯಾಶಾಲಿ ಕೂಡ ಆಗಿರಬಹುದು.


–ಅಕ್ಟೋಬರ್ 6, 1993



ನಿಜ ಹೇಳಿದರೆ ಅಸ್ತಿತ್ವವೇ ಇಲ್ಲ!

ರಾಷ್ಟ್ರೀಯ ಸ್ವಯಂಸೇವಕರ ಪಥಸಂಚಲನ. ಸಮವಸ್ತ್ರ ಧರಿಸಿದ್ದ ಯುವಕರ ಶಿಸ್ತುಬದ್ಧ ನಡಿಗೆ ನೋಡಿ ಹೃದಯ ತುಂಬಬಂತು! ನಂತರ ಬಹಿರಂಗ ಸಭೆ. ಡಾ. ಪ್ರಭಾಕರ ಭಟ್ ಅವರಿಂದ ಅಮೋಘ ಭಾಷಣ. ಇಂತಹ ಭಾಷಣ ಮಂಡ್ಯದ ನಗರಕ್ಕೆ ಹೊಸದೇನೂ ಅಲ್ಲ. ನಾಲ್ಕು ಗೋಡೆಗೆ ಸೀಮಿತವಾಗಿದ್ದ ಅದು ಈಗ ಬಹಿರಂಗಸಭೆಯನ್ನು ತಲುಪಿತ್ತು. ಪುಂಖಾನುಪುಂಖವಾಗಿ ಹರಿಯುತ್ತಿತ್ತು ವಾಕ್ ಝರಿ. ಅದನ್ನು ಕೇಳಿದವರ ಕಿವಿ ಸಾರ್ಥಕ್ಯ

ಅನಿಕ



ಎಚ್.ಎಲ್. ಕೇಶವಮೂರ್ತಿ

ಕಂಡಿತು. ಜೀವನ ಪಾವನ ಆಯಿತು!

"ಹಿಂದೂ ಧರ್ಮದಲ್ಲಿ ಜಾತಿ, ಮತ ಇಲ್ಲ" ಸಾರಿದರು ಭಟ್ಟರು!

(ಚೆನ್ನದಂತಹ ಮಾತು. ಜಾತಿಗಳಿಲ್ಲದೆ ಹಿಂದೂ ಧರ್ಮವೇ ಇಲ್ಲ ಎಂದೇ ತಿಳಿದಿದ್ದೆವಲ್ಲ ನಾವೆಲ್ಲ!)

"ಶಿಬಿರದಲ್ಲಿ ನೀವೆಲ್ಲ ಒಟ್ಟಿಗೆ ಜೀವಿಸಿದ್ದಿರಿ. ಸಹ ಪಂಕ್ತಿ ಭೋಜನ ಮಾಡಿದ್ದಿರಿ."

(ಆಹಾ ಎಂತಹ ಸತ್ಯ!)

"ಇದು ನಮ್ಮ ಪರಂಪರೆ. ಹಿಂದೂಗಳ ಪರಂಪರೆ."

(ಪರಂಪರೆ ಎಂದರೆ ಹಿಂದಿನಿಂದಲೂ ನಡೆದುಬಂದದ್ದು ಎಂದು ತಾನೆ. ಅದಕ್ಕೆ ಉದಾಹರಣೆ ನೀಡಿದರು)

"ಗಾಂಧಿ ಬದುಕಿದ್ದಾಗ ಶ್ರೀರಂಗಪಟ್ಟಣಕ್ಕೆ ಬಂದಿದ್ದರು. (ಸತ್ತ ಮೇಲೆ ಬರಲು ಸಾಧ್ಯವೆ? ಏನಿದ್ದರೂ ಬಂದರೆ ಬದುಕಿರುವಾಗಲೇ ಬರಬೇಕು ಎಂಬುದು ಕೆಲವು ಕುಹಕಿಗಳ ಮಾತು) ಆಗ ಒಂದು ಸಭೆ ಏರ್ಪಾಡಾಗಿತ್ತು. ಓರ್ವ ಬಾಲಕ ವೇದಿಕೆ ಹತ್ತಿ ಗಾಂಧಿ ಬಳಿಗೆ ಹೋದ. ಗಾಂಧಿ ಕೇಳಿದರು– 'ನೀನು ಯಾವ ಜಾತಿ?' (ಎಂತಹ ನೀಚ ಆ ಗಾಂಧಿ! ಬಾಲಕನ ಹೆಸರನ್ನು ವಿಚಾರಿಸದೆ ಜಾತಿ ಕುರಿತು ಪ್ರಶ್ನಿಸುವುದೆ?) ಬಾಲಕ 'ನಾನು ಹಿಂದೂ' ಎಂದ. ಉತ್ತರದಿಂದ ಚಕಿತರಾದರು ಗಾಂಧಿ. 'ಯಾರಪ್ಪ ನೀನು' ಎಂದು ಕೇಳಿದರು. ಆ ಬಾಲಕ 'ನಾನು ಆರೆಸ್ಸೆಸ್ ಕಾರ್ಯಕರ್ತ' ಎಂದು ಉತ್ತರಿಸಿದ. ಈಗ ಹೇಳಿ ಯಾರು ಮಹಾತ್ಮರು? ಜಾತಿ ಕೇಳಿದ ಗಾಂಧಿಯೊ? ಜಾತಿ ಮತ ಮೀರಿದ ಆರೆಸ್ಸೆಸ್ ಬಾಲಕನೊ? ಅಂದಿನಿಂದ ಆರೆಸ್ಸೆಸ್ ಕುರಿತಂತೆ ಗಾಂಧಿಗೆ ಸದಭಿಪ್ರಾಯ ಮೂಡಿತು."

ಗಾಂಧೀಜಿ ಶ್ರೀರಂಗಪಟ್ಟಣಕ್ಕೆ ಬಂದದ್ದು ಸತ್ಯ. ಆದರೆ ಯಾರೋ ಬಾಲಕ ವೇದಿಕೆ ಮೇಲೆ ಹೋಗಿದ್ದು, ಜಾತಿ ಯಾವುದು ಎಂದು ಗಾಂಧೀಜಿ ಪ್ರಶ್ನಿಸಿದ್ದು ವಾಸ್ತವವೆ? ಇದಕ್ಕೆ ಪುರಾವೆ ಎಲ್ಲಿದೆ?

ಭಾಷಣಕಾರರ ಬಾಯೇ ಪುರಾವೆ! ನಾಲಿಗೆಯೇ ಸಾಕ್ಷಿ! ಬೇರೇನೂ ಬೇಕಿಲ್ಲ!

ಇದು ಒಂದಾಯಿತು.

ಮುಂದುವರೆಯಿತು ಭಟ್ಟರ ವಾಕ್ ಪ್ರವಾಹ.

"ನಮ್ಮದು ಭವ್ಯ ಪರಂಪರೆ. ಇದರಲ್ಲಿ ಎಲ್ಲವೂ ಇದೆ. ಅದನ್ನ ನಾವು ಅರಿತಿಲ್ಲ. ಮೌಢ್ಯ ನಮ್ಮನ್ನು ಆವರಿಸಿದೆ. ಪಾಶ್ಚಾತ್ಯ ನಾಗರಿಕತೆಯ ಗುಲಾಮರಾಗಿದ್ದೇವೆ ನಾವು. ಇದರ ಪರಿಣಾಮ ಏನಾಗಿದೆ? ನಮಗೆ ಯಾರೂ ಗೌರವ ನೀಡುತ್ತಿಲ್ಲ. ಇತ್ತೀಚೆಗೆ ಮನಮೋಹನಸಿಂಗ್ ವಿದೇಶಕ್ಕೆ ಹೋಗಿದ್ದರು. ಇವರಂತೆಯೇ ಹಲವು ದೇಶಗಳ ಪ್ರಧಾನಿಗಳೂ ಅಲ್ಲಿಗೆ ಹೋಗಿದ್ದರು. ಊಟದ ಸಮಯ. ಎಲ್ಲ ದೇಶಗಳ ಪ್ರಧಾನಿಗಳನ್ನು ಊಟಕ್ಕೆ ಆಹ್ವಾನಿಸಿದರು. ಆದರೆ ಭಾರತದ ಪ್ರಧಾನಿ ಕಡೆ ತಿರುಗಿಯೂ ನೋಡಲಿಲ್ಲ. ಕರೆಯದಿದ್ದರೂ ಭೋಜನ ಶಾಲೆಗೆ ಹೋದರು ನಮ್ಮ ಪ್ರಧಾನಿ! ಎಂತಹ ಅವಮಾನ!"

ಯಾವ ದೇಶದಲ್ಲಿ ಈ ರೀತಿ ಅವಮಾನ ಮಾಡಲಾಯಿತು. ಯಾವಾಗ ನಡೆಯಿತು ಇದು?

ಅದರ ವಿವರಗಳೆಲ್ಲ ಬೇಕಿಲ್ಲ. ಹಿಂದೂ ದೇಶಕ್ಕೆ ಆದ ಅವಮಾನವನ್ನ ಗುರುತಿಸಿದರಲ್ಲ ಅದನ್ನು ಮೆಚ್ಚಬೇಕು!

ಭಾಷಣ ಕೇಳುತ್ತ ಇದೇ ಗುಂಗಿನಲ್ಲಿದ್ದೆ. ಪಕ್ಕದಲ್ಲಿದ್ದವರು ಯಾರೋ ಕೇಳಿದರು– "ಸಾರ್ವಜನಿಕವಾಗಿ ಇಂತಹ ಸುಳ್ಳು ಹೇಳುವುದು ಸರಿಯೆ?"

ಸರಿಯೋ ತಪ್ಪೋ, ಸಮಾರಂಭದ ಉದ್ದೇಶವೇ ಹಿಂದೂ ಧರ್ಮದ ಬಗೆಗೆ ಅತಿಯಾದ ವ್ಯಾಮೋಹ ಬೆಳೆಸುವುದು. ಅದನ್ನು ಯಶಸ್ವಿಯಾಗಿ ನಿರ್ವಹಿಸಿದ್ದಾರೆ ಎಂದು ಉತ್ತರಿಸಬೇಕೆಂದಿದ್ದೆ. ಅಷ್ಟರಲ್ಲಿ ಇನ್ನೊಬ್ಬರು ಬಾಯಿ ಹಾಕಿದರು– "ನಿಜ ಹೇಳಿದರೆ ಅವರಿಗೆ ಅಸ್ತಿತ್ವವೇ ಇಲ್ಲ!"

ಯಾವುದು ಸರಿಯೋ ಏನು ಕತೆಯೋ!

ಹಣದ ಚೀಲ ಹಿಡಿಯಬೇಕಿತ್ತು!

ಮಳೆಹನಿ ನಿಂತರೂ ಮರದ ಹನಿ ನಿಲ್ಲಲಿಲ್ಲ ಅಂತಾರೆ. ಹಂಗಾಗಿದೆ ನಂ ಕ್ರಿಕೆಟ್ ಹುಡುಗರ ಕತೆ. ಐಪಿಎಲ್ ಹೆಸರಿನಲ್ಲಿ ನಡೆದ ಟಿ-20 ಪಂದ್ಯಗಳಲ್ಲಿ ನೋಡಬೇಕಿತ್ತು, ಅವರ ಜೋರೇನು, ಜಬರ್ದಸ್ತೇನು. ಅರೆರೆ ಎನ್ನಯ ಸಮಾನರಾರು ಅನ್ನೊ ಗತ್ತಿನಲ್ಲಿ ಮೆರೆದಾಡಿದ್ದೇನು. ಇದನ್ನೆಲ್ಲ ಕಣ್ಮನಗಳಲ್ಲಿ ತುಂಬಿಕೊಂಡ ಕ್ರಿಕೆಟ್ ಅಭಿಮಾನಿಗಳು ಆರಾಧನೆ ಮಾಡಿದ್ದೇನು; ಕೊಂಡಾಡಿದ್ದೇನು. ಒಂದಾ ಎರಡಾ. ಅವನ್ನೆಲ್ಲ ರನ್ನಿಂಗ್ ಕಾಮೆಂಟ್ರಿ ಅನ್ನೊ ಹೆಸರಿನಲ್ಲಿ ಹಾಡಿ ಹೊಗಳ್ತಾರಲ್ಲ ಅವರ ಬಾಯಲ್ಲೇ ಕೇಳಬೇಕು....

ಹಂಗಿದ್ರಲ್ಲಾ ಅವರು. ಅದೇ ಗುಂಗಿನಲ್ಲಿ ವೆಸ್ಟ್ ಇಂಡೀಸ್‌ಗೆ ಹಾರಿದರು. ವಿಶ್ವಕಪ್ ನಮ್ಮ ಮಡಿಲಿಗೆ ಬಂದು ಬಿದ್ದೋಗಿದೆ ಅವಾಗಲೇ ಅನ್ನೋ ರೀತೀಲೆ ವರ್ತಿಸಿದರು. ಇಂತಹ ಹುಡುಗರ ಬೀಳ್ಕೊಡುಗೆ ಸಮಾರಂಭ ಭರ್ಜರಿಯಾಗೇ ಇರಬೇಕು ಎಂದು ಯೋಚಿಸಿದರು. ಯಾರೂ.... ಕ್ರಿಕೆಟ್‌ನಿಂದಲೇ ಬದುಕೋ ಜನ. ಅದ್ದೂರಿಯಾಗೇ ಬೀಳ್ಕೊಟ್ಟರು. ಇಲ್ಲಿಂದ ಅಲ್ಲಿಗೆ ಹೋದ್ರಾ.... ಅಲ್ಲೇನಾಯ್ತೊ ಏನು ಕತೆಯೋ. ಭಾರತ್ ಕಾ ಈ ಶೇರ್‌ಗಳು ವೆಸ್ಟ್ ಇಂಡೀಸ್ ಮೆ ಬನ್‌ಗಯಾ ಕುತ್ತೆ! ಸೂಪರ್ ಎಂಟರ ಹಂತ ಮುಲುಕ್ತಾ ತಲುಪಿದರಾದರೂ ನಂತರದ ಪಂದ್ಯಗಳಲ್ಲಿ ಮಗ್ಗಾ ಮಲಗಿದರು.

'ಸೋಲುಭೇರಿ' ಹೊಡೆದ ಈ ಧಾಂಡಿಗರು ಮುಖದ ಮೇಲೆ ಟವೆಲ್ ಹಾಕ್ಕೊಂಡು ಮನೆ ಸೇರುವುದರಲ್ಲಿ ಹೆಣ ಬಿದ್ದೋಯ್ತಂತೆ. ಎಲ್ಲರೂ ಹೇಗೆಂಗೋ ಮುಖ ಮರೆಸಿಕೊಂಡರು. ಕ್ಯಾಪ್ಟನ್ ಆದ ಸಂಕಟಕ್ಕೆ ಧೋನಿ ಮಾಧ್ಯಮದವರ ಕೈಗೆ ಸಿಗಾಕಿಕೊಂಡ.... 'ಏನಪಾ ಹಿಂಗ್ಮಾಡಬಹುದಾ ನೀವು. ಭಾರತದ ಮಾನಾನ ವೆಸ್ಟ್ ಇಂಡೀಸ್‌ನಲ್ಲಿ ಹರಾಜಾಕಿಬುಟ್ರಲ್ಲಾ' ಅಂತ ಮಾಧ್ಯಮದವರು ಕೇಳಿದ್ದಕ್ಕೆ ಅನುಭವಿ ಕ್ಯಾಪ್ಟನ್ ಬೆಣ್ಣೇಲಿ ಕೂದಲು ತೆಗೆದ ಹಾಗೆ ಉತ್ತರ ನೀಡಿದರು. ಅದರ ಸಾರಾಂಶ ಹೀಗಿದೆ:

ನಮ್ಮ ಹುಡುಗರದ್ದೇನೂ ತಪ್ಪಿಲ್ಲ. ಅವರು ಪಸಂದಾಗೆ ಆಡುತ್ತಿದ್ದರು. ಆದರೇನು ಮಾಡ್ತೀರಿ. ಅವ್ರೆಲ್ಲ ಐಪಿಎಲ್‌ನ ಪಂದ್ಯ ಆಡಿದ್ರು. ಆ ಪಂದ್ಯಾವಳಿಗಳು ರಾತ್ರಿ ಹೊತ್ತು ಆಡುತ್ತಿದ್ದುದು ಎಲ್ರಿಗೂ ಗೊತ್ತೇ ಅದೆ. ಆಡಿ ಸುಸ್ತಾಗಿ ಮಲಗಕ್ಕೆ ಹೋಗಾನ ಅಂದ್ರೆ ಲೇಟ್ ನೈಟ್ ಪಾರ್ಟಿ ಇರೋದು. ಹೆಸರಾಂತ ರಾಜಕಾರಣಿಗಳು, ಸಿನಿಮಾ ತಾರೆಯರು, ಶ್ರೀಮಂತ ಕುಳಗಳು ಮೋಜುಮಸ್ತಿ ಮಾಡಲು ಬರುತ್ತಿದ್ದರು. ಚಿಯರ್‌ಗರ್ಲ್ಸ್ ಅಲ್ಲೂ ಚಿಯರ್ಸ್ ಮಾಡುತ್ತಿದ್ದರು. ಇವರೆಲ್ಲರ ಒಡನಾಟ ಬಿಟ್ಟು ಬರಲು ಮನಸ್ಸೇ ಆಗ್ತಿರಲಿಲ್ಲ. ಹಿಂಗಾಗಿ ಆರು ವಾರಗಳ ಕಾಲ ಕಣ್ತುಂಬ ನಿದ್ದೇನೆ ಮಾಡಕ್ಕಾಗ್ಲಿಲ್ಲ. ಮೇಲ್ಮಟ್ಟದ ಪ್ರದರ್ಶನ ನೀಡೋಕೂ ಆಗ್ಲಿಲ್ಲ.



ಧೋನಿ ಹಿಂಗದನಾ, ಕ್ರಿಕೆಟ್ ಕೋಚು ಗ್ಯಾರಿ ಕರ್ಸ್ಟನ್ ಹೇಳಿದ್ದೇ ಬೇರೆ ಕತೆ. ಅದೇನಪ್ಪ ಅಂದರೆ... ಇರೋ ಹನ್ನೊಂದು ಜನರಲ್ಲಿ ಎಂಟು ಮಂದಿ ದಢೂತಿ ಮುಂಡೇವು. ಕೊಬ್ಬು ಇಳಿಸ್ರೋ ಅಂದ್ರೆ ಹೆಚ್ಚಿಸ್ಕೊಂಡ್ ಕುಂತವೆ. ಅವರಲ್ಲೂ ಮೂರು ಜನ ಅಂತರರಾಷ್ಟ್ರೀಯ ಮಟ್ಟದಲ್ಲಿ ಆಡೋಕೆ ಅರ್ಹತೇನೆ ಇಲ್ಲದೋವು. ಟೀಂ ಆಯ್ಕೆ ಮಾಡುವಾಗ ನನ್ನನ್ನ ಕ್ಯಾರೇ ಅಂತಾನೂ ಯಾರೂ ಕೇಳ್ಳಿಲ್ಲ. ಹಾಳಾಗಲಿ ಅಂತಾವ ಆಟ ಆಡಿದ ಮೇಲೆ ರೆಸ್ಟ್ ತಗೊಳ್ರೋ ಮುಂಡೇಮಕ್ಳಳ, ಮುಂದಿನ ಆಟ ಕುರಿತು ತಂತ್ರ ರೂಪಿಸಿರೋ ಅಂದ್ರೆ ನಾವು ಬಾರ್‌ನಲ್ಲಿ ರಿಲ್ಯಾಕ್ಸ್ ಮಾಡ್ತೀವಿ, ಅಲ್ಲೇ ತಂತ್ರ ರೂಪಿಸ್ತಿವಿ ಅಂತ ಅಲ್ಲಿಗೋಡ್ತಿದ್ದೊ. ಇದೆಲ್ಲ ಒಳ್ಳೆಯದಕ್ಕಲ್ಲ ಅಂದ್ರೆ ಆಟದ ಮೈದಾನ ಬಿಟ್ಟು ಬೇರೆ ಕಡೆ ನಿನ್ನ ಉಸಾಬರಿ ಬೇಕಿಲ್ಲ ಅಂತಿದ್ದೊ.... ಅಂತೆಲ್ಲ ವರದಿ ಒಪ್ಪಿಸಿದ್ದಾನಂತೆ.

ಇವು ಯಾವುವೂ ಸಮಂಜಸ ಕಾರಣ ಎಂದು ಅನಿಸುವುದಿಲ್ಲ. ಅದು ಬೇರೆಯೇ ಇದೆ. ಟೀಂ ಇಂಡಿಯಾ ವಿಶ್ವಕಪ ಗೆಲ್ಲಬೇಕಾದರೆ ಕೆಲವು ಸಲಹೆಗಳನ್ನು ಅನುಸರಿಸ ಬೇಕಾದುದು ಅನಿವಾರ್ಯ.

ಸಲಹೆ ಒಂದು: ನಮ್ಮ ಕ್ರಿಕೆಟಿಗರು ಐಪಿಎಲ್ ಪಂದ್ಯಾವಳಿಯ ರುಚಿ ಅನುಭವಿಸಿದವರು. ಅದರಲ್ಲಿ ಹಣದ ಹೊಳೆಯೇ ಮನೆಯ ಬಾಗಿಲಿಗೆ ಹರಿದು ಬರುತ್ತದೆ. ವಿಶ್ವಕಪ್ ಪಂದ್ಯಾವಳಿಯ ಹಣ ಇದರ ಮುಂದೆ ತನ್ನೆಲ್ಲ ಆಕರ್ಷಣೆಗಳನ್ನು ಕಳೆದುಕೊಂಡಿರುತ್ತೆ. ಕುದುರೆ ಮುಂದೆ ಹಸಿಹುಲ್ಲು ಹಿಡಿದರೆ ಅದಕ್ಕೆ ಹುಮ್ಮಸ್ಸು ಬರಲ್ವಾ ಹಾಗೇನೆ ಕ್ರಿಕೆಟ್ಟಿಗರ ಎದುರು ದೊಡ್ಡ ಮೊತ್ತದ ಹಣದ ಗಂಟು ಸದಾ ಕಾಣುವಂತೆ ಇರಬೇಕು. ಆಗ ಅವರಿಗೂ ಆಡಲು ಹುಮ್ಮಸ್ಸು ಬರುತ್ತದೆ.

ಸಲಹೆ ಎರಡು: ಐಪಿಎಲ್ ಪಂದ್ಯಾವಳಿಗಳಲ್ಲಿ ಎಲ್ಲ ದೇಶಗಳ ಆಟಗಾರರನ್ನೂ ಹರಾಜು ಹಾಕಲಾಗುತ್ತದೆ. ಯಾರನ್ನು ಯಾವ ಪಂಗಡಕ್ಕಾದರೂ ಸೇರಿಸಿಕೊಳ್ಳುವ ಅವಕಾಶ ಇದೆ. ಇದು ಬಿಸಿಸಿಐಗೆ ಮಾರ್ಗದರ್ಶನ ಸೂತ್ರ ಆಗಬೇಕು. ವಿಶ್ವದ ಶ್ರೇಷ್ಠ ಆಟಗಾರರನ್ನೆಲ್ಲ ಕೊಂಡು ಅದಕ್ಕೆ 'ಟೀಂ ಇಂಡಿಯಾ' ಲೇಬಲ್ ಅಂಟಿಸಿದರೆ ಆಯಿತು. ಗೆಲುವು ಖಚಿತ! ●

ದಂಡಪಿಂಡಗಳೇ ತುಂಬಿರುವ ರಾಜ್ಯ ಕಾಂಗ್ರೆಸ್

ವಾರೆವ್ಹಾ! ನಮ್ಮ ಚೆಡ್ಡಿ ಶಾಸಕ ಶಿವಣ್ಣ 'ಸೊಗಡು' ಅಲ್ಲ, ಬರೀ 'ತಗಡು' ಎಂಬುದನ್ನು ಸಾಕ್ಷಿ ಸಮೇತ ಬಯಲುಗೊಳಿಸಿದ್ದೀರಿ. ಜೊತೆಗೆ ಆತನಿಗೆ ಸೂಟ್ ಆಗುವಂತಹ ಹೊಸ ಅಡ್ಡ ಹೆಸರನ್ನೂ ನಾಮಕರಣ ಮಾಡಿದ್ದೀರಿ. ನಿಮಗೆ ಧನ್ಯವಾದಗಳು. ಈಗಲಾದರೂ ತುಮಕೂರಿನ ಜನಕ್ಕೆ ಬುದ್ಧಿ ಬರಲಿ.

- ಪದ್ಮನಾಭ. ಎಚ್. ತುಮಕೂರು

ಕಾಂಗ್ರೆಸ್ ರಾಜ್ಯಾಧ್ಯಕ್ಷ ಆರ್.ವಿ. ದೇಶಪಾಂಡೆ ಅವರನ್ನು ಮಾತ್ರ ನಹುಶ ಅವರು 'ದಂಡ'ನಾಯಕ ಎಂದು ಕರೆದಿರುವುದು ಸರಿಯಲ್ಲ. ವಾಸ್ತವವಾಗಿ ಇಡೀ ಕಾಂಗ್ರೆಸ್ ಪಕ್ಷವೇ ಇಂತಹ 'ದಂಡಪಿಂಡ' ನಾಯಕರಿಂದು ಕೂಡಿದೆ. ಇಲ್ಲವಾದರೆ ಯಡಿಯೂರಪ್ಪನ ಸರ್ಕಾರ ಒಂದರ ಮೇಲೊಂದು ಅವಾಂತರ ಮಾಡಿಕೊಳ್ಳುತ್ತಿದ್ದರೂ ಪ್ರಮುಖ ವಿರೋಧಪಕ್ಷವಾದ ಕಾಂಗ್ರೆಸ್ ತನ್ನ ಜವಾಬ್ದಾರಿಯನ್ನು ನಿರ್ಲಕ್ಷಿಸಿ ಹೀಗೆ ಕೈಕಟ್ಟಿ ಸುಮ್ಮನೆ ಕೂರುತ್ತಿತ್ತೇ? ರಾಜ್ಯದಲ್ಲಿ ಇವತ್ತು ಹಗಲು ಲೂಟಿ ನಡೆಯುತ್ತಿದ್ದರೂ, ಮಂತ್ರಿಗಳು ಹಾದರದಲ್ಲಿ, ಅತ್ಯಾಚಾರದಲ್ಲಿ ಸಿಕ್ಕಿಹಾಕಿಕೊಳ್ಳುತ್ತಿದ್ದರೂ ಕಾಂಗ್ರೆಸ್ ಮಾತ್ರ ತನಗೂ ಇದಕ್ಕೂ ಸಂಬಂಧವೇ ಇಲ್ಲ ಎಂಬಂತೆ ಕೂತಿದೆ. ಇನ್ನು ರಾಜ್ಯ ಕಾಂಗ್ರೆಸ್‌ನ ಕಾರ್ಯಾಧ್ಯಕ್ಷ ಡಿ.ಕೆ.ಶಿವಕುಮಾರ್ ಅವರೇ ಮೊನ್ನೆ ತಮ್ಮ ಕೈಯಿಂದ ಏನೂ ಸಾಧ್ಯವಾಗಿಲ್ಲ ಎಂದು ಒಪ್ಪಿಕೊಂಡಿದ್ದಾರೆ. ಇದೆಲ್ಲ ಏನನ್ನು ಸೂಚಿಸುತ್ತದೆ? ಕಾಂಗ್ರೆಸ್ ಒಂದು ದಂಡಪಿಂಡಗಳ ಪಕ್ಷ ಎಂದಲ್ಲವೇ?


-ಶಿವಕುಮಾರ್. ಕೆ. ಶಿವಮೊಗ್ಗ

'ಲಂಕೇಶ್' ವಾರಪತ್ರಿಕೆಯಲ್ಲಿ 'ಸ್ವಯಂವರ' ಕಾರ್ಯಕ್ರಮ ಕುರಿತು ಪ್ರಕಟಗೊಂಡ ವರದಿಯನ್ನು ಓದಿ ನನಗೆ ಬಹಳ ಸಂತೋಷವಾಯಿತು. ಈ ಬಗೆಯ ಕಾರ್ಯಕ್ರಮಗಳಿಂದ ಮಹಿಳೆಯರನ್ನು ಮತ್ತಷ್ಟು ಅಂಧಕಾರದ ಸ್ಥಿತಿಗೆ ತಳ್ಳಿದಂತೆ ಆಗುತ್ತದೆ. ಈ ಕಾರ್ಯಕ್ರಮದಲ್ಲಿ ಬರುವ ಜ್ಯೋತಿಷಿಗಳು ಹೇಳುವುದೆಲ್ಲಾ ಸುಳ್ಳು, ಬುರುಡೆ. ಜ್ಯೋತಿಷಿಗಳು ಹೇಳಿದಂತೆ ಯಾವುದೂ ನಡೆದಿಲ್ಲ. ಪ್ರೀತಿಸಿ ಮದುವೆಯಾದವರೆಲ್ಲ ಜಾತಕವನ್ನು ನೋಡಿ ಆಗಿದ್ದಾರೆಯೇ? ಜಾತಕ ಹೊಂದಿಕೆಯಾದರೆ ಮಾತ್ರ ಮದುವೆಯಾಗಬೇಕು ಎಂದು ಹೇಳುವ ಈ ಕಾರ್ಯಕ್ರಮ ಯುವಕರಿಗೆ ತಪ್ಪು ಸಂದೇಶವನ್ನು ಸಾರುತ್ತದೆ. ಇದೆಲ್ಲಾ ಕೇವಲ ನಾಟಕ.

ತಮ್ಮ ವರದಿಯಲ್ಲಿ 'ಅಸಹ್ಯವೇ ಆಕರ್ಷಣೆಯಾದಾಗ' ಎಂದು ಹೇಳಿರುವುದು ಸಂದರ್ಭೋಚಿತವಾಗಿದೆ. ಯಾಕೆಂದರೆ ನಾವುಗಳು ಕೂಡ ಈ ಕಾರ್ಯಕ್ರಮವನ್ನು ದೂಷಿಸುತ್ತಲೆ ಅದನ್ನು ನಮ್ಮ ಮನೆಯವರೆಲ್ಲಾ ವೀಕ್ಷಿಸುತ್ತಾ ಬಂದಿದ್ದೆವು. ನಿಮ್ಮ ವರದಿಯನ್ನು ನೋಡಿದ ಮೇಲೆ ಅದರ ಕುತೂಹಲವೇ ನಮಗೆ ಹೋಗಿಬಿಟ್ಟಿದೆ. ನಿಜವಾದ ವಿವಾಹಗಳಿಗೆ ಅವಮಾನಿಸುವಂಥ ಈ ಬಗೆಯ ಕಾರ್ಯಕ್ರಮವನ್ನು ನಿಲ್ಲುವಂತೆ ಮಾಡಬೇಕು.

ನೀವು ನಮ್ಮ ಮನಸ್ಸಿನಲ್ಲಿ ಇದ್ದದ್ದನ್ನೇ ಬರೆದಿದ್ದೀರಿ. ನಿಮ್ಮ ಪತ್ರಿಕೆಗೆ ಎಷ್ಟು ಧನ್ಯವಾದಗಳು ಹೇಳಿದರೂ ಸಾಲದು.

- ಪೂಜಾ. ಬೆಂಗಳೂರು.
ಇ-ಮೇಲ್ ಮೂಲಕ



ನೀವು 'ಸ್ವಯಂವರ' ಕಾರ್ಯಕ್ರಮದ ಮೊದಲ ಮೂರು ಎಪಿಸೋಡ್‌ಗಳ ಬಗ್ಗೆ ಬರೆದಿದ್ದೀರಿ. ಆದರ ವಾಸ್ತವವಾಗಿ ಅದರ ನಾಲ್ಕನೆ ಎಪಿಸೋಡು ಕೂಡ ಮೊದಲ ಎಪಿಸೋಡುಗಳಿಗಿಂತ ಭಿನ್ನವಾಗಿಲ್ಲ. ಒಂದೇ ಒಂದು ವ್ಯತ್ಯಾಸ ಏನೆಂದರೆ ನಾಲ್ಕನೆ ಎಪಿಸೋಡಿನಲ್ಲಿ ಹುಡುಗಿ ಒಬ್ಬನನ್ನು ಆಯ್ಕೆ ಮಾಡುತ್ತಾಳೆ, ಆದರೆ ಹುಡುಗ ಆಕೆಯನ್ನು ತಿರಸ್ಕರಿಸುತ್ತಾನೆ! (ಕಾರ್ತಿಕ್ ಮತ್ತು ಪ್ರಗತಿ ಎಪಿಸೋಡ್)

ಇಂಥ ದೊಡ್ಡ ದೇಶದಲ್ಲಿ ಇಂಥ ದಡ್ಡ ಕಾರ್ಯಕ್ರಮ ಪ್ರಸಾರಗೊಳ್ಳುವುದೇ ನಾಚಿಕೆಯ ವಿಷಯ.

ಲೇಖನ ತುಂಬಾ ಚೆನ್ನಾಗಿತ್ತು. ಅದರಲ್ಲಿ ವ್ಯಕ್ತವಾದ ಅಭಿಪ್ರಾಯ ನನ್ನ ಅಭಿಪ್ರಾಯವನ್ನೇ ಬಿಂಬಿಸುತ್ತಿತ್ತು. ಧನ್ಯವಾದಗಳು.

- ಬಿ. ವಿಶ್ವನಾಥ್.
ಬೆಂಗಳೂರು. ಇ-ಮೇಲ್ ಮೂಲಕ

'ಉಪ್ಪಿಯ ಸೂಪರ್ ಹುಚ್ಚಾಟ' ಲೇಖನದ ಬಗ್ಗೆ ನನ್ನ ಅನಿಸಿಕೆಗಳು:

- ಉಪೇಂದ್ರ ನಿಜವಾಗಲೂ ಪ್ರತಿಭಾವಂತ ಎನ್ನುವುದು ನಿಜವಾಗಿದ್ದರೆ ಅವರು ಹಳೆ ಗಿಮಿಕುಗಳನ್ನು ಮತ್ತೆ ರಿಪೀಟ್ ಮಾಡುತ್ತಿರಲಿಲ್ಲ.
- 'ಸೂಪರ್' ಸಿನಿಮಾ ಬಿಡುಗಡೆಗೊಳ್ಳುವ ಮುಂಚೆಯೇ ಹತ್ತು ಜನ ಆ ತಂಡವನ್ನು ಬಿಟ್ಟುಹೋಗಿರುವುದನ್ನು ನೋಡಿದರೆ ಉಪ್ಪಿಯ ಹುಚ್ಚಾಟ ಯಾವ ಮಟ್ಟದ್ದು ಎಂದು ಅರ್ಥವಾಗುತ್ತದೆ.
- ಉಪೇಂದ್ರ ಆಯ್ಕೆ ಮಾಡಿರುವ ಚಿತ್ರದ 'ಟೈಟಲ್ ಸಿಂಬಲ್' ಕೂಡ ಅಶ್ಲೀಲವಾಗಿದೆ.
- ಲೇಖನದಲ್ಲಿ ಹೇಳಿರುವಂತೆ ಈಗ ಬಹಳ ಜನ ಯುವ ಮತ್ತು ಕ್ರಿಯಾಶೀಲ ನಿರ್ದೇಶಕರು ಕನ್ನಡ ಚಿತ್ರರಂಗದಲ್ಲಿದ್ದಾರೆ. ಆದ್ದರಿಂದ ಉಪ್ಪಿ ಈಗ ಹಳೇ ಗುಂಡನ್ನು ಹೊಸ ಬಾಟಲಿಗೆ ಹಾಕಿ ಕೊಟ್ಟರೂ ಅದು ಕಿಕ್ ಕೊಡುವುದಿಲ್ಲ.

ಇನ್ನು 'ಲಂಕೇಶ್' ವಾರ ಪತ್ರಿಕೆಯಲ್ಲಿ ಪ್ರಕಟಗೊಂಡ 'ಸ್ವಯಂವರನನ್ನು ವಂಚಿಸಿದ ವಧು' ಮತ್ತು 'ಕಟ್ಟೆ ಪುರಾಣ' ಚೆನ್ನಾಗಿದ್ದವು.

- ರಾಜೇಶ್ ಮಿತ್ರ, ಮೈಸೂರು
ಇ-ಮೇಲ್ ಮೂಲಕ

ಪತ್ರಿಕೆ ಪ್ರಕಾಶನದಿಂದ ಮೊನ್ನೆ ತಾನೆ ಬಿಡುಗಡೆಯಾದ ಪುಸ್ತಕದ 'ಗೋವು ಪವಿತ್ರ ಎಂಬ ಮಿಥ್ಯೆ'ಯನ್ನು ಸಮರ್ಥವಾಗಿ ಒಡೆದು ಹಾಕುವ, ಒಂದು ಸಮಕಾಲೀನ ನಿದರ್ಶನದಂತೆ ಕಲ್ಕುಳಿ ವಿಠಲ ಹೆಗ್ಗಡೆ ಅವರ 'ಮಠದ ಗೂಳಿಯ ಮರಣ ದಂಡನೆ' ಬರಹ ತುಂಬ ಖುಷಿ ಕೊಟ್ಟಿತು. ಮಾರ್ಮಿಕವಾಗಿ, ನಿರ್ದಿಷ್ಟ ಮಠದ ಹೆಸರು ಹೇಳಿರುವ ಅವರ ದಿಟ್ಟತನಕ್ಕೆ ಹ್ಯಾಟ್ಸ್ ಆಫ್! ಅದರ ಜಾಡಿನಲ್ಲಿ ಯೋಚಿಸಿದರೆ, ಬರಲಿರುವ ಗೋಹತ್ಯೆ ನಿಷೇಧ ಎಷ್ಟು ಹಾಸ್ಯಾಸ್ಪದವಾಗಬಹುದೆಂದು ಈಗಲೇ ಹೇಳ ಬಹುದು, ಅಥವಾ ನಮ್ಮ ಸೋಕಾಲ್ಡ್ ಹುಸಿ ಗೋಭಕ್ತರು ದಲ್ಲಾಳಿ ಸಾಬರ ಸ್ಥಾನದಲ್ಲಿ ಫಲಾನುಭವಿಗಳೂ ಆಗಬಹುದು ಅಥವಾ ತಮಗೇ ಬೇಡವಾದ/ಅನಿಷ್ಟವಾದ ಸಾಬರು-ದಲಿತರ ಬೇಟೆಯ ಸಾಧನವೂ ಆಗಬಹುದು; ಅಥವಾ ಈಗಾಗಲೇ ಸಂಕಷ್ಟದಲ್ಲಿ ತೊಳಲಾಡುತ್ತಿರುವ ರೈತಾಪಿಗಳಿಂದ ಕಪಾಳಮೋಕ್ಷಕ್ಕೂ ಒಳಗಾಗಬಹುದು ಅಲ್ಲವೆ?

-ಬಿ. ರಾಜಣ್ಣ, ಬೆಂಗಳೂರು

ೀರೋಗಳ ಮುಂದೆ ಎಲ್ಲರೂ ಜೀರೋ

ಸಂತ್‌ಕುಮಾರ್ ಪಾಟೀಲ್ ಚೇಂಬರ್ ಅಧ್ಯಕ್ಷ ುರುಕ್ಷಣದಿಂದಲೇ ಪರಭಾಷೆಯ ವಿರುದ್ಧ ಬ್ರಹ್ಮಾಸ್ತ್ರ ದ್ದಾರೆ. ಕನ್ನಡ ಚಿತ್ರೋದ್ಯಮ ಪಾತಾಳಕ್ಕೆ ತಲುಪಲು ಷೆ ಚಿತ್ರಗಳು ಮತ್ತು ಅದರ ಹಂಚಿಕೆಯ ವಿಧಾನವೇ ದೆಂಬಂತೆ ಆರ್ಭಟಿಸುತ್ತಿದ್ದಾರೆ. ಆದರೆ ಅವರ ೇ ನಡೆಯುತ್ತಿರುವ ಮತ್ತೊಂದು ಅವಾಂತರದ ಅವರು ತುಟಿಕ್‌ಪಿಟಿಕ್ ಎನ್ನುತ್ತಿಲ್ಲ. ಅದುವೇ ರ ಸಂಭಾವನೆ.

ೂರು ವರ್ಷಗಳ ಹಿಂದೆ ರಿಯಲ್ ನವರು ಬಂದು ನಾಯಕನಾಯಕಿ ಅವರು ಕೇಳಿದ್ದಕ್ಕಿಂತ ದುಪ್ಪಟ್ಟು ವನೆ ನೀಡಿ ನಮ್ಮ ಉದ್ಯಮವನ್ನು ಿಸಿದರು ಎಂಬುದು ಸಿನಿಮಾವನ್ನೇ ೊಂಡು ಬಂದ ನಿರ್ಮಾಪಕರ ಪವಾಗಿತ್ತು. ಅದು ಒಂದು ರೀತಿಯಲ್ಲಿ ೂಡಾ ಆಗಿತ್ತು. ಆದರೆ ಇಂದು ಅದೇ ನಗರದ ನಿರ್ಮಾಪಕರು ಎಸ್ಟೇಟ್ ನಿರ್ಮಾಪಕರು ನಾಚುವಂತೆ ರ ಕಾಲಿಗೆ ಡೈಹೊಡೆದು ಅವರು ಷ್ಟು ಸಂಭಾವನೆ ನೀಡುತ್ತಿದ್ದಾರೆ. ಈ ಸಂತ್‌ಕುಮಾರ್ ಪಾಟೀಲರಾ ಗಲಿ, ಪಕರ ಸಂಘದ ಅಧ್ಯಕ್ಷ ಕೆ.ಸಿ.ಎನ್. ಚಂದ್ರು ಆಗಲಿ ಬಾರಿಯೂ ಮಾತನಾಡೇ ಇಲ್ಲ!


ಳೆದ ಐದಾರು ತಿಂಗಳ ನಮ್ಮ ನಾಯಕ ನಟರುಗಳ ೀಟ್ ನೋಡೋಣ...

ೂರಪ್ಪ ಬಾಬು ಎಂಬ ಗಾಂಧಿನಗರವನ್ನೇ ೊಂಡು ಬಂದಿರುವ ನಿರ್ಮಾಪಕ, ಸ್ಟಾರ್ ಪುನೀತ್ ನಟಿಸಿದ 'ಪೃಥ್ವಿ' ಚಿತ್ರದ ೀಟ್‌ಗಾಗಿ ಕೊಟ್ಟಿದ್ದು ಎರಡು ಕೋಟಿಯ ಲಕ್ಷ ರೂ.ಗಳು! ಇದು ಯಾವ ರಿಯಲ್ ್ ದಣಿಗಳಿಗೂ ನಿಲುಕದ ಬೆಲೆ. ಈಗಲೂ ಅದೇ ದೊಡ್ಡ ಮೊತ್ತವನ್ನು ನೀಡಲು ್ಪ ಬಾಬು ರೆಡಿ ಇದ್ದಾರಂತೆ.


ಪ್ತಮಿತ್ರ' ಚಿತ್ರ ಮಾಡಿ ಕೋಟಿ ಳ ಲಾಭಗಳಿಸಿ, ಆ ಹಣದ ಲ್ಲೊಂದು ಂಗಲೆ ಕಟ್ಟಿಸಿ ಕಳೆದ ಆರು ವರ್ಷಗಳಿಂದ ್ತ ಜೀವನವನ್ನು ನಡೆಸುತ್ತಿದ್ದ ಚಿತ್ರರಂಗದ ದ್ವಾರಕೀಶ್ ಈಗ ತೊಂಬತ್ತೊಂದು ರೂ. ಸಂಭಾವನೆ ನೀಡಿ ಸುದೀಪ್ ಶೀಟ್ ಪಡೆದಿದ್ದಾರೆ. ಅಷ್ಟೇ ಹಣವನ್ನು ಗೆ ನೀಡಿದ್ದರೆ ಈ ಆರು ವರ್ಷಗಳ ಯಲ್ಲಿ ಕನಿಷ್ಠ ನಾಲ್ಕೈದು ವಿಷ್ಣು ಳನ್ನು ದ್ವಾರಕಿ ನಿರ್ಮಿಸಬಹುದಿತ್ತು. ಶಃ ದ್ವಾರಕಿ ವೃತ್ತಿ ಜೀವನದಲ್ಲಿ ಕನಟನೊಬ್ಬನಿಗೆ ಇಷ್ಟೊಂದು ದುಬಾರಿ ಸಂಭಾವನೆ ತ್ತಿರುವುದು ಇದೇ ಮೊದಲ ಬಾರಿ. ಅಷ್ಟೇ ಯಾಕೆ, ಉದ್ಯಮವನ್ನೇ ಬದಲಾಯಿಸಿ ಬಿಡುತ್ತೇನೆ ಎಂದು ಟಿಸುತ್ತಿದ್ದ ನಿರ್ಮಾಪಕರ ಸಂಘದ ಅಧ್ಯಕ್ಷ ಕೆ.ಸಿ.ಎನ್ ಗೆ ಎರಡು ವರ್ಷ ಸತಾಯಿಸಿದ ನಂತರ ಕಾಲ್‌ಶೀಟ್ ದರ್ಶನ್ ತನ್ನ ಸಂಭಾವನೆಯಲ್ಲಿ ಮಾತ್ರ ಒಂದಿಷ್ಟೂ ಯಾಗಲೇ ಇಲ್ಲ! ಅಂತಹ ದರ್ಶನ್ ಶೀಟ್‌ಗಾಗಿ ಮತ್ತೆ ಈಗ ಚಂದ್ರು ಹಣದ ಥೈಲಿ ುಕೊಂಡು ಓಡಾಡುತ್ತಿದ್ದಾರೆ.

ವರಾಜ್‌ಕುಮಾರ್ ವಿಷಯದಲ್ಲೂ ಅಷ್ಟೇ. ಅವರ ಯ ತೊಂಬತೊಂಬತ್ತನೆ ಚಿತ್ರ 'ಮೈಲಾರಿ', ನೂರನೇ 'ಜೋಗಯ್ಯ'. ಇದರ ನಿರ್ಮಾಪಕರು ರಿಯಲ್ ್ ದಣಿಗಳಾಗಲಿ, ಮೈನ್ಸ್ ದಣಿಗಳಾಗಲಿ ಅಲ್ಲ. ಚಿತ್ರಗಳ ನಿರ್ಮಾಪಕರಾದ ಶ್ರೀಕಾಂತ್ ಮತ್ತು ಪ್ರೇಮ್ ಇವರಿಬ್ಬರೂ ಕೂಡಾ ಶಿವಣ್ಣನ ಇಂದಿನ ಕಟ್ಟೆಯಲ್ಲಿರುವ ಸಂಭಾವನೆಯನ್ನೇ ನೀಡಿದ್ದಾರೆ. ಗಣೇಶ್ ಕಾಲ್‌ಶೀಟ್‌ಗಾಗಿ ಯಾವ ರಿಯಲ್ ್ ನಿರ್ಮಾಪಕರೂ ಕ್ಯೂ ನಿಂತಿರಲಿಲ್ಲ. ಗಣೇಶ್ ಶೀಟ್ ದಕ್ಕಿಸಿಕೊಂಡವರೆಂದರೆ ರಾಕ್‌ಲೈನ್ ವೆಂಕ , ದಯಾಳ್, ತ್ಯಾಗರಾಜ್ ಮತ್ತು ರೆಹಮಾನ್... ಲಾದ ಅಪ್ಪಟ ಗಾಂಧಿನಗರದ ನಿರ್ಮಾಪಕರುಗಳೇ. ್ಲಿ ಕೂಡಾ ಅಷ್ಟೇ: ಗಣೇಶ್ ಸಂಭಾವನೆಯ ುದಲ್ಲಿ ಬಿಲ್‌ಕುಲ್ ರಾಜಿ ಮಾಡಿಕೊಂಡಿರಲಿಲ್ಲ. ಗಿ ಸುಮಾರು ಒಂದು ಕೋಟಿ ಎಂಟು ಲಕ್ಷ ರೂ. ಾವನೆಯನ್ನು ಈ ನಿರ್ಮಾಪಕರು ಆತನಿಗೆ ನೀಡಿದ್ದರು. ದೀಗ ಫಿಲ್ಮ್‌ಚೇಂಬರ್‌ನ ಉಪಾಧ್ಯಕ್ಷರಾಗಿ ಅತ್ಯಂತ , ಮತಗಳಿಂದ ಆಯ್ಕೆಯಾಗಿರುವ ಗಂಗಾಧರ್ ತೆಲುಗು ಚಿತ್ರದ ಕ್ಯಾಸೆಟ್‌ಅನ್ನು ಕ್ರೇಜಿ ಸ್ಟಾರ್ ಂದ್ರನ್‌ಗೆ ತೋರಿಸಿದಾಗ ಈ ಚಿತ್ರದಲ್ಲಿ ನಟಿಸಲು ಸ್ಟಾರ್ ಎಂಭತ್ನಾಲ್ಕು ಲಕ್ಷ ರೂ.ಗಳ ಬೇಡಿಕೆಯನ್ನು ದಿಟ್ಟಿದ್ದಾರೆ.

ಂದೇ ಕಂತಿನಲ್ಲಿ ಅರವತ್ತೂರು ಲಕ್ಷ ರೂ. ಪಾವತಿಸು ತ್ತೇನೆ ಅದನ್ನೇ ಒಪ್ಪಿಕೊಳ್ಳಿ ಎಂದು ಗಂಗಾಧರ್ ರವಿಚಂದ್ರನ್ ಮುಂದೆ ಮಂಡಿಯೂರಿದ್ದಾರೆ. ಆದರೆ ರವಿಚಂದ್ರನ್ ಇದಕ್ಕೆಲ್ಲ ಕೇರ್ ಮಾಡದೆ ಎಂಭತ್ನಾಲ್ಕಕ್ಕಿಂತ ಒಂದು ಪೈಸೆ ಕಡಿಮೆಯಾದರೂ ಒಪ್ಪುವುದಿಲ್ಲವೆಂದು ಕಡ್ಡಿ ಮುರಿದಂತೆ ಹೇಳಿದ್ದಾರೆ. ರವಿಯ ಮಾತು ಕೇಳಿ ಬೇಜಾರಾದ ಗಂಗಾಧರ್ ಸುದೀಪ್ ಮನೆಗೆ ಹೋದರೆ ಸುದೀಪ್ ಎಂದಿನಂತೆ 'ತೊಂಬತ್ತೊಂದು ಲಕ್ಷ ಮಡಗಿ' ಎಂದು ಹೇಳಿದ್ದಾರೆ. ಈ ಮಧ್ಯೆ ತಾರೆಗಳ ಸಂಭಾವನೆ ವಿರುದ್ಧ ದೊಡ್ಡ ಸಮರವನ್ನೇ ಸಾರಿದ್ದ ನಿರ್ದೇಶಕರ ಸಂಘದ ಅಧ್ಯಕ್ಷ ರಾಜೇಂದ್ರಸಿಂಗ್ ಬಾಬು ಕೂಡಾ ಸುದೀಪ್ ಕಾಲ್‌ಶೀಟ್ ಗಾಗಿ ಓಡಾಡುತ್ತಿರುವುದು ಗಾಂಧಿನಗರದಲ್ಲಿ ಜೋಕ್ ಆಗಿದೆ. "ಸುದೀಪ್ ಬೇಡಿಕೆಯ 91 ಲಕ್ಷ ನೀಡಲು ನಾನು ತಯಾರು" ಎಂದು ಬಾಬು ಹೇಳಿರುವುದು ಗಾಂಧಿನಗರದ ಜನರಲ್ಲಿ ದಿಗ್ಭ್ರಮೆ ಹುಟ್ಟಿಸಿದೆ. ಯಾಕೆಂದರೆ ಈ ಹಿಂದೆ ಬಾಬು ಆಗಾಗ ಹೇಳುತ್ತಿದ್ದ ಮಾತು ಏನು ಗೊತ್ತಾ? "ನಾವು ತಾರೆಯರನ್ನು ಸೃಷ್ಟಿಸುವ ಸ್ಟಾರ್ ನಿರ್ದೇಶಕರು, ನಾವೇಕೆ ಅಷ್ಟು ಹಣ ಸುರಿಯಬೇಕು?" ಎಂದು ಅನೇಕ ಬಾರಿ ಬಾಬು ಗುಡುಗಿದ್ದರು. ವಿಷ್ಣು ಮತ್ತು ಬಾಬು ನಡುವಿನ ಸ್ನೇಹದ ಕೊಂಡಿ ಕಳಚಿಹೋಗಲು ಈ ಸಂಭಾವನೆಯ ವಿಷಯವೇ ಮುಖ್ಯ ಕಾರಣವಾಗಿತ್ತು. ರಾಜೇಂದ್ರಸಿಂಗ್ ಬಾಬು ಅವರ ಸಹೋದರಿ ವಿಜಯಲಕ್ಷ್ಮಿಸಿಂಗ್ ಕೂಡಾ ಸುದೀಪ್ ಕಾಲ್‌ಶೀಟ್‌ಗೆ ನೈಂಟಿ ಮೇಲೆ ಇನ್ನೊಂದು ಲಕ್ಷ ನೀಡಲು ತುದಿಗಾಲಲ್ಲಿ ನಿಂತಿದ್ದಾರೆ!



ಈ ಮಧ್ಯೆ ಕಪ್ಪು ಚಿರತೆ ಎನಿಸಿಕೊಂಡಿರುವ ವಿಜಯ್ ಕೂಡಾ ಗಾಂಧಿನಗರದ ಮಾಮೂಲಿ ನಿರ್ಮಾಪಕರಿಗೆ ನಿಲುಕದಂತಹ ಗಗನ ಕುಸುಮವಾಗಿದ್ದಾರೆ. ವಿಜಿ ಕಾಲ್‌ಶೀಟ್ ಪಡೆಯುತ್ತಿರುವವರೂ ಕೂಡಾ ಮಾಮೂಲಿ ನಿರ್ಮಾಪಕರಾದ ರಾಕ್‌ಲೈನ್ ವೆಂಕಟೇಶ್, ಗಂಡುಗಲಿ ಮಂಜು ಮೊದಲಾದ ವರೇ ವಿನಃ ರಿಯಲ್ ಎಸ್ಟೇಟ್ ಕುಳಗಳಲ್ಲ.



ಈ ಎಲ್ಲಾ ಅಂಕಿಅಂಶಗಳನ್ನು ನೋಡಿದರೆ ಗಾಂಧಿನಗರದ ನಿರ್ಮಾಪಕರ ಇಬ್ಬಂದಿತನ ಬಯಲಾಗುತ್ತದೆ. ಸಿನಿಮಾದ ಗಂಧಗಾಳಿ ಗೊತ್ತಿಲ್ಲದ ರಿಯಲ್ ಎಸ್ಟೇಟ್ ಕುಳಗಳು ಶೋಕಿಗಾಗಿ ಚಿತ್ರ ಮಾಡಲು ಬಂದು ಹೀರೋಗಳ ಸಂಭಾವನೆಯನ್ನೇ ಏರಿಸಿಬಿಟ್ಟಿದ್ದಾರೆ ಎಂದು ಹೇಳುವ ಮಾತಲ್ಲಿ ಹುರುಳಿಲ್ಲ ಎಂದಾಯಿತು. ಒಂದು ವೇಳೆ ನಾಯಕನಟರುಗಳ ಸಂಭಾವನೆ ದುಬಾರಿಯಾಗಿದ್ದು ಹೌದೇ ಆದಲ್ಲಿ ಈ ನಿರ್ಮಾಪಕರು ಅವರ ಕಾಲ್‌ಶೀಟ್‌ಗಾಗಿ ಮನೆಬಾಗಿಲು ಕಾಯುತ್ತಿದ್ದರೆ? ರಿಯಲ್ ಎಸ್ಟೇಟ್‌ನವರು ನೀಡಿದ ಸಂಭಾವನೆಯಷ್ಟೇ ಇವರುಗಳು ಯಾಕೆ ನೀಡುತ್ತಿದ್ದಾರೆ? ಒಟ್ಟಾರೆ ಹೇಳುವುದಾದರೆ ನಿರ್ಮಾಪಕರ ಮತ್ತು ತಾರೆಯರ ನಡುವಿನ ಈ ಸಮರದಲ್ಲಿ ತಾರೆಯರು ಜಯಭೇರಿ ಬಾರಿಸಿದ್ದಾರೆ.

ಆದರೆ ನಮ್ಮ ಪಕ್ಕದ ರಾಜ್ಯವಾದ ಕೇರಳದಲ್ಲಿ ಏನಾಗಿದೆ ಗೊತ್ತಾ? ನಿರ್ಮಾಪಕರ ಸಂಘದ ಆದೇಶದಂತೆ ಮಲೆಯಾಳಂನ ಎಲ್ಲಾ ನಾಯಕ-ನಾಯಕಿಯರು ತಮ್ಮ ಸಂಭಾವನೆಯನ್ನು ಶೇಕಡ ಇಪ್ಪತ್ತೈದರಷ್ಟು ಕಡಿತಗೊಳಿಸಿದ್ದಾರೆ. ನೆರೆಯ ಆಂಧ್ರದಲ್ಲಂತೂ ಸುಮಾರು ಆರು ದೊಡ್ಡದೊಡ್ಡ ನಿರ್ಮಾಣ ಸಂಸ್ಥೆಗಳು 'ತಾರೆಯರು ಸಂಭಾವನೆ ಕಡಿಮೆ ಮಾಡದಿದ್ದರೆ ಚಿತ್ರ ಮಾಡುವುದಿಲ್ಲ' ಎಂದು ಕಳೆದ ಆರು ತಿಂಗಳಿನಿಂದ ಸುಮ್ಮನೆ ಕುಳಿತುಕೊಂಡಿದ್ದಾರೆ!

ಆದರೆ ಕನ್ನಡದಲ್ಲಿ ಮಾತ್ರ ತಾರೆಯರ ಸಂಭಾವನೆಯ ಬಗ್ಗೆ ಯಾರೊಬ್ಬರೂ ಉಸಿರೆತ್ತುತ್ತಿಲ್ಲ. ಕನಿಷ್ಠ ಹೊಸತಾಗಿ ಅಧ್ಯಕ್ಷರಾಗಿರುವ ಬಸಂತ್‌ಕುಮಾರ್ ಪಾಟೀಲ್ ಕೆಲವು ವರ್ಷಗಳ ಹಿಂದೆ ತಾರೆಯರ ವಿರುದ್ಧ ಧ್ವನಿ ಎತ್ತಿದ ರೀತಿಯಲ್ಲಿ ಮತ್ತೆ ಆರ್ಭಟಿಸುತ್ತಾರೆ ಎಂಬ ನಿರೀಕ್ಷೆಯೂ ಹುಸಿಯಾಗಿದೆ. ಅವರೀಗ ಸುಮ್ಮಸುಮ್ಮನೆ ಪರಭಾಷಾ ಚಿತ್ರಗಳ ವಿರುದ್ಧ ದಂಡೆತ್ತಿಹೋಗಲು ಸಜ್ಜಾಗುತ್ತಿದ್ದಾರೆ. ಹೀಗಾಗಿ ತಾರೆಯರ ಸಂಭಾವನೆ ಬಗ್ಗೆ ಯಾರೊಬ್ಬರೂ ಮಾತೆತ್ತುತ್ತಿಲ್ಲ. ಅವರ ಚಿತ್ರ ಸೋತರೂ ಸಂಭಾವನೆ ಮಾತ್ರ ಏರುತ್ತಲೇ ಇದೆ. ಇದು ಕನ್ನಡ ಚಿತ್ರರಂಗದ ಸದ್ಯದ ದುಸ್ಥಿತಿ....

• ಶೆಣೈ
shenoylankesh@gmail.com


ನಟನೆ ಬಿಟ್ಟು ಬೇರೆ ಏನೂ ಗೊತ್ತಿಲ್ಲ

ಅಚ್ಯುತ ಉವಾಚ

ಒಂದೂ ಮಾಮರಾ... ಮಾಮರದಾ ಕೆಳಗೆ ಗುಬ್ಬಿಯ ಗೂಡು....

-ಕಳೆದ ವಾರವಷ್ಟೇ ತೆರೆಕಂಡಿರುವ, ಪ್ರಕಾಶ್ ರೈ ಚೊಚ್ಚಲ ನಿರ್ದೇಶನದ 'ನಾನು.. ನನ್ನ ಕನಸು' ಚಿತ್ರದಲ್ಲಿನ ಈ ಹಾಡನ್ನು ನೋಡುತ್ತಿದ್ದರೆ ಮೈ ಮನಸ್ಸು ಉಲ್ಲಸಿತಗೊಳ್ಳುತ್ತವೆ.

ಆ ಚಿತ್ರದಲ್ಲಿ ಮಗಳ ಇಚ್ಛೆಯಂತೆ ಪ್ರಕಾಶ್ ರೈ ಹೆಸರೇ ಗೊತ್ತಿಲ್ಲದ, ಅಡ್ರೆಸ್ ಇಲ್ಲದ ವ್ಯಕ್ತಿಯೊಬ್ಬನಿಗೆ ಹೊಸದೊಂದು ಹೆಸರಿಟ್ಟು, ತಮ್ಮ ಮನೆ-ಮನಸಿನಲ್ಲಿ ಆತನಿಗೆ ಪರ್ಮನೆಂಟಾದ ಜಾಗವೊಂದನ್ನು ಕಲ್ಪಿಸುತ್ತಾರೆ. ಹೀಗೆ ಅಡ್ರೆಸ್‌ಲೆಸ್ ಆಗಿ ಬಂದು, ಎಲ್ಲರನ್ನೂ ಚಕಿತಗೊಳಿಸುವ ರೀತಿಯಲ್ಲಿ ಬದಲಾಗುವ 'ಬ್ರಿಜೇಶ್ ಪಟೇಲ್' ಪಾತ್ರದಲ್ಲಿ ಕಾಣಿಸಿಕೊಂಡಿರುವ ನಟ ಬೇರೆ ಯಾರೂ ಅಲ್ಲ, ಅದು ಅಚ್ಯುತ. 'ನಾನು.. ನನ್ನ ಕನಸು' ಚಿತ್ರದಲ್ಲಿ ಪ್ರಕಾಶ್ ರೈನಂತಹ ನಟನನ್ನೇ ಮೀರಿಸುವಷ್ಟರ ಮಟ್ಟಿಗೆ ಅಚ್ಯುತ ನಟಿಸಿದ್ದಾರೆಂದರೆ ಅದು ಸಾಮಾನ್ಯ ವಿಷಯವಲ್ಲ.



ಕಳೆದ ಮೂರ್ನಾಲ್ಕು ವರ್ಷಗಳಿಂದ ಬಂದಿರುವ ಸಿನಿಮಾಗಳಲ್ಲಿ, ಧಾರಾವಾಹಿಗಳಲ್ಲಿ ನಟಿಸಿರುವ ಅಚ್ಯುತರ ಪರಿಚಯ ವೀಕ್ಷಕರಿಗಿದ್ದೇ ಇರುತ್ತದೆ.

ನಿಯಮವಾಗಿ ಅಭಿನಯವನ್ನು ಕಲಿತು, ರಂಗಭೂಮಿಯ ಹಿನ್ನೆಲೆಯಿಂದ ಬಂದ ಕೆಲವೇ ನಟರಲ್ಲಿ ಅಚ್ಯುತ ಕೂಡಾ ಒಬ್ಬರು. ತಿಪಟೂರಿನ ಮೂಲದವರಾದ ಅಚ್ಯುತ ಶಾಲಾದಿನಗಳಲ್ಲೇ, ರಂಗಭೂಮಿ ನಟನೆಯ ಗೀಳು ಹತ್ತಿಸಿಕೊಂಡವರು. ಈತ ಶಾಲಾ ವಿದ್ಯಾರ್ಥಿಯಾಗಿದ್ದಾಗ ಸಾಹಿತಿ ನಟರಾಜ್ ಹುಳಿಯಾರ್, ರಂಗಭೂಮಿ ನಿರ್ದೇಶಕ ನಟರಾಜ್ ಹೊನ್ನವಳ್ಳಿ, ಮಂಜುನಾಥ್ ಮುಂತಾದವರೆಲ್ಲ ಕಾಲೇಜ್ ಲೆವೆಲ್ಲಿನಲ್ಲಿದ್ದರಂತೆ; ಆದರೆ ಅವರೆಲ್ಲಾ ಈ ಶಾಲಾ ಬಾಲಕ ಅಚ್ಯುತನಿಗೆ ಕ್ಲೋಸ್ ಫ್ರೆಂಡ್ಸ್.

ಒಮ್ಮೆ ಪಿ. ಲಂಕೇಶರು ಪ್ರಗತಿರಂಗದ ಸಭೆಗಾಗಿ ತಿಪಟೂರಿಗೆ ಹೋಗಿದ್ದರು. ಆಗ ಅಚ್ಯುತನಿಗೆ "ಲಂಕೇಶರನ್ನು ರಿಯಲ್ ಆಗಿ ನೋಡಬೇಕು' ಎಂಬ ಹಂಬಲ. ಒಂದು ಕಡೆ ಅಚ್ಯುತ, ಮತ್ತೊಂದು ಕಡೆ ಹುಳಿಯಾರ್ ಬಗ್ಗೀಬಗ್ಗೀ ಲಂಕೇಶರನ್ನು ಕದ್ದು ನೋಡುತ್ತಿದ್ದರಂತೆ. ಇವರು ಹೀಗೆ ಇಣುಕುತ್ತಿರುವುದನ್ನು ಕಂಡ ಮೇಷ್ಟ್ರು "ಏನ್ರೋ ಹಂಗೆ ನೋಡ್ತಿದೀರಾ?" ಎಂದರಂತೆ. ಕಡೆಗೆ ಇವರ ಆಸೆ ಏನೆಂಬುದನ್ನು ತಿಳಿದು "ನೋಡೋದಿದ್ರೆ ಎದ್ರುಗೇ ಬಂದ್ ನೋಡಿ. ಅದ್ಯಾಕೆ ಹಂಗೆ ಕದ್ದೂ ಮುಚ್ಚಿ ನೋಡ್ತೀರಾ" ಎಂದರಂತೆ... ಇದೇ ಅಚ್ಯುತ ಮುಂದೊಂದು ದಿನ ಲಂಕೇಶರ 'ಗುಣಮುಖ' ನಾಟಕದಲ್ಲಿ ನಟಿಸಿ, ಒಮ್ಮೆ ನಾದಿರ್ ಶಾ ಪಾತ್ರದಲ್ಲಿ ಮತ್ತೊಮ್ಮೆ ಅಲಾವಿ ಖಾನ್ ಪಾತ್ರದಲ್ಲಿ ನಟಿಸಿ ಎಲ್ಲರಿಂದ ಸೈ ಅನ್ನಿಸಿಕೊಂಡಿದ್ದರು.

ಹೀಗೆ ತಿಪಟೂರಿನ ಪ್ರಗತಿಪರ, 'ಮಾನವತಾವಾದಿ ಒಕ್ಕೂಟ', ಡಿಎಸ್‌ಎಸ್, ರೈತಸಂಘಗಳ ಮೀಟಿಂಗುಗಳು, ಅದೂ ಇದು ಎಂದು ಓಡಾಡಿಕೊಂಡಿದ್ದ ಅಚ್ಯುತ ನಂತರ ಬಿಕಾಂಅನ್ನು ಅರ್ಧಕ್ಕೆ ಬಿಟ್ಟು 'ನಟನೆಯಲ್ಲಿ ಏನಾದರೂ ಕಲಿಯಲೇಬೇಕು' ಎಂದು ತೀರ್ಮಾನಿಸಿ ಹೆಗ್ಗೋಡಿನ ನೀನಾಸಂ ಸೇರಿದ್ದರು. ಅಲ್ಲಿ ಐದು ವರ್ಷ ಅಭಿನಯ ಕಲಿತು, ಸಂಚಾರಿ ತಂಡದಲ್ಲಿ ಊರೂರು ತಿರುಗಿ ನಾಟಕವನ್ನಾಡಿದ ಅಚ್ಯುತ ಮೊದಲ ಬಾರಿಗೆ ಕ್ಯಾಮೆರಾ ಮುಂದೆ ಬಂದಿದ್ದು ಕಾಸರವಳ್ಳಿಯವರ 'ಗೃಹಭಂಗ' ಧಾರಾವಾಹಿಯಲ್ಲಿ. 'ಗೃಹಭಂಗ'ದಲ್ಲಿ ಸೋಂಭೇರಿ ಚೆನ್ನಿಗರಾಯನ ಪಾತ್ರ ಅಚ್ಯುತ ಅವರಿಗೆ ಕಿರುತೆರೆಯಲ್ಲಿ ಭದ್ರಸ್ಥಾನವನ್ನು ಒದಗಿಸಿತು. ನಂತರ 'ಮೂಡಲ ಮನೆ', 'ಪ್ರೀತಿ ಇಲ್ಲದ ಮೇಲೆ', 'ಮಂಥನ' ಸೇರಿದಂತೆ ಸುಮಾರು ಐದು ವರ್ಷಗಳ ಕಾಲ ಅಚ್ಯುತ ಕಿರುತೆರೆಯಲ್ಲಿ ಬ್ಯುಸೀ ನಟನಾಗಿಹೋದರು.

ಆದರೆ ಎಲ್ಲ ಧಾರಾವಾಹಿಗಳಲ್ಲಿ ಒಂದೇ ರೀತಿಯ ಅಭಿನಯ, ಪಾತ್ರಗಳು, ಏಕತಾನತೆ, ಉದ್ದುದ್ದದ ಡೈಲಾಗುಗಳು ಅಚ್ಯುತರಿಗೆ ಬೋರ್ ಹೊಡೆಸಿ ಇದರ ಸಹವಾಸ ಸಾಕಪ್ಪ ಎನ್ನಿಸಿತಂತೆ. ಅಷ್ಟೇ ಅಲ್ಲ, "ಕಿರುತೆರೆ ನಟರ ಮಾಧ್ಯಮವಲ್ಲ, ಹೆಚ್ಚು ದಿನ ಆ ಕ್ಷೇತ್ರದಲ್ಲಿದ್ದರೆ ಎಂಥ ನಟನೂ ಎಕ್ಸಾಸ್ಟ್ ಆಗಿಬಿಡುತ್ತಾನೆ. ಅದೇನಿದ್ದರೂ ತಿಂಗಳ ಸಂಬಳಕ್ಕಾಗಿ ಮಾಡಬೇಕಿರುವ ಅನಿವಾರ್ಯ ಕೆಲಸವಷ್ಟೇ. ರಂಗಭೂಮಿ ಮತ್ತು ಸಿನಿಮಾ ನಟನೆಯನ್ನು ಇಷ್ಟಪಟ್ಟು ಮಾಡಿದರೆ, ಕಿರುತೆರೆ ನಟನೆಯನ್ನು ಕಷ್ಟಪಟ್ಟು ಮಾಡಬೇಕು" ಎಂಬುದು ಅಚ್ಯುತರ ಅನಿಸಿಕೆ...

ಈ ಮಧ್ಯೆ ಅಚ್ಯುತ ಸೀರಿಯಲ್‌ನಲ್ಲಿ ಪೇಷೆಂಟು ಪಾತ್ರದಲ್ಲಿ ಕಾಣಿಸಿಕೊಂಡರೆ, 76ರ ಅವರ ವೃದ್ಧ ತಾಯಿ 'ನನ್ನ ಮಗನಿಗೆ ನಿಜಕ್ಕೂ ಆರೋಗ್ಯ ಕೆಟ್ಟಿದೆ' ಎಂದು ಭ್ರಮಿಸುತ್ತಿದ್ದರಂತೆ. ಆದ್ದರಿಂದ "ಮೆಗಾಧಾರಾವಾಹಿ ಮಾನಸಿಕ ಆರೋಗ್ಯಕ್ಕೆ ಹಾನಿಕರ!" ಎಂದು ಅಚ್ಯುತ ಹೊಸ ಸ್ಲೋಗನ್ ನೀಡುತ್ತಾರೆ...

ಕಿರುತೆರೆ ನಟನೆಯೊಂದಿಗೇ ಸಿನಿಮಾಕ್ಕೂ ಎಂಟ್ರಿ ನೀಡಿದ ಅಚ್ಯುತ ನಟಿಸಿದ ಮೊದಲ ಸಿನಿಮಾ ಬಿ.ಎಸ್. ಲಿಂಗದೇವರು ನಿರ್ದೇಶನದ 'ಮೌನಿ'. ನಂತರ ರಾಮದಾಸನಾಯ್ಡು ಅವರ 'ಪ್ರವಾಹ', 'ಬೇಲಿ ಮತ್ತು ಹೊಲ' ಮುಂತಾದ ಕಲಾತ್ಮಕ ಸಿನಿಮಾಗಳಲ್ಲಿ ಮತ್ತು ಎನ್.ಎಸ್.ಶಂಕರ್ ಅವರ ಕಿರುಚಿತ್ರಗಳಲ್ಲಿ ಅಚ್ಯುತ ಅಭಿನಯಿಸಿದರು.

ಹೀಗೆ ರಂಗಭೂಮಿ, ಕಿರುತೆರೆ ಮತ್ತು ಕಲಾತ್ಮಕ ಸಿನಿಮಾಗಳಿಗೇ ಸೀಮಿತವಾಗಿದ್ದ ಅಚ್ಯುತರಿಗೆ 'ಆ ದಿನಗಳು' ಚಿತ್ರದಲ್ಲಿನ ಆಯಿಲ್ ಕುಮಾರ್‌ನ ಪಾತ್ರ ಕಮರ್ಷಿಯಲ್ ಸಿನಿಮಾಗಳತ್ತಲೂ ಮುಖಮಾಡುವಂತೆ ಮಾಡಿತು. ನಂತರ 'ಮೊಗ್ಗಿನ ಮನಸು', 'ಮನಸಾರೆ', 'ಜೋಷ್', 'ತಾಕತ್', 'ರಾಮ್'ನಿಂದ ಮೊನ್ನೆಮೊನ್ನೆಯಷ್ಟೇ ಬಂದ 'ಪೃಥ್ವಿ'ತನಕ ಕೇವಲ ಎರಡು ವರ್ಷದಲ್ಲಿ ನಲವತ್ತಕ್ಕೂ ಹೆಚ್ಚು ಸಿನಿಮಾಗಳಲ್ಲಿ ಅವರು ನಟಿಸಿದ್ದಾರೆ.

"ಸಿನಿಮಾದಲ್ಲಿ ಸೂಕ್ಷ್ಮ ನಿರ್ದೇಶಕರೊಂದಿಗೆ ಕೆಲಸ ಮಾಡುವುದು ಬಹಳ ಸುಲಭ... ಆದರೆ ಏನೂ ಗೊತ್ತಿಲ್ಲದ ಅರೆಬರೆ ಡೈರೆಕ್ಟರ್‌ಗಳೊಟ್ಟಿಗೆ ಕೆಲಸ ಮಾಡುವುದು ಮಾತ್ರ ಯಾತನಾಮಯ" ಎಂದು ಅಚ್ಯುತ ನಿಟ್ಟುಸಿರು ಬಿಡುತ್ತಾರೆ.

ಪ್ರಕಾಶ್ ರೈ ಅವರ ವರ್ಕಿಂಗ್ ಸ್ಟೈಲನ್ನು ಮೆಚ್ಚಿರುವ ಅಚ್ಯುತ "ಪ್ರಕಾಶ್ ಅವರಿಗೆ ತಮ್ಮ ಸಿನಿಮಾ ಹೀಗೇ ಬರಬೇಕು ಎಂಬ ಖಚಿತತೆ ಇತ್ತು. ಎಲ್ಲೂ ಅವರು ಗೊಂದಲಗೊಳ್ಳಲೇ ಇಲ್ಲ. ನಮ್ಮನ್ನು ಬರೀ ನಟರಾಗಿ ದುಡಿಸಿಕೊಳ್ಳದೇ ಸಿನಿಮಾ ನಿರ್ಮಾಣದ ಪ್ರತಿ ಹಂತದಲ್ಲೂ ತೊಡಗುವಂತೆ ಪ್ರೇರೇಪಿಸಿದರು. ಹೀಗಾಗಿ 'ಕನಸು' ಔಟ್‌ಪುಟ್ ಅಂದುಕೊಂಡಂತೇ ನನಸಾಗಿದೆ" ಎಂದು ಪ್ರಕಾಶ್ ರೈಗೆ ಪರಾಕು ಹೇಳುತ್ತಾರೆ.

"ಭಾಷೆ ಯಾವುದಾದರೂ ಸರಿ, ಒಳ್ಳೆ ಸಿನಿಮಾ-ಪಾತ್ರಗಳಲ್ಲಿ ನಟಿಸುವುದೇ ನನ್ನ ಕನಸು. ನಟನೆ ಬಿಟ್ಟು ನನಗೇನೂ ಬರೋದೇ ಇಲ್ಲ. ಸಿನಿಮಾದಲ್ಲಿ ಎಷ್ಟೇ ಮುಂದುವರೆದರೂ ಸಹ ತಮ್ಮ ತಂಡದ ಆಸೆಯಂತೆ ರಂಗಭೂಮಿ ರೆಪರ್ಟರಿಯೊಂದನ್ನು ರೂಪಿಸುವುದೇ ಮೂಲ ಉದ್ದೇಶ" ಎಂದು ಹೇಳುವ ಅಚ್ಯುತರ ಮಾತಿನಲ್ಲಿ ನೈಜಕಲಾವಿದನೊಬ್ಬ ಎದ್ದುಕಾಣುತ್ತಾನೆ....

• ಅರುಣ್.ಜಿ
arunodayagc@gmail.com

Regd.No.KA/RNP/BGS/2036/2008-10 Posted at : GPO, Bangalore-01. R B P LANKESH, Kannada Weekly Price Rs. 12/- 02 -06-2010 RNI No. KARKAN2003/14040



ಹಂಸ ಹೊಸ ಸಾಹಸ

ಹಂಸಲೇಖ ಕೊನೆಗೂ ಮಾತುಕೊಟ್ಟಂತೆ ನಡೆದುಕೊಂಡಿದ್ದಾರೆ. "ನಾನು ನನ್ನ ಸಂಸ್ಥೆಯಿಂದ ಚಿತ್ರ ನಿರ್ಮಿಸಿದಾಗ ಹೀರೋಗಳಿಗೆ ದೊಗ್ಗು ಸಲಾಮು ಹಾಕುವುದಿಲ್ಲ, ಹೊಸಬರನ್ನೇ ಹಾಕಿಕೊಳ್ಳುತ್ತೇನೆ" ಎಂದು ಅವರು ಹೇಳಿದ್ದರು. ಇದೀಗ ಆ ಮಾತನ್ನು 'ಹಂಸ್' ನಿಜ ಮಾಡಿದ್ದಾರೆ. ಇವರ ನಿರ್ಮಾಣದ ಚಿತ್ರದ ಹೆಸರು 'ಭಗವತಿ ಕಾಡು'. ಈ ಚಿತ್ರವನ್ನು ಶಿವರುದ್ರಯ್ಯ ನಿರ್ದೇಶಿಸುತ್ತಿದ್ದಾರೆ. ಸಂಭಾಷಣೆ ಜವಾಬ್ದಾರಿ ಲಕ್ಷ್ಮೀಪತಿ ಕೋಲಾರ ಅವರದು.

ಈ ಚಿತ್ರಕ್ಕೆ ತಮ್ಮ ಶಾಲೆಯ ವಿದ್ಯಾರ್ಥಿಗಳನ್ನೇ ಹಂಸಲೇಖ ಆಯ್ಕೆ ಮಾಡಿಕೊಂಡಿರುವುದು ಮೆಚ್ಚಬೇಕಾದದ್ದೇ. ಆದರೆ ಹಂಸಲೇಖರಂತಹ ದೈತ್ಯಪ್ರತಿಭೆಯಿಂದ ಉದ್ಯಮ ಮತ್ತು ಪ್ರೇಕ್ಷಕ ನಿರೀಕ್ಷಿಸುತ್ತಿರುವುದೇ ಬೇರೆ. ರವಿಚಂದ್ರನ್‌ನಂತಹ ಕನಸುಗಾರನಿಗೆ ಸಾಥಿಯಾಗಿ ಕೆಲಸ ಮಾಡಿದ ಹಂಸಲೇಖ ಕನ್ನಡ ಚಿತ್ರರಂಗ ಕಂಡ ಅಮೂಲ್ಯ ಪ್ರತಿಭೆಯೆಂಬುದರಲ್ಲಿ ಸಂಶಯವೇ ಇಲ್ಲ. ಹಂಸ್ ಮನಸು ಮಾಡಿದರೆ ಇಡೀ ಭಾರತೀಯ ಚಿತ್ರರಂಗವೇ ತನ್ನತ್ತ ತಿರುಗಿ ನೋಡುವಷ್ಟು ಉತ್ತಮ ಚಿತ್ರ ತೆಗೆಯುವ ಶಕ್ತಿ ಮತ್ತು ಪ್ರತಿಭೆ ಅವರಲ್ಲಿದೆ. ಹಾಗೆ ನೋಡಿದರೆ ಅಂತಹ ಚಿತ್ರ ನಿರ್ಮಿಸುವುದು, ಅದನ್ನು ನಿರ್ದೇಶಿಸುವುದೇ ಅವರ ಜೀವನದ ಮಹತ್ವಾಕಾಂಕ್ಷೆಯಾಗಿತ್ತು. ಈಗ ಅಂತಹ ಕನಸುಗಳನ್ನು ಬದಿಗಿರಿಸಿ ಹಂಸಲೇಖ ಚಿಕ್ಕಚಿಕ್ಕ ಕನಸುಗಳಲ್ಲೇ ತೃಪ್ತಿಪಡಲು ಹೊರಟಿರುವುದು ಆಶ್ಚರ್ಯದ ವಿಷಯ...

ಹಂಸಲೇಖ ಮೊದಲ ನಿರ್ಮಾಣದ 'ಸುಗ್ಗಿ' ಚಿತ್ರದಲ್ಲಿ ತಮ್ಮ ಮಗ ಅಲಂಕಾರ್‌ನನ್ನು ನಾಯಕನನ್ನಾಗಿ ಮಾಡಿ ಮುಗ್ಗರಿಸಿದ್ದರು. ಚಿತ್ರ ಸಂಪೂರ್ಣಗೊಂಡರೂ ಅದು ಬಿಡುಗಡೆಯ ಭಾಗ್ಯ ಕಾಣಲೇ ಇಲ್ಲ. ಅನಂತರ 'ನೆನಪಿರಲಿ' ಚಿತ್ರದ ನಿರ್ದೇಶಕ ರತ್ನಜಾ ಚಿತ್ರವೊಂದನ್ನು ಹಂಸ್‌ಗಾಗಿ ನಿರ್ದೇಶಿಸುವುದು ಬಹುತೇಕ ಗ್ಯಾರಂಟಿಯಾಗಿತ್ತು. ಅದು ಆರಂಭವಾಗಲೇ ಇಲ್ಲ. ಅದೇ ಸಂದರ್ಭದಲ್ಲಿ ಹಂಸ್ ಶಿವರಾಜ್‌ಕುಮಾರ್ ಮತ್ತು ರಮ್ಯಾಗೆ 'ಬಾಗಿನ' ಎಂಬ ಚಿತ್ರಕ್ಕಾಗಿ ಅಡ್ವಾನ್ಸ್ ಕೊಟ್ಟಿದ್ದು ಇಡೀ ಗಾಂಧಿನಗರದಲ್ಲಿ ಸುದ್ದಿಯಾಗಿತ್ತು. ಅದು ಯಾಕೋ ಆರಂಭದಲ್ಲೇ ಮುಗ್ಗರಿಸಿತ್ತು. ಈಗ ಅದನ್ನೆಲ್ಲ ಮರೆತು ಹಂಸಲೇಖ ಹೊಸ ಕಲಾವಿದರ ಮುಖಾಂತರ ಹೊಸ ಚಿತ್ರ ಮಾಡಲು ಹೊರಟಿರುವುದು ಮತ್ತೊಂದು ಸಾಹಸ ಎನ್ನೋಣ. ಅದೇನೆ ಇರಲಿ, ಹಂಸ್ ಬತ್ತಳಿಕೆಯಲ್ಲಿ ಯಾವ್ಯಾವ ಅಸ್ತ್ರಗಳಿರುತ್ತವೆ ಎಂದು ಯಾರಿಗೂ ಗೊತ್ತಿರುವುದಿಲ್ಲ. ಹೀಗಾಗಿ ಈ ಚಿತ್ರದ ಬಗ್ಗೆ ದೊಡ್ಡ ನಿರೀಕ್ಷೆ ಇಟ್ಟರೂ ತಪ್ಪೇನು ಇಲ್ಲ...



ಇದು ಕನ್ನಡ ಚಿತ್ರ!

ಎಂ.ಎಸ್.ಸತ್ಯು ನಿರ್ದೇಶನದ 'ಇಜ್ಜೋಡು' ಈಗ ಥಿಯೇಟರ್‌ನಿಂದ ಒಂದೇ ವಾರಕ್ಕೆ ಎತ್ತಂಗಡಿಯಾಗಿದೆ. ಅದೇನೂ ಬೆಚ್ಚಿಬೀಳುವಂತಹ ವಿಷಯವೇನೂ ಅಲ್ಲ; ಆದರೆ ಈ ಚಿತ್ರವನ್ನು ರಿಲಯನ್ಸ್ ಸಂಸ್ಥೆ ನಿರ್ಮಿಸಿದ್ದರೂ ಇದನ್ನು ಕರ್ನಾಟಕದಾದ್ಯಂತ ಬಿಡುಗಡೆ ಮಾಡಿಲ್ಲದಿರುವುದು ವಿಶೇಷ. ಬೆಂಗಳೂರಿನಲ್ಲಿ ಮಾತ್ರ ಈ ಚಿತ್ರ ಬಿಡುಗಡೆಯಾಗಿತ್ತು. ರಾಜ್ಯದ ಉಳಿದ ಜಿಲ್ಲಾ ಕೇಂದ್ರಗಳಲ್ಲಿ ರಿಲಯನ್ಸ್ ಸಂಸ್ಥೆಯಾಗಲಿ, ಸತ್ಯುವಾಗಲಿ ಚಿತ್ರವನ್ನು ಬಿಡುಗಡೆ ಮಾಡುವ ಉಸಾಬರಿಗೆ ಕೈಹಾಕಲೇ ಇಲ್ಲ. ಹೀಗಾಗಿ ಈ ಚಿತ್ರ ಒಂದೇ ವಾರಕ್ಕೆ ಬೆಂಗಳೂರಿನ ಥಿಯೇಟರ್‌ನಿಂದ ಎತ್ತಂಗಡಿಯಾದಾಗಲೂ ಚಿತ್ರ ತಂಡದವರಿಗೆ ಬೇಸರವಾಗಲಿಲ್ಲ.

ಕೇವಲ ಒಂದೆರಡು ಥಿಯೇಟರ್‌ಗಳಲ್ಲಿ ಒಂದು ವಾರಕ್ಕಾಗಿ ಚಿತ್ರವನ್ನು ನಿರ್ಮಿಸುವ ರಿಲಯನ್ಸ್ ಸಂಸ್ಥೆಯ ಧೋರಣೆಯೇ ಅರ್ಥವಾಗುತ್ತಿಲ್ಲ. ದೇಶದ ಪ್ರತಿಷ್ಠಿತ ನಿರ್ಮಾಣ ಸಂಸ್ಥೆಯಾದ ರಿಲಯನ್ಸ್ ಸಂಸ್ಥೆ ಗಾಂಧಿನಗರಕ್ಕೆ ಕಾಲಿಟ್ಟಾಗ ಎಲ್ಲರೂ ಸಂತೋಷ ಸಂಭ್ರಮ ಪಟ್ಟಿದ್ದರು. ಆದರೆ ಈಗ ರಿಲಯನ್ಸ್ ಎಂದರೆ ಗಾಂಧಿನಗರಿಗಳು ತಲೆಕೆರೆದುಕೊಳ್ಳುತ್ತಿದ್ದಾರೆ.

ಅಂದರೆ ರಿಲಯನ್ಸ್ ಸಂಸ್ಥೆಯಾಗಲಿ, ಎಂ.ಎಸ್.ಸತ್ಯುವಾಗಲಿ ಈ ಚಿತ್ರವನ್ನು ಸಾರ್ವಜನಿಕರಿಗಾಗಿ ಮಾಡಿಲ್ಲ; ತಮಗಾಗಿ ಮಾಡಿಕೊಂಡಿದ್ದಾರೆ ಎಂದಾಯಿತು. ಇಂತಹ ಚಿತ್ರಗಳಿಂದ ಕನ್ನಡ ಚಿತ್ರರಂಗ ಉದ್ಧಾರವಾಗಲು ಸಾಧ್ಯವೇ?



ಮತ್ತೆ ಬಂದ ಕುಳ್ಳ

ದ್ವಾರಕೀಶ್ ಆರು ವರ್ಷಗಳ ಸುದೀರ್ಘ ಅಜ್ಞಾತವಾಸದ ನಂತರ ಇದೀಗ ಮತ್ತೆ ನಿರ್ಮಾಪಕರಾಗುತ್ತಿದ್ದಾರೆ. ಅವರ ನಿರ್ಮಾಣದ ಚಿತ್ರಕ್ಕೆ ಸುದೀಪ್ ನಾಯಕ. ತಮಿಳಿನ ನಿರ್ದೇಶಕ ರವಿಕುಮಾರ್ ಅವರ ಸಹಾಯಕರಲ್ಲೊಬ್ಬರಾದ ವಿ.ಕುಮಾರ್ ಎಂಬುವವರನ್ನು ಈ ಚಿತ್ರದ ಮೂಲಕ ದ್ವಾರಕೀಶ್ ಸ್ವತಂತ್ರ ನಿರ್ದೇಶಕರನ್ನಾಗಿಸುತ್ತಿದ್ದಾರೆ.

ನೂರಾರು ಕನ್ನಡ ಕಲಾವಿದರಿಗೆ ಅವಕಾಶ ನೀಡಿದ ದ್ವಾರಕೀಶ್ ಒಬ್ಬ ತಮಿಳು ನಿರ್ದೇಶಕನಿಗೆ ಅವಕಾಶ ಕೊಟ್ಟರೆ ತಪ್ಪೇನೂ ಇಲ್ಲವೆಂದು ಕನ್ನಡಿಗರು ಈಗ ಭಾವಿಸಬೇಕಾಗಿದೆ. ಮುಂದಿನ ತಿಂಗಳು ಹದಿನಾಲ್ಕರಂದು ಚಿತ್ರ ಸೆಟ್ಟೇರಲಿದೆ.

'ಆಪ್ತಮಿತ್ರ' ಚಿತ್ರ ನಿರ್ಮಿಸಿದ ನಂತರ ಸಾಲಗಾರ ದ್ವಾರಕೀಶ್ ಸಾಲದಿಂದ ವಿಮುಕ್ತಿ ಪಡೆದು ಮತ್ತೆ ಹಿಂದಿನ ವೈಭವದ ಜೀವನ ನಡೆಸಲು ಪ್ರಾರಂಭಿಸಿದರು. ಹೆಚ್‌ಎಸ್‌ಆರ್ ಲೇಔಟ್‌ನಲ್ಲಿ ಒಂದು ಭಾರೀ ಭವ್ಯ ಬಂಗಲೆ ನಿರ್ಮಿಸಿ ಅದರಲ್ಲಿ ವಾಸವಾಗಿದ್ದ ದ್ವಾರಕೀಶ್ ಅನಂತರ ಚಿತ್ರ ನಿರ್ಮಾಣಕ್ಕೆ ಕೈ ಹಾಕಲೇ ಇಲ್ಲ. ಸಿನಿಮಾದ ಸಭೆ ಸಮಾರಂಭಗಳಲ್ಲಿ ಹೊಸಬರಿಗೆ ಆಗಾಗ ಹಿತೋಪದೇಶ ನೀಡುವುದಷ್ಟೇ ಅವರ ಆರು ವರ್ಷಗಳ ಪ್ರಮುಖ ಸಾಧನೆ. ಆದರೂ ಚಿತ್ರರಂಗದಲ್ಲೇ ಸಾಕಷ್ಟು ಏಳುಬೀಳುಗಳನ್ನು ಕಂಡ ಅವರ ಮನಸ್ಸು ಈಗ ಮತ್ತೆ ಚಿತ್ರ ನಿರ್ಮಾಣದ ಕಡೆಗೆ ವಾಲಿದ್ದು ವಿಶೇಷವೇನೂ ಅಲ್ಲ. ದ್ವಾರಕೀಶ್ ಮತ್ತೆ 'ಆಪ್ತಮಿತ್ರ'ದ ತರಹ ಬಂಪರ್ ಹೊಡೆಯುತ್ತಾರೆಯೋ? ನೋಡಬೇಕು.

ರತ್ನನ 'ಮದುವೆ' ಕ್ಯಾನ್ಸಲ್!



'ನೆನಪಿರಲಿ', 'ಹೊಂಗನಸು' ಮತ್ತು 'ಪ್ರೇಮಿಸಂ' ಎಂಬ ಮೂರು ಸಿನಿಮಾಗಳನ್ನು ನಿರ್ದೇಶಿಸಿರುವ ರತ್ನಜಾ ಮದುವೆ ಒಪ್ಪಂದ ಮುರಿದುಬಿದ್ದಿದೆ.

ಒಂದು ವರ್ಷದ ಹಿಂದೆಯೇ ಎಡಿಟರ್ ಕೆಂಪರಾಜು ಅವರ ನಾದಿನಿಯೊಂದಿಗೆ ರತ್ನಜಾ ಅವರ ಎಂಗೇಜ್‌ಮೆಂಟ್ ನೆರವೇರಿತ್ತು. ನಿಶ್ಚಿತಾರ್ಥ ಮುಗಿದ ಒಂದೆರಡು ತಿಂಗಳ ನಂತರ ಮದುವೆ ಪ್ರಕ್ರಿಯೆ ನಡೆಯುವುದು ವಾಡಿಕೆ. ಆದರೆ ರತ್ನಜಾ ಮಾತ್ರ "ಹೊಂಗನಸು ಸಿನಿಮಾ ಮುಗಿಯಲಿ" ಎಂದು ನೆಪ ಹೇಳಿಕೊಂಡು ತಿಂಗಳುಗಳ ಕಾಲ ಮುಂದಕ್ಕೆ ಹಾಕಿದರಂತೆ. ನಂತರ 'ಪ್ರೇಮಿಸಂ' ಬಿಡುಗಡೆಯಾಗಲಿ ಎಂದು ನೆಪ ಶುರು ಮಾಡಿದರಂತೆ. 'ಪ್ರೇಮಿಸಂ' ಬಿಡುಗಡೆಯಾಗಿ ಒಂದು ವಾರದ ನಂತರ ಡಬ್ಬಕ್ಕೆ ವಾಪಸ್ ಹೋದ ನಂತರವೂ ಅವರು ಮದುವೆಯಾಗುವ ಮನಸು ಮಾಡಲಿಲ್ಲವಂತೆ.

ಎಂಗೇಜ್‌ಮೆಂಟ್ ಮುಗಿಸಿ ವರ್ಷ ಉರುಳಿದರೂ ಇನ್ನೂ ಮಾಂಗಲ್ಯಧಾರಣೆಯಾಗಲಿಲ್ಲ ಎಂದರೆ, ಆ ಹೆಣ್ಣು ಮಗಳು ಎಷ್ಟೂ ಅಂತ ಕಾದಾಳು? ಹೀಗೆ ಇನ್ನೂ ಒಂದಿಷ್ಟು ದಿನ ರತ್ನಜಾ ಮದುವೆಯನ್ನು ಮುಂದೆ ಹಾಕಿ ಕಡೆಗೊಂದು ದಿನ ಕೈಬಿಟ್ಟರೆ, ಆ ಹುಡುಗಿಗೆ ಬೇರೊಬ್ಬ ಹುಡುಗನನ್ನು ತರುವುದು ಕಷ್ಟಸಾಧ್ಯ. ಹೀಗಾಗಿ "ನೀನು ನಮ್ಮ ಹುಡುಗಿಯನ್ನು ಮದುವೆಯಾಗುವುದೇ ಬೇಡ" ಎಂದು ಕೆಂಪರಾಜು ಮನೆಯವರು ತೀರ್ಮಾನಿಸಿ ಹುಡುಗಿಗೆ ರತ್ನಜಾ ಕೊಟ್ಟಿದ್ದ ಉಂಗುರವನ್ನು ವಾಪಾಸು ಕೊಟ್ಟಿದ್ದಾರೆ.

ಈಗ "ರತ್ನಜಾ ಹೀಗೆ ಮದುವೆಯನ್ನು ಮುಂದು ಹಾಕುವುದಕ್ಕೆ ಬರೀ 'ಪ್ರೇಮಿಸಂ' ಮಾತ್ರ ಕಾರಣವಲ್ಲ, ಈತನಿಗೆ ಚಿತ್ರ ನಟಿಯೊಬ್ಬಳೊಂದಿಗೆ ಅಫೇರೂ ಇದೆ..." ಎಂದು ಗಾಂಧಿನಗರದ ಜನ ಗುಲ್ಲೆಬ್ಬಿಸುತ್ತಿದ್ದಾರೆ... ಅದು ಎಷ್ಟು ನಿಜವೋ? ರತ್ನಮಹಾರಾಜನೇ ಬಲ್ಲ.



PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar, Bangalore-44